24 May 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

**ಭಾವನಾಂತರಂಗ**

ಬುದ್ಧಿ ಇದ್ದವನು ಬದುಕನ್ನು ಗೆಲ್ಲುತ್ತಾನೆ, ಗುಣ ಇದ್ದವನು ಮನಸ್ಸನ್ನು ಗೆಲ್ಲುತ್ತಾನೆ, ಆದರೆ ತಾಳ್ಮೆ ಇದ್ದವನು ಜಗತ್ತನ್ನೇ ಗೆಲ್ಲುತ್ತಾನೆ!
» ಸ್ನೇಹಾ ಆನಂದ್


ಮೇ 28ರಂದು ಬಕ್ರೀದ್ ಆಚರಣೆ ಹಿನ್ನೆಲೆ ಸೌಹಾರ್ದ ಸಭೆ ಪುಟ ಸಂ. 3


ಮಂಚನಬೆಲೆ ಜಲಾಯಶದ ಎಡದಂಡೆ ನಾಲೆಯಲ್ಲಿ ನೀರು ಹರಿವು ಆರಂಭ ಪುಟ ಸಂ. 3


ರಾಜೀವ್ ವಿವಿಗೆ ಭೂಮಿ ಕೊಟ್ಟವರು ರೈತರಲ್ಲವೇ? ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 179 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಅಳಿವಿನಂಚಿನ ಕನ್ನಡ ಶಾಲೆ ಉಳಿಸಿ

## ಶಿಕ್ಷಣ ಸಚಿವ ಮಧು ಬಂಗಾರಪ್ಪಗೆ ದೇವನೂರ ಮಹದೇವ ಸಲಹೆ

**ಮೈಸೂರು:** ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಅರಂಭದ ಜೊತೆಗೆ ಅಳಿವಿನಂಚಿನಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಬೇಕು ಎಂದು ಹಿರಿಯ ಸಾಹಿತಿ ದೇವನೂರ ಮಹಾದೇವ ಸಲಹೆ ನೀಡಿದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಕುವೆಂಪು ನಗರದಲ್ಲಿರುವ ದೇವನೂರ ಮಹಾದೇವ ಅವರ ನಿವಾಸಕ್ಕೆ ಶನಿವಾರ ಭೇಟಿ ನೀಡಿ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭಕ್ಕೂ ಮುನ್ನ ಸಾಧಕ–ಬಾಧಕಗಳ ಕುರಿತು ಚರ್ಚೆ ನಡೆಸಿದ ವೇಳೆ ಈ ಸಲಹೆ ನೀಡಿದರು.

ನಮ್ಮ ಮಾತೃಭಾಷೆ ಕನ್ನಡ, ಅದು ಅಳಿವಿನಂಚಿನಲ್ಲಿದ್ದು ಪ್ರಾಣಿ, ಪಕ್ಷಿಗಳ ಬಾಯಿಗೆ ಆಹಾರವಾದಂತಾಗಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಶಿಕ್ಷಣ ಮಾಧ್ಯಮವನ್ನು ಉಳಿಸಬೇಕಿರುವುದು ಎಲ್ಲರ ಜವಾಬ್ದಾರಿ. ಹಾಗಾಗಿ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭದ ಜೊತೆಗೆ ಎಲ್ಲಿ ಮಕ್ಕಳ ಸಂಖ್ಯೆ ಹೆಚ್ಚು ಇರುತ್ತದೊ ಅಂತಹ ಕಡೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಕೊಡಬೇಕಿದೆ. ಕನ್ನಡ ರಾಜ್ಯ ಭಾಷೆಯೂ ಆಗಿರುವುದರಿಂದ ಕನ್ನಡ ಮಾಧ್ಯಮದಲ್ಲಿ ಓದಿದ ಮಕ್ಕಳಿಗೆ ಗ್ರಾಮೀಣ ಕೃಪಾಂಕ ಮಾದರಿಯಲ್ಲಿ ಶೇ.10 ಕೃಪಾಂಕ ನೀಡಿದರೆ ಅಳಿವಿನ ಅಂಚಿನಲ್ಲಿರುವ ಕನ್ನಡವನ್ನು ಸಂರಕ್ಷಿಸಿದಂತಾಗುತ್ತದೆ ಎಂದು ಹೇಳಿದರು.

ಕೆಲವು ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿ ಒಬ್ಬ ಶಿಕ್ಷಕ, ಇಬ್ಬರು ಅಡುಗೆಯವರು, ಇಬ್ಬರು ವಿದ್ಯಾರ್ಥಿ ಒಬ್ಬ ಶಿಕ್ಷಕ ಒಬ್ಬ ಅಡುಗೆಯವರು ಇಂತಹ ವಾತಾವರಣ ನೋಡಿ ಬೇಸರ ಆಯಿತು. ಇದು ಶಿಕ್ಷಣ ಅಲ್ಲ ಇದೊಂತರ ಶಿಕ್ಷೆ. ಇಂತಹ ಸಂದರ್ಭದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭ ಉತ್ತಮ ಬೆಳವಣಿಗೆ. ಆದರೆ ಶಾಲೆಗಳನ್ನು ಮುಚ್ಚುತ್ತೇವೆ ಎಂದು ಎಲ್ಲಿಯೂ ಹೇಳಬೇಡಿ, ಒಬ್ಬ ಮಗುವೂ ಶಿಕ್ಷಣ ವಂಚಿತರಾಗಲು ಬಿಡುವುದಿಲ್ಲ ಎಂದು ಹೇಳಿ ಎಂದು ಆಗ್ರಹಿಸಿದರು.

ಮ್ಯಾಗ್ನೆಟ್ ಶಾಲೆ ಆರಂಭದ ಜೊತೆಗೆ ಮಕ್ಕಳಿಗೆ ನಾಟಕ, ಕಲೆಗಳ ಬಗ್ಗೆ ಆಸಕ್ತಿ ಮೂಡುವಂತೆ ಮಾಡಬೇಕು, ಉತ್ತಮ ನಾಟಕಗಳನ್ನು ಕಲಿಸುವ ಮೂಲಕ ಮಕ್ಕಳ ಪ್ರತಿಭೆಯನ್ನು ಹೊರಹಾಕಬೇಕು ಎಂದು ಹೇಳಿದರು.

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಲ್ಲಿ ಮಕ್ಕಳಿಗೆ ಕಲಿಕೆ ಬರಹಕ್ಕೂ ಮುನ್ನ ಸ್ಪೋಕನ್ ಇಂಗ್ಲೀಷ್ ತರಬೇತಿ ನೀಡಬೇಕು. ಇಂಗ್ಲೀಷ್ ತಜ್ಞರನ್ನು ಕರೆಸಿ ವಾರದಲ್ಲಿ ಒಂದು ದಿನ ಸ್ಪೋಕನ್ ಇಂಗ್ಲೀಷ್ ಕಲಿಸಬೇಕು. ಆಗ ಮಕ್ಕಳು ಇಂಗ್ಲೀಷ್ ಬಗ್ಗೆಯೂ ಆಸಕ್ತಿ ಹೊಂದಿ ಕಲಿಯುತ್ತಾರೆ. ಇದರಿಂದ ಮಕ್ಕಳ ಭವಿಷ್ಯ ರೂಪುಗೊಳ್ಳಲಿದೆ ಎಂದು ಹೇಳಿದರು. ಪುಟ 2ಕ್ಕೆ



### ಯಾವುದೇ ಶಾಲೆ ಮುಚ್ಚಲ್ಲ: ಸಚಿವ ಮಧು ಬಂಗಾರಪ್ಪ

**ಮೈಸೂರು:** ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭಿಸುತ್ತಿದ್ದೇವೆಯೇ ಹೊರತು ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚುವುದಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ಹಿರಿಯ ಸಾಹಿತಿ ದೇವನೂರು ಮಹಾದೇವ ಅವರ ನಿವಾಸಕ್ಕೆ ಶನಿವಾರ ತೆರಳಿ 1 ಗಂಟೆಗೂ ಹೆಚ್ಚು ಸಮಯ ಅವರೊಂದಿಗೆ ಚರ್ಚಿಸಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭದಿಂದ ಶಾಲೆಗಳನ್ನು ಮುಚ್ಚುವುದಿಲ್ಲ. ಕೆಲವರ ತಪ್ಪು ಗ್ರಹಿಕೆಯಿಂದ ವಿರೋಧ ವ್ಯಕ್ತವಾಗುತ್ತಿದೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಅವರಿಂದ ಇದಕ್ಕೆ ವಿರೋಧವಿದ್ದರೆ ಅವರ ಜೊತೆಯೂ ಮಾತನಾಡಿ ಅವರಿಗೆ ಇದರ ಉದ್ದೇಶವನ್ನು ತಿಳಿಸುತ್ತೇನೆ ಎಂದರು.

ಶಿಕ್ಷಣ ಸಚಿವನಾಗಿ ಸಾಹಿತಿ ದೇವನೂರು ಮಹದೇವ ಅವರ ಸಲಹೆ ಪಡೆಯಲು ಭೇಟಿ ಮಾಡಿದ್ದೇನೆ. ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಬದಲಾವಣೆಗಳನ್ನು ತಂದಿದ್ದೇವೆ. ಅದರ ಫಲವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ ಎಂದು ಹೇಳಿದರು.

ಈಗಾಗಲೇ ದೇವನೂರು ಮಹಾದೇವ ಅವರು ನಾಟಕ, ಕಲೆ, ಸಾಹಿತ್ಯದ ಅರಿವು ಮೂಡಿಸುವಂತೆ ಸಲಹೆ ನೀಡಿದ್ದಾರೆ. ಅವರ ಸಲಹೆಗಳನ್ನು ಸ್ವೀಕರಿಸಿ ಅವುಗಳನ್ನು ಜಾರಿಗೆ ತರಲಾಗುವುದು ಎಂದು ಹೇಳಿದರು.

ಸರ್ಕಾರಿ ನೌಕರರ ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಿಗೆ ಸೇರಿಸುವ ವಿಚಾರವಾಗಿ ಪುಟ 2ಕ್ಕೆ

### ಕೇಂದ್ರೀಯ ಶಾಲೆಗಳಲ್ಲಿ ಕೇಸರಿ ಶಾಲು ಹಾಕಿಸಲಿ

**ಮೈಸೂರು:** ಕೇಸರಿ ಶಾಲು ಹಾಕಿಸಿ ಶಾಲೆಗೆ ಮಕ್ಕಳನ್ನು ಕಳುಹಿಸುವುದಾಗಿ ಬಿಜೆಪಿ ನಾಯಕರು ನೀಡಿರುವ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ಬಿಜೆಪಿಯವರು ಹಿಜಾಬ್ ಅಂತ ಕರೀತಾರೆ, ನಾವು ಸಮಾನತೆ ಅಂತೀವಿ. ಮೊದಲು ಕೇಂದ್ರೀಯ ವಿದ್ಯಾಲಯಗಳಲ್ಲಿ ಶಾಲು ಹಾಕಿ ಬರಲಿ, ಬಳಿಕ ನಾನು ಉತ್ತರ ಕೊಡ್ತೀನಿ ಎಂದರು. ಕೇಂದ್ರೀಯ ವಿದ್ಯಾಲಯ, ಮಹಾರಾಷ್ಟ್ರದಲ್ಲಿ ಯಾವ ಶಿಕ್ಷಣ ನೀಡಲಾಗುತ್ತಿದೆ. ಇದರ ಬಗ್ಗೆ ಏಕೆ ಬಿಜೆಪಿಯವರು ಮಾತನಾಡುವುದಿಲ್ಲ ಎಂದು ಕಿಡಿಕಾರಿದರು.

### ಕಂತುಗಳಲ್ಲಿ ಜನರ ದುಡುಮೆ ಲೂಟಿ

**ಕೇಂದ್ರ ಸರ್ಕಾರದ ವಿರುದ್ಧ ಖರ್ಗೆ ವಾಗ್ದಾಳಿ**

**ನವದೆಹಲಿ:** ಕೇಂದ್ರ ಸರ್ಕಾರ ದೇಶದ ಸಾಮಾನ್ಯ ಜನರ ದುಡಿಮೆಯನ್ನು 'ಕಂತುಗಳಲ್ಲಿ ಲೂಟಿ' ಮಾಡುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತೀವ್ರ ವಾಗ್ದಾಳಿ ಶನಿವಾರ ನಡೆಸಿದ್ದಾರೆ.

ದೇಶಾದ್ಯಂತ ತೈಲ ಬೆಲೆ ಏರಿಕೆಯಾಗುತ್ತಿರುವುದನ್ನು ಖಂಡಿಸಿ ಅವರು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಮೋದಿ ಅವರೇ, ಈ ಕಂತು ಆಧಾರಿತ ಲೂಟಿಯ ಪಾಲು ಯಾರಿಗೆಲ್ಲ ತಲುಪುತ್ತಿದೆ ಎಂದು ದೇಶಕ್ಕೆ ತಿಳಿಸಿ. ಈ ಸರ್ಕಾರದ ನಿಜವಾದ ಬಿಕ್ಕಟ್ಟು ಇರುವುದು ನಿಮ್ಮ ನಾಯಕತ್ವದಲ್ಲಿ. ಇದನ್ನು ದೇಶದ 140 ಕೋಟಿ ಭಾರತೀಯರು ಈಗ ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದಾರೆ ಎಂದು ಕಿಡಿಕಾರಿದ್ದಾರೆ.

ಈ ಹಿಂದೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ತೀವ್ರವಾಗಿ ಕುಸಿದಿದ್ದಾಗಲೂ ಅದರ ಆರ್ಥಿಕ ಲಾಭವನ್ನು ಕೇಂದ್ರ ಸರ್ಕಾರ ದೇಶದ ನಾಗರಿಕರಿಗೆ ವರ್ಗಾಯಿಸದೆ ವಂಚಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ವೈಫಲ್ಯವೇ ಈ ಪರಿಸ್ಥಿತಿಗೆ ಕಾರಣ ಎಂದು ಟೀಕಿಸಿದ್ದಾರೆ.

ಪೆಟ್ರೋಲ್ ಬೆಲೆ ಈಗ ಮತ್ತೆ 100 ರೂಪಾಯಿ ಗಡಿ ದಾಟಿದೆ ಎಂದು ಆಕ್ರೋಶ ಹೊರಹಾಕಿರುವ ಅವರು, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಪ್ರತಿದಿನ ಬರೋಬ್ಬರಿ 1,000 ಕೋಟಿ ರೂಪಾಯಿ ಕೇಂದ್ರ ತೆರಿಗೆ ವಿಧಿಸುತ್ತಿದ್ದರೂ ಬಿಜೆಪಿಯ ಹಸಿವು ತೀರುತ್ತಿಲ್ಲ. ಜಾಗತಿಕವಾಗಿ ತೈಲ ಬೆಲೆ ಕಡಿಮೆ ಇದ್ದಾಗ ಇವರು ಜನರಿಗೆ ರಿಯಾಯಿತಿ ನೀಡಲಿಲ್ಲ. ಬದಲಿಗೆ ನಿರಂತರವಾಗಿ ಸುಲಿಗೆ ಮಾಡಿದರು. ಈಗ ಬಿಕ್ಕಟ್ಟು ಎದುರಾದಾಗ ಚುನಾವಣೆಗಳಲ್ಲಿ ಮುಳುಗಿ, ಚುನಾವಣೆ ಮುಗಿದ ಮೇಲೆ ಜನರಿಗೆ ತ್ಯಾಗದ ಪಾಠ ಬೋಧಿಸುತ್ತಿದ್ದಾರೆಂದು ಕಿಡಿಕಾರಿದ್ದಾರೆ.

ಭಾರತದಲ್ಲಿ ಇಂಧನ ಪುಟ 2ಕ್ಕೆ

### ಪರೀಕ್ಷೆ ಮುಗಿದ ಹತ್ತೇ ನಿಮಿಷದಲ್ಲಿ ಫಲಿತಾಂಶ ಪ್ರಕಟ!

**ಬೆಳಗಾವಿ:** ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯು ಪರೀಕ್ಷೆ ಮುಗಿದ ಹತ್ತೇ ನಿಮಿಷದಲ್ಲಿ ಫಲಿತಾಂಶ ಪ್ರಕಟಿಸಿ ಹೊಸ ದಾಖಲೆ ನಿರ್ಮಿಸಿದೆ.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬಿಇ, ಬಿಟೆಕ್ ಅಂತಿಮ ವರ್ಷದ ವಿದ್ಯಾರ್ಥಿಗಳ ಫಲಿತಾಂಶವನ್ನು ಪರೀಕ್ಷೆ ಮುಗಿದ ಹತ್ತೇ ನಿಮಿಷದಲ್ಲಿ ಪ್ರಕಟಿಸಿದೆ.

ಬಿಇ, ಬಿಟೆಕ್ ಅಂತಿಮ ಸೆಮಿಸ್ಟರ್ ಪರೀಕ್ಷೆಗೆ ಒಟ್ಟು 56,192 ವಿದ್ಯಾರ್ಥಿಗಳ ಹಾಜರಾಗಿದ್ದರು. ಶುಕ್ರವಾರ ಸಂಜೆ 5:30ಕ್ಕೆ ಪರೀಕ್ಷೆ ಅಂತ್ಯವಾಗಿತ್ತು. 5:40ಕ್ಕೆ ಫಲಿತಾಂಶ ಪ್ರಕಟವಾಗಿದೆ. ವಿವಿಯು ಶೇ.99.98ರಷ್ಟು ಫಲಿತಾಂಶ ಸಾಧಿಸಿದೆ.

ಹತ್ತೇ ನಿಮಿಷದಲ್ಲಿ ಫಲಿತಾಂಶ ಪ್ರಕಟಿಸುವುದರ ಜೊತೆಗೆ ವಿದ್ಯಾರ್ಥಿಗಳ ಮೊಬೈಲ್‌ನ ವಾಟ್ಸಪ್ ಸಂಖ್ಯೆಗೂ ಫಲಿತಾಂಶವನ್ನು ರವಾನಿಸಲಾಗಿದೆ. ಮೌಲ್ಯಮಾಪನದಲ್ಲಿ ಡಿಜಿಟಲ್ ವ್ಯವಸ್ಥೆ ಅಳವಡಿಸಿ ವಿಟಿಯು ಈ ಸಾಧನೆ ಮಾಡಿದೆ. ತ್ವರಿತ ಫಲಿತಾಂಶ ಪ್ರಕಟನೆಗೆ ಶ್ರಮಿಸಿದ ಸಿಬ್ಬಂದಿಗೆ ಕುಲಪತಿ ವಿದ್ಯಾಶಂಕರ ಅಭಿನಂದಿಸಿದ್ದಾರೆ.

## ವಿಪಕ್ಷ ನಾಯಕನಿಗೆ ಸಿಗದ ಸರ್ಕಾರಿ ನಿವಾಸ

### ಸಿಎಂ ಸಿದ್ದರಾಮಯ್ಯ ವಿರುದ್ಧ ಆರ್.ಅಶೋಕ್ ಅಸಮಾಧಾನ

**ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದರೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರಿಗೆ ಇದುವರೆಗೂ ಅಧಿಕೃತ ಸರ್ಕಾರಿ ನಿವಾಸ ಮಂಜೂರು ಮಾಡಿಲ್ಲ.

ಇದುವರೆಗೆ ಹಲವು ಬಾರಿ ಪತ್ರ ಬರೆದು ಮನವಿ ಮಾಡಿಕೊಂಡಿದ್ದರೂ ರಾಜ್ಯ ಸರ್ಕಾರವು ಸ್ಪಂದಿಸಿಲ್ಲ ಎಂದು ಅವರು ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯ ರೇಸ್ ವ್ಯೂ ಕಾಟೇಜ್ ಅಥವಾ ಕುಮಾರ ಪಾರ್ಕ್ ನಿವಾಸ ಮಂಜೂರು ಮಾಡುವಂತೆ ಮುಖ್ಯಮಂತ್ರಿ ಮತ್ತು ಮುಖ್ಯಕಾರ್ಯದರ್ಶಿಗೆ ಇದುವರೆಗೆ 5–6 ಬಾರಿ ಅಧಿಕೃತ ಪತ್ರ ಬರೆದಿದ್ದೇನೆ. ಅಲ್ಲದೆ, ಅಧಿಕಾರಿಗಳನ್ನು ಖುದ್ದಾಗಿ ಭೇಟಿಯಾದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರ್.ಅಶೋಕ್ ತಿಳಿಸಿದ್ದಾರೆ.

ಬಿಜೆಪಿ ವಿರೋಧಪಕ್ಷದ ನಾಯಕನ ಸ್ಥಾನಕ್ಕೆ ಆಯ್ಕೆ ಮಾಡಿದ್ದು ತಡವಾಗಿ. ವಿರೋಧಪಕ್ಷದ ನಾಯಕ ಸ್ಥಾನಕ್ಕೆ ಅಶೋಕ್ ಆಯ್ಕೆ ಆದ ಬಳಿಕ ಸರ್ಕಾರಿ ನಿವಾಸ ಕೋರಿ ನಾಲ್ಕು ಪತ್ರಗಳನ್ನು ಬರೆದರೂ ಸರ್ಕಾರದಿಂದ ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.



ಈ ಹಿಂದೆ ನೀವು ವಿರೋಧ ಪಕ್ಷದ ನಾಯಕನಾಗಿದ್ದ ವೇಳೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ನೀವು ಕೇಳಿದ ಕಡೆ ಸರ್ಕಾರಿ ಬಂಗಲೆಯನ್ನು ಮಂಜೂರು ಮಾಡಿದ್ದೆವು. ಮೂರು ವರ್ಷಗಳಲ್ಲಿ ನಾನು ಮುಖ್ಯ ಕಾರ್ಯದರ್ಶಿಯವರಿಗೆ ಆರು ಬಾರಿ ಪತ್ರ ಬರೆದಿದ್ದೇನೆ. ಆದರೂ ಒಂದು ನಿವಾಸ ಮಂಜೂರು ಮಾಡಲು ಸಾಧ್ಯವಾಗಿಲ್ಲ ಎಂದರೆ ಇದನ್ನು ಜವಾಬ್ದಾರಿತ ಸರ್ಕಾರ ಎಂದು ಕರೆಯಬೇಕೇ? ಮುಂದೆ ನಮ್ಮ ಸರ್ಕಾರ ಬಂದರೆ, ನಾನು ಕೂಡಾ ಹೇಗೆ? ಯಾರಿಗೆ? ಯಾವಾಗ? ಮನೆ ಪುಟ 2ಕ್ಕೆ

## ಮತ್ತೆ ಇಂಧನ ಬೆಲೆ ಏರಿಕೆ

### ಜನ ಸಾಮಾನ್ಯರಿಗೆ 3ನೇ ಬಾರಿಗೆ ಶಾಕ್ ನೀಡಿದ ಕೇಂದ್ರ ಸರ್ಕಾರ

**ನವದೆಹಲಿ:** ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು 10 ದಿನದಲ್ಲಿ ಮೂರನೇ ಬಾರಿಗೆ ಏರಿಕೆ ಮಾಡಿರುವ ಕೇಂದ್ರ ಸರ್ಕಾರ ದೇಶದ ಜನರಿಗೆ ಶಾಕ್ ಮೇಲೆ ಶಾಲ್ ನೀಡುತ್ತಿದೆ.




ಇಂಧನ ಕಂಪನಿಗಳು ಮೂರನೇ ಬಾರಿಗೆ ಶನಿವಾರ ಪ್ರತಿ ಲೀಟರ್ ಇಂಧನ ಬೆಲೆಯಲ್ಲಿ ಗರಿಷ್ಠ 95 ಪೈಸೆವರೆಗೆ ಏರಿಕೆ ಮಾಡಿವೆ. ಮೇ 15ರಿಂದ ಇತ್ತೀಚೆಗೆ ತೈಲ ದರ ಪರಿಷ್ಕರಣೆ ಆರಂಭವಾದ ಬಳಿಕ ಇದು ಅತ್ಯಲ್ಪ ದಿನಗಳಲ್ಲಿ ನಡೆದಿರುವ ಮೂರನೇ ಸರಣಿ ಹೆಚ್ಚಳವಾಗಿದೆ.

ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಮಧ್ಯಪ್ರಾಚ್ಯ ಸಂಘರ್ಷದಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ಬೆಲೆಗಳು ತೀವ್ರವಾಗಿ ಏರುತ್ತಿವೆ. ಇದರ ಪರಿಣಾಮ ಉಂಟಾಗಿರುವ ತೈಲ ಬೆಲೆ ಏರಿಕೆ ಹೊರೆಯನ್ನು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಹಂತಹಂತವಾಗಿ ಗ್ರಾಹಕರಿಗೆ ವರ್ಗಾಯಿಸಲು ಆರಂಭಿಸಿವೆ. ದೆಹಲಿಯಲ್ಲಿ 87 ಪೈಸೆ ಪುಟ 2ಕ್ಕೆ

### ದೇಶದಲ್ಲಿಯೇ ಕಡಿಮೆ ಏರಿಕೆ

**ನವದೆಹಲಿ:** ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಶೇ.5ರಷ್ಟು ಮಾತ್ರ ಏರಿಕೆ ಮಾಡಲಾ ಗಿದೆ. ಇದೇ ಅವಧಿಯಲ್ಲಿ ಪಾಕಿಸ್ತಾನದಲ್ಲಿ 54.9%, ಅಮೆರಿಕದಲ್ಲಿ 44.5% ಹಾಗೂ ಯುಕೆ ಯಲ್ಲಿ 19.2% ಇಂಧನ ಬೆಲೆಗಳು ಏರಿಕೆಯಾಗಿದೆ. ಅಂತಾರಾಷ್ಟ್ರಿಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಏರಿಕೆ ಆಗಿರುವುದರಿಂದ ತೈಲ ಮಾರುಕಟ್ಟೆ ಕಂಪನಿಗಳ ಮೇಲೆ ಹೊರೆ ಹೆಚ್ಚಾಗಿದೆ. ಭಾರತೀಯ ತೈಲ ಕಂಪನಿಗಳು ಪ್ರತಿದಿನಕ್ಕೆ ಸುಮಾರು 1,000 ಕೋಟಿ ರೂ. ನಷ್ಟ ಅನುಭವಿಸುತ್ತಿವೆ. ಆದರೆ ಇಂಧನ ದರ ಪರಿಷ್ಕರಣೆಯಿಂದ ಆ ನಷ್ಟ ದಿನಕ್ಕೆ 750 ಕೋಟಿ ರೂ.ಗಳಿಗೆ ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

### ಚಡ್ಡಾಗೆ ಬಿಜೆಪಿ ಗಿಫ್ಟ್

**ನವದೆಹಲಿ:** ಆಮ್ ಆದ್ಮಿ ಪಕ್ಷ ತೊರೆದು ಬಿಜೆಪಿಗೆ ಸೇರಿದ್ದ ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಅವರನ್ನು ಮೇಲ್ಮನೆಯ ಅರ್ಜಿಗಳ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ರಾಜ್ಯಸಭಾ ಅಧ್ಯಕ್ಷ ಸಿ ಪಿ ರಾಧಾಕೃಷ್ಣನ್ ಅವರು ಸದನದ 10 ಸದಸ್ಯರನ್ನು ಸಮಿತಿಗೆ ನಾಮನಿರ್ದೇಶನ ಮಾಡಿದರು. ರಾಘವ್ ಚಡ್ಡಾ ನೇತೃತ್ವದ ಸಮಿತಿಯ ಸದಸ್ಯರಾಗಿ ಹರ್ಷ್ ಮಹಾಜನ್, ಗುಲಾಮ್ ಅಲಿ, ಶಂಭು ಶರಣ್ ಪಟೇಲ್, ಮಯಂಕ್‌ಕುಮಾರ್ ನಾಯಕ್, ಮಸ್ತಾನ್ ರಾವ್ ಯಾದವ್ ಬೀಡಾ, ಜೆಬಿ ಮಾಥರ್ ಹಿಶಾಮ್, ಸುಭಾಶಿಶ್ ಖುಂಟಿಯಾ, ರುಂಗ್ವಾ ನರ್ಜಾರಿ ಮತ್ತು ಸಂತೋಷ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

### ಅಪಘಾತ: 1 ವರ್ಷ ಶಿಕ್ಷೆಯನ್ನು 1 ದಿನಕ್ಕೆ ಇಳಿಸಿದ ಹೈಕೋರ್ಟ್

**ಬೆಂಗಳೂರು:** ಅಪಘಾತದ ನಂತರ ಗಾಯಗೊಂಡವರನ್ನು ತನ್ನ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸಿ ಮಾನವೀಯತೆ ಮೆರೆದಿದ್ದ ಆರೋಪಿಗೆ ಸೆಷನ್ಸ್ ನ್ಯಾಯಾಲಯ ನೀಡಿದ್ದ ಒಂದು ವರ್ಷದ ಸರಳ ಜೈಲು ಶಿಕ್ಷೆಯನ್ನು ಹೈಕೋರ್ಟ್ ಒಂದೇ ದಿನಕ್ಕೆ ಇಳಿಸಿ ಆದೇಶಿಸಿದೆ.




ಆದರೆ, ದಂಡದ ಮೊತ್ತವನ್ನು 5,000 ರೂ.ಗಳಿಂದ 1 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ. ಇದನ್ನು ಮೃತರ ಅವಲಂಬಿತರಿಗೆ ಪಾವತಿಸಬೇಕು ಎಂದು ಸೂಚಿಸಿದೆ. ಮೋಟಾರು ಅಪಘಾತ ಹಕ್ಕುಗಳ ನ್ಯಾಯಮಂಡಳಿಯಿಂದ ಅವಲಂಬಿತರು ಪಡೆದ ಪರಿಹಾರದ ಜೊತೆಗೆ ಹೆಚ್ಚಿದ ದಂಡದ ಮೊತ್ತವನ್ನು ಪಾವತಿಸಲು ಆರೋಪಿ ಇಚ್ಛೆಯನ್ನು ನ್ಯಾಯಾಲಯ ಪರಿಗಣಿಸಿ ನ್ಯಾಯಮೂರ್ತಿ ವಿ.ಶ್ರೀಶಾನಂದ ಆದೇಶ ಹೊರಡಿಸಿದ್ದಾರೆ. ಪುಟ 2ಕ್ಕೆ

### 'ಮುಸ್ಲಿಂ' ಪದ ಬಳಕೆ ಬಿಜೆಪಿಗೆ ರಾಜಕೀಯ ಅಸ್ತ್ರ: ಜಾರಕಿಹೊಳಿ

**ಬೆಂಗಳೂರು:** ಜನಪರ ಸಮಸ್ಯೆಗಳಿಂದ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆಯಲು ಬಿಜೆಪಿ ನಾಯಕರು 'ಮುಸ್ಲಿಂ' ಮತ್ತು 'ಪಾಕಿಸ್ತಾನ' ಎಂಬ ಪದಗಳನ್ನು ರಾಜಕೀಯ ಅಸ್ತ್ರವಾಗಿ ಪದೇ ಪದೇ ಬಳಸುತ್ತಿದ್ದಾರೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತೀವ್ರ ವಾಗ್ದಾಳಿ ನಡೆಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ಈ ಧೋರಣೆಯನ್ನು ಕೇವಲ ರಾಜಕೀಯ ಸ್ಟಂಟ್ ಎಂದು ಕರೆದರು. ರಾಜ್ಯ ಸರ್ಕಾರ ಮುಸ್ಲಿಮರು, ರೈತರು, ಕನ್ನಡ ಕಾರ್ಯಕರ್ತರು ಸೇರಿದಂತೆ ಸಮಾಜದ ವಿವಿಧ ವರ್ಗಗಳಿಗೆ ಸಂಬಂಧಿಸಿದ ಸುಮಾರು 50 ಪ್ರಕರಣಗಳನ್ನು ವಾಪಸ್ ಪಡೆದಿದೆ. ಆದರೆ, ಬಿಜೆಪಿ ನಾಯಕರಿಗೆ ಕೇವಲ 'ಮುಸ್ಲಿಂ' ಮತ್ತು 'ಪಾಕಿಸ್ತಾನ' ಎಂಬ ಹೆಸರುಗಳನ್ನು ಉಲ್ಲೇಖಿಸಿ ಜನರ ಭಾವನೆಗಳನ್ನು ಕೆರಳಿಸುವುದಷ್ಟೇ ಗೊತ್ತು ಎಂದು ಕಿಡಿಕಾರಿದರು.

ಈ ರೀತಿಯ ಪದಗಳನ್ನು ಬಳಸುವುದರಿಂದ ಮಾತ್ರ ಸಾರ್ವಜನಿಕರ ಗಮನವನ್ನು ತಮ್ಮತ್ತ ಸೆಳೆಯಬಹುದು ಎಂಬ ಭ್ರಮೆಯಲ್ಲಿ ಬಿಜೆಪಿ ನಾಯಕರಿದ್ದಾರೆ. ರಾಜಕೀಯ ಲಾಭ ಪಡೆಯುವ ಬಿಜೆಪಿಯ ತಂತ್ರಗಾರಿಕೆ ಎಂದು ಟೀಕಿಸಿದರು.

### ನೀಟ್ ಪರೀಕ್ಷೆ ಹಗರಣ: ಎನ್‌ಟಿಎ ತಜ್ಞನ ಬಂಧನ

**ನವದೆಹಲಿ:** ನೀಟ್ ಪರೀಕ್ಷೆ ಭೌತಶಾಸ್ತ್ರ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಟಿಎ ತಜ್ಞರೊಬ್ಬರನ್ನು ಸಿಬಿಐ ಬಂಧಿಸಿದೆ.



ಮಹಾರಾಷ್ಟ್ರದ ಪುಣೆಯ ಸೇಥ್ ಹಿರಾಲಾಲ್ ಸರಾಫ್ ಪ್ರಶಾಲಾದಲ್ಲಿ ಉದ್ಯೋಗದಲ್ಲಿದ್ದ ಆರೋಪಿ ಮನೀಷಾ ಸಂಜಯ್ ಹವಾಲ್ದಾರ್ ಬಂಧಿತ ಆರೋಪಿ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ತಜ್ಞರಾಗಿ ನೇಮಕಗೊಂಡಿದ್ದರು.

ಕೇಂದ್ರೀಯ ಸಂಸ್ಥೆಯ ವಿಚಾರಣೆಯ ನಂತರ ಆರೋಪಿಯನ್ನು ಬಂಧಿಸಲಾಗಿದೆ. ಮೇ 16ರಂದು ಬಂಧಿತನಾಗಿರುವ ಆರೋಪಿ ಮನೀಷಾ ಮಾಂಧರೆ ಜೊತೆ ನೀಟ್ ಯುಜಿ ಪರೀಕ್ಷೆಯ ಹಲವಾರು ಭೌತಶಾಸ್ತ್ರ ಪ್ರಶ್ನೆಗಳನ್ನು ಹಂಚಿಕೊಂಡಿದ್ದಾರೆ ಎಂದು ತನಿಖಾಧಿಕಾರಿ ತಿಳಿಸಿದ್ದಾರೆ. ಹವಾಲ್ದಾರ್ ಹಂಚಿಕೊಂಡ ಪ್ರಶ್ನೆಗಳು 2026ರ ನೀಟ್ ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಬಂದಿದ್ದ ಪುಟ 2ಕ್ಕೆ

## ಸಚಿವರಿಗೆ ಕೊಕ್: ಹೈಕಮಾಂಡ್ ನಿರ್ಧಾರಕ್ಕೆ

### ಶಾಸಕರ ಸಚಿವ ಸ್ಥಾನದ ಆಕಾಂಕ್ಷೆ ತಪ್ಪಲ್ಲ : ಗೃಹಸಚಿವ ಡಾ.ಜಿ.ಪರಮೇಶ್ವರ್



**ಬೆಂಗಳೂರು:** ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ನಿರ್ಧಾರ ಹೈಕಮಾಂಡ್ ನಿರ್ಧಾರಕ್ಕೆ ಸೇರಿದೆ. ಯಾವ ಸಚಿವರನ್ನು ಕೈಬಿಡಬೇಕು ಎಂದು ಹೈಕಮಾಂಡ್ ಅಂತಿಮ ನಿರ್ಧಾರ ಮಾಡಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

ಮಾಧ್ಯಮಗಳ ಜೊತೆ ಶನಿವಾರ ಮಾತನಾಡಿದ ಅವರು, ಸಚಿವ ಸಂಪುಟ ಪುನರ್ ರಚನೆ ಹಾಗೂ ಹಿರಿಯ ಸಚಿವರನ್ನು ಕೈಬಿಡುವ ಕುರಿತಾದ ಚರ್ಚೆಗಳ ಕುರಿತ ಪ್ರಶ್ನೆಗೆ ಶನಿವಾರ ಉತ್ತರಿಸಿದರು. ಸಚಿವರಾಗಲು ಶಾಸಕರು ಬಯಸುವುದರಲ್ಲಿ ಯಾವುದೇ ತಪ್ಪಿಲ್ಲ. ಆದರೆ, ಸಂಪುಟದಲ್ಲಿ ಕೇವಲ ಶೇ.15ರಷ್ಟು ಸ್ಥಾನಗಳನ್ನು ಮಾತ್ರ ಭರ್ತಿ ಮಾಡಲು ಅವಕಾಶ ಇರುವುದರಿಂದ ಮಂತ್ರಿ ಸ್ಥಾನಗಳ ಸಂಖ್ಯೆ ಸೀಮಿತವಾಗಿದೆ ಎಂದು ಹೇಳಿದರು.

ಗೃಹ ಇಲಾಖೆಯ ಬಗ್ಗೆ ನನಗೆ ಯಾವುದೇ ಅಸಮಾಧಾನವಿಲ್ಲ ಮತ್ತು ಇಲಾಖೆಯನ್ನು ದಕ್ಷತೆಯಿಂದ ನಿಭಾಯಿಸಿದ್ದೇನೆ. ಮುಖ್ಯಮಂತ್ರಿ ಹುದ್ದೆ ನಿಭಾಯಿಸುವ ಜವಾಬ್ದಾರಿ ನೀಡಿದರೆ, ಅದನ್ನು ನಿಭಾಯಿಸುವ ಸಾಮರ್ಥ್ಯ ಇದೆ. ಪಕ್ಷ ನೀಡುವ ಯಾವುದೇ ಜವಾಬ್ದಾರಿಯನ್ನು ಹೊರಲು ಸಿದ್ಧನಿದ್ದೇನೆಂದು ಹೇಳಿದರು.

ಲಾಡ್ಲೆ ಮಶಾಕ್ ದರ್ಗಾಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಹಿಂಪಡೆಯುವುದಕ್ಕೆ ಬಿಜೆಪಿ ಮತ್ತು ಹಿಂದೂ ಸಂಘಟನೆಗಳ ವಿರೋಧದ ಪುಟ 2ಕ್ಕೆ

### ತುಮಕೂರಿಗೆ ಮೆಟ್ರೋ ವಿಸ್ತರಣೆ: ಡಿಪಿಆರ್ ಸಿದ್ಧ


**ಬೆಂಗಳೂರು:** ಬೆಂಗಳೂರು ಮತ್ತು ತುಮಕೂರು ಜನರ ಬಹುದಿನಗಳ ಕನಸಾದ 'ಮಾದಾವರ–ತುಮಕೂರು ಮೆಟ್ರೋ ಯೋಜನೆ'ಗೆ ಸಂಬಂಧಿಸಿದಂತೆ ಗೃಹ ಸಚಿವ ಜಿ.ಪರಮೇಶ್ವರ್ ಶನಿವಾರ ಮಹತ್ವದ ಘೋಷಣೆ ಮಾಡಿದರು.

ತುಮಕೂರು ನಗರಕ್ಕೆ ಮೆಟ್ರೋ ವಿಸ್ತರಿಸುವ ಯೋಜನೆಯ ವಿಸ್ತೃತ ಯೋಜನಾ ವರದಿ ಸಿದ್ಧವಾಗಿದೆ. ಶೀಘ್ರದಲ್ಲೇ ಅದನ್ನು ರಾಜ್ಯ ಸಚಿವ ಸಂಪುಟ ಸಭೆಯ ಮುಂದೆ ಮಂಡಿಸಲಾಗುವುದು ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ಸುಮಾರು 20,000 ಕೋಟಿ ರೂಪಾಯಿ ವೆಚ್ಚದ ಈ ಬೃಹತ್ ಮೆಟ್ರೋ ಯೋಜನೆಯನ್ನು ಸಾರ್ವಜನಿಕ– ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಜಾರಿಗೊಳಿಸಲು ಸರ್ಕಾರ ಸಿದ್ಧತೆ ನಡೆಸುತ್ತಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಘೋಷಣೆಯಂತೆ ಈ ಹಿಂದೆ ಹೈದರಾಬಾದ್ ಮೂಲದ ಕಂಪನಿಯೊಂದಕ್ಕೆ 3.5 ಕೋಟಿ ರೂ. ವೆಚ್ಚದಲ್ಲಿ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಜವಾಬ್ದಾರಿ ನೀಡಲಾಗಿತ್ತು. ವರದಿಯಲ್ಲಿ ಯೋಜನೆ ಜಾರಿ ಸಾಧ್ಯ ಎಂದು ಶಿಫಾರಸು ಮಾಡಲಾಗಿದೆ. ಪುಟ 2ಕ್ಕೆ

### ಭೀಕರ ಅಪಘಾತ: ಒಂದೇ ಕುಟುಂಬದ ಐವರು ಸಾವು



**ಕಲಬುರಗಿ:** ಚಿತ್ತಾಪುರ ತಾಲೂಕಿನ ಲಾಡ್ಲಾಪೂರ ಬಳಿ ಕ್ರೂಸರ್ ಮತ್ತು ಲಾರಿ ನಡುವೆ ನಡೆದ ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತ ಐವರೂ ಚಿತ್ತಾಪುರ ತಾಲೂಕಿನ ಇಂಗಳಗಿ ಗ್ರಾಮದ ಒಂದೇ ಕುಟುಂಬದವರು. ತೋಲುಸಾಬ್ ಕ್ಯಾಶ್ವಾರ್ (27), ಹುಸೇನ್ ಶಾ (48), ಮೈಬೂಬ್ ಅಲಿ (45), ರಸೂಲ್ ಬೀ (42), ಫಾತೀಮಾ ಅಲೀ (38) ಮೃತಪಟ್ಟವರು. ಯಾದಗಿರಿ ಆಸ್ಪತ್ರೆಯಿಂದ ವಾಪಸಾಗುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ

ಲಾಡ್ಲಾಪುರ ಗ್ರಾಮದ ರಾಷ್ಟ್ರೀಯ ಹೆದ್ದಾರಿ 150ರಲ್ಲಿ ಅಪಘಾತ ಸಂಭವಿಸಿದೆ. ಲಾರಿ ಡಿಕ್ಕಿ ರಭಸಕ್ಕೆ ಕ್ರೂಸರ್ ನಜ್ಜುಗುಜ್ಜಾಗಿದೆ. ಅಪಘಾತದ ಬಳಿಕ ಲಾರಿ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮೊದಲನೇ ಪುಟದಿಂದ

### ತುಮಕೂರಿಗೆ ಮೆಟ್ರೋ ವಿಸ್ತರಣೆ: ಡಿಪಿಆರ್ ಸಿದ್ಧ

ಈ ಬೆನ್ನಲ್ಲೇ ಮೆಟ್ರೋ ಅಧಿಕಾರಿಗಳು ಟೆಂಡರ್ ಕರೆದು ಡಿಪಿಆರ್ ಸಿದ್ಧಪಡಿಸುವ ಕೆಲಸ ವಹಿಸಿದ್ದರು. ಈಗ ಆ ಕಂಪನಿಯು ಡಿಪಿಆರ್ ಪೂರ್ಣಗೊಳಿಸಿ ಸರ್ಕಾರಕ್ಕೆ ಸಲ್ಲಿಸಿದೆ ಎಂದು ವಿವರಿಸಿದರು.

ಡಿಪಿಆರ್‌ನಲ್ಲಿ ಮೆಟ್ರೋ ನಿಲ್ದಾಣಗಳ ಸಂಖ್ಯೆ, ಅವುಗಳ ಸ್ಥಳ ಮತ್ತು ರಾಷ್ಟ್ರೀಯ ಹೆದ್ದಾರಿಯ ಉದ್ದಕ್ಕೂ ಮೆಟ್ರೋ ಮಾರ್ಗ ಹಾದುಹೋಗುವ ಅಲೈನ್‌ಮೆಂಟ್ ವಿವರಗಳಿವೆ. ಸಂಪುಟ ಸಭೆ ಅನುಮೋದನೆ ಸಿಕ್ಕ ತಕ್ಷಣ ಟೆಂಡರ್ ಕರೆಯುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ಸಚಿವರು ಹೇಳಿದರು.

### ಸಚಿವರಿಗೆ ಕೊಕ್: ಹೈಕಮಾಂಡ್ ನಿರ್ಧಾರಕ್ಕೆ

ಕುರಿತು ಮಾತನಾಡಿ, ವಿರೋಧಿಸುವುದು ಅವರಿಗೆ ಬಿಟ್ಟ ವಿಚಾರ. ನಮ್ಮ ಕಾಂಗ್ರೆಸ್ ಸರ್ಕಾರ ಸಂವಿಧಾನದ ತತ್ವಗಳನ್ನು ಪಾಲಿಸುತ್ತಿದೆ. ಸಂವಿಧಾನ ಎಲ್ಲರನ್ನೂ ಸಮಾನವಾಗಿ ಕಾಣಲು ಹೇಳುತ್ತದೆ. ಹಿಂದುಳಿದ, ಶೋಷಿತ ಮತ್ತು ನಿರ್ಲಕ್ಷಿತ ವರ್ಗಗಳ ಪರವಾಗಿ ಕೆಲಸ ಮಾಡುವುದು ಕಾಂಗ್ರೆಸ್‌ನ ಕರ್ತವ್ಯ. ಅದನ್ನು ನಾವು 1947ರಿಂದಲೂ ಮಾಡಿಕೊಂಡು ಬರುತ್ತಿದ್ದೇವೆ ಎಂದು ಸಮರ್ಥಿಸಿಕೊಂಡರು.

### ನೀಟ್ ಪರೀಕ್ಷೆ ಹಗರಣ: ಎನ್‌ಟಿಎ ತಜ್ಞನ ಬಂಧನ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಮೇ 16 ರಂದು ಪುಣೆಯ ಸಸ್ಯಶಾಸ್ತ್ರ ಶಿಕ್ಷಕಿ ಮಾಂಧರೆಯನ್ನು ಬಂಧಿಸಿದೆ.

### ಅಪಘಾತ: 1 ವರ್ಷ ಶಿಕ್ಷೆಯನ್ನು 1 ದಿನಕ್ಕೆ ಇಳಿಸಿದ ಹೈಕೋರ್ಟ್

ಆರೋಪಿ ರಿಯಾಜ್ ಅಹ್ಮದ್ ಸಲ್ಲಿಸಿದ್ದ ಕ್ರಿಮಿನಲ್ ಪರಿಷ್ಕರಣಾ ಅರ್ಜಿಯನ್ನು ಭಾಗಶಃ ಅನುಮತಿಸಿದ್ದಾರೆ.

ಮಂಗಳೂರಿನಲ್ಲಿ ಜುಲೈ 15, 2015ರಂದು ಅಪಘಾತ ಸಂಭವಿಸಿತ್ತು. ಅಪಘಾತದ ನಂತರ, ಅಹ್ಮದ್ ಕಾರನ್ನು ನಿಲ್ಲಿಸಿ ಗಾಯಾಳುಗಳನ್ನು ಚಿಕಿತ್ಸೆಗಾಗಿ ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸಿದ್ದರು. ಆದರೆ ಗಾಯಾಳು ಆನಂದ್ ಶೆಟ್ಟಿ ಸಾವನ್ನಪ್ಪಿದ್ದರು.

### ಯಾವುದೇ ಶಾಲೆ ಮುಚ್ಚಲ್ಲ: ಸಚಿವ ಮಧು ಬಂಗಾರಪ್ಪ

ಪ್ರತಿಕ್ರಿಯಿಸಿದ ಅವರು, ಇದನ್ನು ಕಡ್ಡಾಯ ಮಾಡುವುದು ಸಾಧ್ಯವಿಲ್ಲ. ಯಾವ ಶಾಲೆಗೆ ಸೇರಿಸಬೇಕು ಎಂಬುದು ಪೋಷಕರು ಹಾಗೂ ಮಕ್ಕಳ ಹಕ್ಕು. ಈ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಸ್ಪಷ್ಟ ಅಭಿಪ್ರಾಯ ನೀಡಿದೆ. ಆದರೆ ಎಲ್ಲರೂ ಕನ್ನಡ ಶಾಲೆಗಳತ್ತ ಮುಖ ಮಾಡಬೇಕು ಎಂಬುದು ನಮ್ಮ ಆಶಯ ಎಂದು ಹೇಳಿದರು.

ಕೇಂದ್ರ ಶಿಕ್ಷಣ ಸಚಿವ ಕಲಿಯಲಿ: ನೀಟ್ ಪರೀಕ್ಷೆ ಸೋರಿಕೆಯಾದ ಮೇಲೆ ಉತ್ತರಿಸಲಾಗದೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನಾಲ್ಕು ದಿನ ಕಣ್ಮರೆಯಾಗಿದ್ದರು. ಇವರಿಗೆ ಯಾವ ನೈತಿಕತೆ ಇದೆ. ನನ್ನ ರೀತಿ ಕುಳಿತು ಮಾಧ್ಯಮಗಳಿಗೆ ಉತ್ತರ ನೀಡಬೇಕಿತ್ತು. ಇವರಿಗೆ ಶಿಕ್ಷಣ ಇಲಾಖೆ ನಡೆಸಲು ಗೊತ್ತಿಲ್ಲದಿದ್ದರೆ ನನ್ನ ಬಳಿ ಬರಲಿ ನಾನು ಕಲಿಸಿಕೊಡುತ್ತೇನೆ ಎಂದು ಟೀಕಿಸಿದರು.

ತಮ್ಮ ಶೈಕ್ಷಣಿಕ ಅರ್ಹತೆಯನ್ನು ಪ್ರಶ್ನಿಸುವವರ ವಿರುದ್ಧವೂ ವಾಗ್ದಾಳಿ ನಡೆಸಿದ ಅವರು, ನನ್ನ ಶೈಕ್ಷಣಿಕ ಹಿನ್ನಲೆ ಬಗ್ಗೆ ಗೇಲಿ ಮಾಡುವವರು ಮೊದಲು ಪ್ರಧಾನಿ ನರೇಂದ್ರ ಮೋದಿ ಅವರ ಡಿಗ್ರಿ ಪ್ರಮಾಣಪತ್ರದ ಬಗ್ಗೆ ಮಾತನಾಡಲಿ. ನಾನು ಪಿಯುಸಿ ಮುಗಿಸಿದ್ದೇನೆ. ನಾನು ಒರಿಜಿನಲ್ ದಾಖಲಾತಿ ತೋರಿಸುತ್ತೇನೆ. ಅವರು ತೋರಿಸುತ್ತಾರೆಯೇ? ಪಿಯುಸಿ ಮುಗಿದ ಬಳಿಕ ವ್ಯವಹಾರಕ್ಕೆ ಮುಂದಾದ ಕಾರಣ ಓದು ಮುಂದುವರಿಸಲಿಲ್ಲ ಎಂದು ತಿರುಗೇಟು ನೀಡಿದರು.

### ಅಳಿವಿನಂಚಿನ ಕನ್ನಡ ಶಾಲೆ ಉಳಿಸಿ

ಎಲ್ಲಾ ಜಾತಿಯ ಮಕ್ಕಳು ಒಂದೇ ಕಡೆ ಓದುವುದೇ ದೊಡ್ಡ ಶಿಕ್ಷಣ. ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ವೈಜ್ಞಾನಿಕ ಮನೋಬಾವ ಕಲಿಸಬೇಕು. ಆ ನಿಟ್ಟಿನಲ್ಲಿ ತರಬೇತಿ ನೀಡಬೇಕು. ಸತ್ಯ ಕಥೆಗಳನ್ನು ಹೇಳಿಕೊಡಬೇಕು. ಸಂವಿಧಾನ ಆಶಯ ಮತ್ತು ಅದರ ಪ್ರಸ್ತಾಪವನ್ನು ಕಥಾ ರೂಪದಲ್ಲಿ ಹೇಳಿಕೊಡುವ ಮೂಲಕ ಹೆಳೆಯನಸ್ಸಿನಲ್ಲೇ ಮಕ್ಕಳಿಗೆ ಸಂವಿಧಾನದ ಆಶಯವನ್ನು ಬಿತ್ತಬೇಕು ಎಂದು ಹೇಳಿದರು.

ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭ ಮಾಡುವುದರಿಂದ ಹಾಲಿ ಇರುವ ಸರ್ಕಾರಿ ಶಾಲೆಗಳನ್ನು ಯಾವುದೇ ಕಾರಣಕ್ಕೂ ಖಾಸಗಿಗೆ ಕೊಡಬಾರದು. ತಕರಾರು ವ್ಯಾಜ್ಯ ತೆಗೆಯುವವರು ಹುಟ್ಟಿಕೊಳ್ಳುವ ಮುನ್ನ ಸರ್ಕಾರ ವಶಕ್ಕೆ ತೆಗೆದುಕೊಂಡು ಸ್ಥಳೀಯವಾಗಿ ಗ್ರಾಮ ಪಂಚಾಯತ್, ಅಥವಾ ಪಶುವೈದ್ಯಕೀಯ ಕಚೇರಿಗಳನ್ನು ತೆಗದು ಆ ಗ್ರಾಮದ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು ಎಂದು ಹೇಳಿದರು.

ಆದಿವಾಸಿ ಮಕ್ಕಳಿಗೆ ಆಶ್ರಮ ಶಾಲೆಗಳಿವೆ. ಆದರೆ ಕಾಡಂಚಿನ ಮಕ್ಕಳಿಗೆ, ಅಲೆಮಾರಿ ಮತ್ತು ಗುಳೆ ಹೋಗುವ ಮಕ್ಕಳಿಗೆ ಸರಿಯಾದ ಶಾಲೆಗಳಿಲ್ಲ. ಅಲೆಮಾರಿ ಮಕ್ಕಳು ಎಲ್ಲೇ ಹೋದರೂ ಅವರಿಗೆ ಆಶ್ರಯ ಕೊಡಬೇಕು ಎಂದು ಸಲಹೆ ನೀಡಿದರು. ಡಿಡಿಪಿಐ ಉದಯಕುಮಾರ್, ಬಿಇಒ ಕೃಷ್ಣ, ಅಭಿರುಚಿ ಗಣೇಶ್ ಉಪಸ್ಥಿತರಿದ್ದರು.

### ಮತ್ತೆ ಇಂಧನ ಬೆಲೆ ಏರಿಕೆ

ಹೆಚ್ಚಳವಾಗುವುದರೊಂದಿಗೆ 98.64 ರೂಪಾಯಿಯಿಂದ 99.51 ರೂಪಾಯಿಗೆ ತಲುಪಿದೆ. ಅದೇ ರೀತಿ, ಡೀಸೆಲ್ ಬೆಲೆಯು ಲೀಟರ್‌ಗೆ 91 ಪೈಸೆ ಏರಿಕೆಯಾಗಿದೆ. ಇದಕ್ಕೂ ಮುನ್ನ, ಮೇ 15ರಂದು ಮೊದಲ ಬಾರಿಗೆ ಲೀಟರ್‌ಗೆ ಒಮ್ಮೆಗೆ 3 ರೂಪಾಯಿ ಹಾಗೂ ಮೇ 19ರಂದು ಎರಡನೇ ಬಾರಿಗೆ 90 ಪೈಸೆ ಹೆಚ್ಚಿಸಲಾಗಿತ್ತು. ಒಟ್ಟಾರೆಯಾಗಿ ಕಳೆದ 10 ದಿನಗಳಲ್ಲಿ ಇಂಧನ ದರಗಳು ಪ್ರತಿ ಲೀಟರ್‌ಗೆ ಸುಮಾರು 5 ರೂಪಾಯಿ ದುಬಾರಿಯಾದಂತಾಗಿದೆ.

### ವಿಪಕ್ಷ ನಾಯಕನಿಗೆ ಸಿಗದ ಸರ್ಕಾರಿ ನಿವಾಸ

ಮಂಜೂರು ಮಾಡಬೇಕು ಎಂಬುದು ಗೊತ್ತಿದೆ ಎಂದು ಅಶೋಕ್ ಅವರು ಸಿಎಂ ಸಿದ್ದರಾಮಯ್ಯ ವಿರುದ್ಧ ಸಭೆಯೊಂದರಲ್ಲಿ ಅಸಮಾಧಾನ ಹೊರಹಾಕಿದರು.

### ಕಂತುಗಳಲ್ಲಿ ಜನರ ದುಡುಮೆ ಲೂಟಿ

ದರಗಳು ವಿದೇಶಗಳಿಗಿಂತ ಕಡಿಮೆ ಇವೆ ಎಂಬ ಸರ್ಕಾರದ ವಾದವನ್ನು ಖರ್ಗೆ ತಳ್ಳಿಹಾಕಿದ್ದಾರೆ. ಮಧ್ಯಪ್ರಾಚ್ಯ ಸಂಘರ್ಷದ ಸಂದರ್ಭದಲ್ಲಿ ಜಾಗತಿಕ ಇಂಧನ ಬಿಕ್ಕಟ್ಟಿನಿಂದ ತಮ್ಮ ನಾಗರಿಕರನ್ನು ರಕ್ಷಿಸಲು ವಿಶ್ವದ ಇತರ ದೇಶಗಳು ಕೈಗೊಂಡಿರುವ ಜನಪರ ಕ್ರಮಗಳ ತುಲನಾತ್ಮಕ ವಿವರವನ್ನು ನೀಡಿದ್ದಾರೆ.

## ಬಸವ ಜಯಂತಿ ಮೆರವಣಿಗೆ



**ಚಾಮರಾಜನಗರ:** ರಾಮಸಮುದ್ರದಲ್ಲಿ ಗುರು ಕಂಬಳೇಶ್ವರ ಭಿಕ್ಷದ ಮಠ ಹಾಗೂ ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಗ್ರಾಮದ ಬಸವನಿಗೆ ಮಹಾಮಂಗಳಾರತಿ, ಹಣ್ಣು-ಕಾಯಿ ನೈವೇದ್ಯ ಸಮರ್ಪಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಚಾಮರಾಜನಗರದ ಶ್ರೀ ಸಿದ್ದಮ್ಮಲೇಶ್ವರ ವಿರಕ್ತ ಮಠದ ನಿರಂಜನ ಪ್ರಣವ ಸ್ವರೂಪಿ ಶ್ರೀ ಚನ್ನಬಸವ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡಿದರು.

ರಾಮಸಮುದ್ರ ಮಠದ ಮಹದೇವ ಸ್ವಾಮೀಜಿ ಸೇರಿದಂತೆ ಹಲವು ಪೂಜ್ಯರು ಉಪಸ್ಥಿತರಿದ್ದರು.

ಈ ವೇಳೆ ಮಾತನಾಡಿದ ಶ್ರೀ ಚನ್ನಬಸವ ಸ್ವಾಮೀಜಿ, ಬಸವೇಶ್ವರರ ತತ್ವ ಮತ್ತು ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹಿತವಚನ ನೀಡಿದರು.

ರಾಮಸಮುದ್ರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ್ದು, ವೀರಶೈವ ಲಿಂಗಾಯತ ಸಮುದಾಯದ ಮುಖಂಡರು, ಯಜಮಾನರು ಹಾಗೂ ಶರಣರು ಭಾಗವಹಿಸಿದ್ದರು. ಭಕ್ತರು ಕುಣಿದು ಕುಪ್ಪಳಿಸಿದರು.ನಾದಸ್ವರ, ವೀರಭದ್ರ ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿ

ಮೆರುಗು ತಂದವು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದ ಬಳಿಕ ಶರಣ ಭಕ್ತರು ಹಾಗೂ ಗ್ರಾಮಸ್ಥರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

## 24ರಂದು ಜಿಲ್ಲಾ ಜಾನಪದ ಉತ್ಸವ



**ಚಾಮರಾಜನಗರ:** ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಜಿಲ್ಲಾ ಜಾನಪದ ಉತ್ಸವವು ಮೇ.24 ರಂದು ಬೆಳಗ್ಗೆ 10.30ಕ್ಕೆ ನಗರದ ಡಾ.ರಾಜಕುಮಾರ್ ಜಿಲ್ಲಾ ರಂಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಪರಿಷತ್ನ ಜಿಲ್ಲಾಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ತಿಳಿಸಿದರು.

ಚಿಕ್ಕಲ್ಲೂರಿನ ಮಂಟೇಸ್ವಾಮಿ ಮಠದ ಭರತರಾಜೇ ಅರಸ್ ಸಾನಿಧ್ಯ ವಹಿಸುವರು. ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಾಗೂ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಪ್ರೊ.ಹಿ.ಚಿ.ಬೋರಲಿಂಗಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು ಎಂದು ಶುಕ್ರವಾರ ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಪ್ರಸಿದ್ಧ ನೀಲಗಾರರಾದ ಮೈಸೂರು ಡಾ.ಗುರುರಾಜು ಅವರಿಗೆ ಕೊಳ್ಳೇಗಾಲ ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ದತ್ತೇಶಕುಮಾರ್ ಅವರು ಪರಂಜ್ಯೋತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಮಧ್ಯಾಹ್ನ 12 ಗಂಟೆಗೆ ವಿಚಾರ ಸಂಕಿರಣ ನಡೆಯಲಿದೆ. ಸಮಕಾಲೀನ ಸಂದರ್ಭದಲ್ಲಿ ಜಾನಪದ ಪ್ರಸ್ತುತತೆ' ಕುರಿತು ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಮಾನಾಪುರ ಅವರು ವಿಚಾರ ಮಂಡಿಸುವರು. ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳ ವೈಶಿಷ್ಟತೆ ವಿಷಯ ಕುರಿತು ಮೈಸೂರಿನ ಕರಾಮುವಿಯ ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗದ ಸಹ ಪ್ರಾಧ್ಯಾಪಕ ಡಾ.ಪಿ. ಮಣಿ ಅವರು ವಿಷಯ ಮಂಡಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಪರಿಷತ್ತಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಲೆ ನಟರಾಜು, ಕಲಾವಿದ ರವಿಚಂದ್ರಪ್ರಸಾದ್, ಎಸ್‌ಪಿಬಿ ಸಾಂಸ್ಕೃತಿಕ ಕಲಾಬಳಗದ ಶಿವಣ್ಣ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು ಹಾಜರಿದ್ದರು.

# ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಯಾಗಲು ಸಾಹಿತ್ಯವೂ ಸಹಕಾರಿಯಾಗಬೇಕು: ಹೆಚ್‌ಸಿಎಂ




**ಚಾಮರಾಜನಗರ:** ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಯಾಗಲು ಸಾಹಿತ್ಯವೂ ಸಹಕಾರಿಯಾಗಬೇಕು. ರಚನಾತ್ಮಕ ಹೋರಾಟಗಳ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕಿದೆ. ಶಂಕರ ಸಿ.ಅಂಕನಶೆಟ್ಟಿಪುರ ಅವರ ಸಂಚಲನ ಪುಸ್ತಕ ಸಾಮಾಜಿಕ ಜವಾಬ್ದಾರಿಗಳನ್ನು ಒಳಗೊಂಡಿದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಹೇಳಿದರು.

ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ಕವಿ ಶಂಕರ ಸಿ.ಅಂಕನಶೆಟ್ಟಿಪುರ ಅವರ "ಸಂಚಲನ" ಕೃತಿ ಲೋಕಾರ್ಪಣೆ ಹಾಗೂ ನಮ್ಮ ಹರಿದರ್ಶನ ಪ್ರಕಾಶನವನ್ನು ಉದ್ಘಾಟಿಸಿ ಮಾತನಾಡಿದರು.

ಚಾಮರಾಜನಗರ ಭಾಗದ ಜಾನಪದ ಪರಿಕಲ್ಪನೆಗಳು ಹಲವಾರು ಸಾಹಿತಿಗಳಿಗೆ ಬೇರಾಗಿದೆ. ಶಂಕರ್ ಅವರಿಗೆ ಕಾಳಜಿ ಮತ್ತು ಬದ್ಧತೆ ಇದ್ದು, ಸಾಹಿತ್ಯದಲ್ಲಿ ಅದನ್ನು ತಂದಿದ್ದಾರೆ.

ರಾಜ್ಯದಲ್ಲಿ ನಾವು ಅಧಿಕಾರಕ್ಕೆ ಬಂದ ನಂತರ ಮಾನವೀಯತೆ, ಸ್ವಾಭಿಮಾನ ಮತ್ತು ಸಮಾನತೆಯ ಆಧಾರದ ಮೇಲೆ ಪೌರ ಕಾರ್ಮಿಕರನ್ನು ಖಾಯಂ ಮಾಡಿದ್ದೇವೆ. ಜಿಲ್ಲೆಯಲ್ಲಿ ಸಚಿವ ಸಂಪುಟ ನಡೆಸಿದ್ದು, ಜಿಲ್ಲಾ ಕೇಂದ್ರಕ್ಕೆ ಶಾಶ್ವತವಾಗಿ ಕುಡಿಯುವ ನೀರು ಯೋಜನೆ ತಂದಿದ್ದೇವೆ. ಹನೂರು ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಇದ್ದು, ಜಿಲ್ಲೆಯನ್ನು ಹೆಚ್ಚಿನ ಅಭಿವೃದ್ಧಿ ಮಾಡಲು ಸರ್ಕಾರ ಪಣತೊಟ್ಟಿದೆ ಎಂದರು.

ಅಧಿಕಾರ ಇರುವವರು ಕಾನೂನುಗಳನ್ನು ತಮ್ಮ ಹಿತಕ್ಕೆ ಬಳಸಿಕೊಳ್ಳಲು ಮುಂದಾದಾಗ ಅವರ ವಿರುದ್ಧ ಗಟ್ಟಿಯಾಗಿ ನಿಲ್ಲಬೇಕಿದೆ. ಒಳಮೀಸಲಾತಿ ಎಲ್ಲರಿಗೂ ಸಮಾನವಾಗಿದ್ದು, ತಾವು ಅಧಿಕಾರದಲ್ಲಿ ಇದ್ದಾಗ ಒಳಮೀಸಲಾತಿ ಜಾರಿ ಮಾಡಿದವರು ಇಂದು ವಿರೋಧಿ ಮಾತುಗಳನ್ನಾಡುತ್ತಿದ್ದಾರೆ. ನಮ್ಮನ್ನು ಜಾತಿ ಜಾತಿಗಳಾಗಿ ಹೊಡೆಯಲು ಹಲವರು ಮುಂದಾಗುತ್ತಿದ್ದು, ಅಂಬೇಡ್ಕರ್ ಬಯಸಿದಂತೆ ನಾವೆಲ್ಲರೂ ಒಂದಾಗಿ ಸಾಗಬೇಕಿದೆ ಎಂದು ತಿಳಿಸಿದರು.

ಶಂಕರ್ ಸಿ.ಅಂಕನಶೆಟ್ಟಿಪುರ ಅವರು ಸಾಹಿತಿ ಹಾಗೂ ಹೋರಾಟಗಾರರಾಗಿದ್ದು, ಸಾಹಿತ್ಯ ದೃಷ್ಟಿಕೋನ ಮನುಷ್ಯತ್ವದ ಪರವಾಗಿ ಇರುತ್ತದೆ. ಚಾಮರಾಜನಗರ ಜಿಲ್ಲೆಯ ಜಾನಪದ ಸಾಹಿತ್ಯಕ್ಕೆ ಅತ್ಯಂತ ಹೆಸರುವಾಸಿಯಾಗಿದ್ದು, ಮಾನವೀಯತೆ ಮತ್ತು ಸಮಾನತೆಯಿಂದ ಬದುಕುವುದೇ ಜಾನಪದ ಸಾಹಿತ್ಯವಾಗಿದೆ. ನಾವು ಈ ದೇಶದ ಮೂಲ ನಿವಾಸಿಗಳಾಗಿದ್ದು, ಇಂದಿಗೂ ನಮಗೆ ಅಗತ್ಯ ಹಕ್ಕು ಅಧಿಕಾರಿಗಳು ದೊರೆತಿಲ್ಲ. ನಮ್ಮನ್ನು ಆಳುವವರು ತಮಗೆ ಇಷ್ಟ ಬಂದಂತೆ ಆಡಳಿತ ನಡೆಸುವ ಮೂಲಕ ನಮ್ಮನ್ನು ವಂಚನೆ ಮಾಡುತ್ತಿದ್ದಾರೆ ಎಂದು ಹೇಳಿದರು.

ಸಾಹಿತಿ ಶಂಕನಪುರ ಮಹಾದೇವ ಮಾತನಾಡಿ, ಪೌರಕಾರ್ಮಿಕರು ನಿತ್ಯವೂ ಪ್ರಾತಃ ಸ್ಮರಣೀಯರು. ಶಂಕರ್ ಅವರು ಎಲ್ಲರೂ ಮೆಚ್ಚುವಂತಹ ಕೆಲಸವನ್ನು ಮಾಡಿದ್ದಾರೆ. ಚಾಮರಾಜನಗರದಲ್ಲಿರುವ ಎಲ್ಲಾ ಗ್ರಾಮಗಳಿಗೂ ಭೇಟಿ ಕೊಟ್ಟು ಪೌರಕಾರ್ಮಿಕ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಪೌರಕಾರ್ಮಿಕರ ಜೀವನ ಎಷ್ಟೊಂದು ಕಷ್ಟದಲ್ಲಿದ್ದಾರೆ. ಅವರು ಸಮಾಜದ ಮುಖ್ಯವಾಹಿನಿಗೆ ಬರುವ ನಿಟ್ಟಿನಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕಿದೆ ಎಂದು ತಿಳಿಸಿದರು.

ಹಕ್ಕು ಪತ್ರ, ನಿವೇಶನ, ವಿದ್ಯುತ್ ಸಂಪರ್ಕ ಕಲ್ಪಿಸುವುದು, ಸ್ಮಶಾನ, ಸಮುದಾಯ ಭವನ ನಿರ್ಮಾಣ ಮಾಡುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸಿದ್ದಾರೆ ಎಂದು ತಿಶಂಕರ್ ಅವರು ಸ್ವಯಂ ಪ್ರತಿಭೆಯನ್ನು ಹೊಂದಿದ್ದು, ಎಲ್ಲಾ ಕ್ಷೇತ್ರಗಳಲ್ಲೂ ತಮ್ಮದೇಯಾದ ಛಾಪನ್ನು ಮೂಡಿಸಿದ್ದಾರೆ. ಕುವೆಂಪು ಅವರ ಜಗದ ಜಲಗಾರನ ಪ್ರತಿರೂಪವಾಗಿ ಶಂಕರ್ ಸಿ.ಅಂಕನಶೆಟ್ಟಿಪುರ ಅವರು ಕಾಣುತ್ತಾರೆ ಎಂದರು.

ರೇಷ್ಮೆ ಕೃಷಿ ನಿರ್ದೇಶಕ ಸಿ.ಟಿ.ಶಿಲ್ಪಾನಾಗ್ ಮಾತನಾಡಿ, ಕನ್ನಡ ಸಾಹಿತ್ಯ ಲೋಕಕ್ಕೆ 8 ಕೃತಿಗಳನ್ನು ಕೊಟ್ಟಿರುವ ಶಂಕರ್ ಸಿ.ಅಂಕನಶೆಟ್ಟಿಪುರ ಅವರು ಸಂಚಲನ ಕೃತಿಯ ಮೂಲಕ ಸಂಚಲನವನ್ನೇ ಸೃಷ್ಟಿ ಮಾಡಿದ್ದಾರೆ. ಪೌರಕಾರ್ಮಿಕರ ಬದುಕು, ಬವಣೆ ಹಾಗೂ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳನ್ನು ಪುಸ್ತಕ ರೂಪದಲ್ಲಿ ತರುವುದರ ಮೂಲಕ

ಮಾಜಿ ಮಹಾಪೌರ ಎಂ.ನಾರಾಯಣ ಮಾತನಾಡಿ, ಇಡೀ ರಾಜ್ಯದಲ್ಲೇ ಶಂಕರ್ ಸಿ. ಅಂಕನಶೆಟ್ಟಿಪುರ ಅವರು ಪೌರಕಾರ್ಮಿಕ ಸಮುದಾಯದ ಏಕಮಾತ್ರ ಕವಿಯಾಗಿದ್ದಾರೆ. ಸಾಹಿತ್ಯದ ಜೊತೆಗೆ ಶಂಕರ್ ಅವರು ಪೌರಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿದ್ದಾರೆ. ಅವರ ಹೋರಾಟವನ್ನು ಗಮನಿಸಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಶಂಕರ್ ಅವರನ್ನು ಆಯೋಗದ ಸದಸ್ಯರಾಗಿ ಆಯ್ಕೆ ಮಾಡಿದ್ದಾರೆ ಎಂದು ಹೇಳಿದರು.

ಟಿ.ನರಸೀಪುರ ನಳಂದ ವಿಶ್ವ ವಿದ್ಯಾಲಯದ ಬೋಧಿರತ್ನ ಭಂತೇಜಿ ಸಾನಿಧ್ಯವಹಿಸಿ ಮಾತನಾಡಿ, ಯಾರು ಸಮಾಜದಲ್ಲಿ ಜಾಗೃತರಾಗಿ, ನಿಸ್ವಾರ್ಥವಾಗಿ ಸೇವೆಸಲ್ಲಿಸುತ್ತಾರೋ ಅವರಿಗೆ ಸಾಧನೆ ಸುಲಭವಾಗುತ್ತದೆ. ಇದಕ್ಕೆ ಶಂಕರ್ ಸಿ. ಅಂಕನಶೆಟ್ಟಿಪುರ ಅವರು ಉದಾಹರಣೆಯಾಗಿದ್ದಾರೆ ಎಂದು ತಿಳಿದರು.

ಕಾರ್ಯಕ್ರಮದಲ್ಲಿ ಹೋರಾಟಗಾರ ಸಂಘಸೇನಾ, ಡಾ.ಎಚ್.ಸಿ.ಮಹದೇವಪ್ಪ ಅವರ ಅಭಿಮಾನಿ ಬಳಗದ ಅಧ್ಯಕ್ಷ ಡಾ.ವಿ.ಎನ್. ಮಹದೇವಯ್ಯ, ಕವಿ ಶಂಕರ ಸಿ.ಅಂಕನಶೆಟ್ಟಿಪುರ ಹಾಗೂ ಇತರರು ಉಪಸ್ಥಿತರಿದ್ದರು.

## ಕಷ್ಟದಲ್ಲಿರುವ ವ್ಯಕ್ತಿಗಳಿಗೆ ಸಹಾಯ ಮಾಡುವುದು ದೇವರು ಮೆಚ್ಚುವ ಕೆಲಸ: ಪುಣಜನೂರು ದೊರೆಸ್ವಾಮಿ

**ಚಾಮರಾಜನಗರ:** ಕಷ್ಟದಲ್ಲಿರುವಂತ ಯಾವುದೇ ವ್ಯಕ್ತಿಗಾಗಲಿ ಸಹಾಯ ಮಾಡುವುದು ದೇವರು ಮೆಚ್ಚುವ ಕೆಲಸ ಎಂದು ಪರಿಸರವಾದಿ ಪುಣಜನೂರು ದೊರೆಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಈಶ ಚಾರಿಟಬಲ್ ಟ್ರಸ್ಟ್ ಹೆಬ್ಬಸೂರು, ಹಾಗೂ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ವೇದಿಕೆ ಸಂಯುಕ್ತ ಆಶ್ರಯದಲ್ಲಿ ನಿವೃತ್ತ ಶಿಕ್ಷಕ ವಿ. ರಾಜೇಂದ್ರ ಹಾಗೂ ಇವರ ಪತ್ನಿ ನಾಗಿನಿ ಟಿ. ಎಸ್. ಇವರ ವಿವಾಹ ಮಹೋತ್ಸವದ ಸವಿನೆನಪಿನಲ್ಲಿ ಏರ್ಪಡಿಸಲಾಗಿದ್ದ ಸರಳ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಇತ್ತೀಚಿನ ದಿನಗಳಲ್ಲಿ ವಿವಾಹ ಮಹೋತ್ಸವ ಹಾಗೂ ಹುಟ್ಟು ಹಬ್ಬವನ್ನು ದುಬಾರಿ ವೆಚ್ಚ ಮಾಡಿ ಅದ್ದೂರಿಯಾಗಿ ಆಚರಿಸುತ್ತಾರೆ, ಆದರೆ ಶಿಕ್ಷಕ ವಿ. ರಾಜೇಂದ್ರ ಅವರು ಮತ್ತೊಬ್ಬರಿಗೆ ನೆರವಾಗುವ ರೀತಿಯಲ್ಲಿ ಸರಳ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ ಎಂದು ಹೇಳಿದರು.



ಅಖಿಲ ಕರ್ನಾಟಕ ಕನ್ನಡ ಸೇನಾ ಪಡೆ ರಾಜ್ಯ ಅಧ್ಯಕ್ಷ ಚಾ.ರಂ ಶ್ರೀನಿವಾಸಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ರವಿಚಂದ್ರ ಪ್ರಸಾದ್, ಎಲ್. ಶಿವಲಿಂಗ ಮೂರ್ತಿ, ಪತ್ರಕರ್ತ ಎ. ಡಿ. ಸಿಲ್ವ, ಕವಿ ತೆರೆಕಣಾಂಬಿ ಎಸ್. ಬಸವರಾಜ್, ಎಸ್ ಪಿ ಬಿ ಸಂಘದ ಶಿವಣ್ಣ, ಶಿಕ್ಷಕ ರಂಗನಾಥ್, ಸ್ವಯಂ ಪ್ರೇರಣೆ ಪತ್ರಿಕೆ ಸಂಪಾದಕರಾದ ಇರಸವಾಡಿ ಸಿದ್ದಪ್ಪಾಜಿ ಸೇರಿದಂತೆ ಮೊದಲಾದರವರು ಇದ್ದರು.

## ಲೂಪಸ್ ಕುರಿತು ಜಾಗೃತಿ ಕಾರ್ಯಕ್ರಮ



**ಮೈಸೂರು:** ನಗರದ ಶಾರದಾದೇವಿ ನಗರದಲ್ಲಿರುವ ರ್ಯುಮಾ ಕೇರ್ ಕ್ಲಿನಿಕ್‌ನಲ್ಲಿ ಮೇ 26 ರಂದು ಬೆಳಗ್ಗೆ 11.30 ರಿಂದ ಸಂಜೆವರೆಗೆ ಲೂಪಸ್ ಕಾಯಿಲೆ ಕುರಿತು ಉಚಿತ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕ್ಲಿನಿಕ್‌ನ ವೈದ್ಯ ಡಾ.ಚೆಂಗಪ್ಪ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ದೇಶದಲ್ಲಿ ಒಂದು ಲಕ್ಷದಲ್ಲಿ ಸುಮಾರು 50 ಮಂದಿ ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಆದರೆ ಬಹಳಷ್ಟು ಮಂದಿಗೆ ಇದರ ಅರಿವಿರುವುದಿಲ್ಲ. ನಮ್ಮ ದೇಹದ ರೋಗ ನಿರೋಧಕ ವ್ಯವಸ್ಥೆ ನಮ್ಮ ದೇಹದ ಮೇಲೆಯೇ ತಿರುಗಿಬಿದ್ದು, ಅನೇಕ ಅನಾರೋಗ್ಯಗಳಿಗೆ ಕಾರಣವಾಗುವ ಕಾಯಿಲೆ ಇದಾಗಿದೆ. ಕೆಲವರಿಗೆ ಕೇವಲ ಒಂದು ವಾರದಲ್ಲಿ ವಾಸಿಯಾಗುವಂತಿದ್ದರೆ, ಹಲವರಿಗೆ ಸುಮಾರು ಏಳು ವರ್ಷ ಬೇಕಾಗಬಹುದಾಗಿದೆ ಎಂದರು.

ಮತ್ತೋರ್ವ ವೈದ್ಯ ಡಾ. ರಶ್ವಿತ್ ಉಮೇಶ್ ಮಾತನಾಡಿ, ಲೂಪಸ್ ಕಾಣಿಸಿಕೊಳ್ಳಲು ನಿಖರ ಕಾರಣ ಪತ್ತೆಯಾಗಿಲ್ಲ. ಆದರೆ ಥೈರಾಯ್ಡ್ ಮೊದಲಾದ ಸಮಸ್ಯೆಯಿಂದ ಬಳಲುತ್ತಿರುವವರಲಿ ಕಾಣಿಸಿಕೊಳ್ಳಬಹುದಾಗಿದೆ. ಆಗಾಗ್ಗೆ ಬರುವ ಜ್ವರ, ರಕ್ತದ ಕಣಗಳ ಕುಸಿಯುವಿಕೆ ಮೊದಲಾದವು ಲಕ್ಷಣಗಳಾಗಿವೆ. ಹೀಗಾಗಿ ಒಮ್ಮೆ ತಪಾಸಣೆಗೊಳಗಾಗುವುದು, ಸಕಾದಲ್ಲಿ ಚಿಕಿತ್ಸೆ ಪಡೆಯುವುದು, ಇದರ ಬಗ್ಗೆ ಅರಿವು ಮೂಡಿಸಿಕೊಳ್ಳುವುದು ಅಗತ್ಯ. ಹೆಚ್ಚಿನ ಮಾಹಿತಿಗೆ ದೂ. 86609 03284 ನ್ನು ಸಂಪರ್ಕಿಸಲು ಕೋರಿದರು.

### ಅಂಕುರ್ ಗ್ಲೋಬಲ್ ಅಕಾಡೆಮಿ ಶಾಲೆಯಲ್ಲಿ ಜಿಲ್ಲಾ ಮಟ್ಟದ ಸ್ಕೇಟಿಂಗ್ ಸ್ಪರ್ಧೆ

## ಮಾನಸಿಕ ಆರೋಗ್ಯಕ್ಕೆ ಕ್ರೀಡೆ ಮುಖ್ಯ: ವಿ.ಶ್ರೀನಿವಾಸ ಪ್ರಸಾದ್

**ಚಾಮರಾಜನಗರ:** ಸ್ಕೇಟಿಂಗ್ ಮಕ್ಕಳ ದೈಹಿಕ, ಮಾನಸಿಕ ಆರೋಗ್ಯಕ್ಕೆ ಅತ್ಯುತ್ತಮವಾದ ಕ್ರೀಡೆಯಾಗಿದೆ ಎಂದು ಕ್ರೀಡಾಪಟು ವಿ.ಶ್ರೀನಿವಾಸ ಪ್ರಸಾದ್ ಹೇಳಿದರು.

ನಗರದ ಮರಿಯಾಲ ಮೈಸೂರು ರಸ್ತೆಯಲ್ಲಿರುವ ಅಂಕುರ್ ಗ್ಲೋಬಲ್ ಅಕಾಡೆಮಿ ಶಾಲೆಯಲ್ಲಿ ಚಾಮರಾಜನಗರ ಜಿಲ್ಲಾ ಸ್ಕೇಟಿಂಗ್ ಅಸೋಸಿಯೇಷನ್, ಅಂಕುರ್ ಗ್ಲೋಬಲ್ ಅಕಾಡೆಮಿ ವತಿಯಿಂದ ಜಿಲ್ಲಾ ಮಟ್ಟದ ಸ್ಕೇಟಿಂಗ್ ಸರ್ಧೆಗೆ ಚಾಲನೆ ನೀಡಿ ಮಾತನಾಡಿದರು.

ಸ್ಕೇಟಿಂಗ್ ಕೇವಲ ಒಂದು ಮೋಜಿನ ಆಟವಲ್ಲ. ಇದು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಅತ್ಯುತ್ತಮವಾದ ಕ್ರೀಡೆಯಾಗಿದೆ. ಇದು ದೇಹದ ಸಮತೋಲನವನ್ನು ಹೆಚ್ಚಿಸುತ್ತದೆ, ಹೃದಯದ ಆರೋಗ್ಯವನ್ನು ಸುಧಾರಿಸುತ್ತದೆ ಎಂದರು.

ಅಂಕುರ್ ಗ್ಲೋಬಲ್ ಅಕಾಡೆಮಿ ಶಿಕ್ಷಣದ ಜೊತೆಗೆ ಕ್ರೀಡೆಗೆ ಒತ್ತು ನೀಡಿರುವುದು ಸಂತಸವಾಗಿದೆ. ನಗರದ ಡಾ.ಬಿ.ಆರ. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸ್ಕೇಟಿಂಗ್ ಅಂಕಣ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು, ಮುಂದಿನ ದಿನಗಳಲ್ಲಿ ಒಂದು ಸುಸಜ್ಜಿತ ಕ್ರೀಡಾಂಗಣ ಅಗಲಿದೆ. ಇದಕ್ಕೆ ಕಾರಣವಾದ ಸರ್ಕಾರ, ಜಿಲ್ಲಾಡಳಿತ, ಜಿಲ್ಲೆಯ ಶಾಸಕರು, ಅಧಿಕಾರಿಗಳಿಗೆ ಈ ಮೂಲಕ ಅಭಿನಂದನೆ ಸಲ್ಲಿಸಲಾಗುತ್ತದೆ ಎಂದರು.




ಅಂಕುರ್ ಗ್ಲೋಬಲ್ ಅಕಾಡೆಮಿ ಅಧ್ಯಕ್ಷ ಆದರ್ಶ ಅರಸ್, ಸಿಇಓ ಕನ್ನಿಕಾಶ್ರೀ, ಪ್ರಾಂಶುಪಾಲೆ ಪರಿಮಳಾರಾಣಿ, ತರಬೇತುದಾರ ಪುರ್ಖಾನ್, ಅನ್ಸರ್ ಅಲಿಖಾನ್, ತನ್ವಿರ್, ಶಿವಶಂಕರ್, ಮಕ್ಕಳು, ಪೋಷಕರು ಭಾಗವಹಿಸಿದ್ದರು.

## ವೀರಶೈವ ಮಹಾಸಭಾ ಚುನಾವಣೆ: ಬೆಂಬಲಿಸಲು ಸಾರ್ವಜನಿಕರಲ್ಲಿ ಮನವಿ



**ಮೈಸೂರು:** ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಹಾಗೂ ನಿರ್ದೇಶಕರ ಸ್ಥಾನಕ್ಕೆ ಮೇ 24 ರಂದು ನಗರದಲ್ಲಿ ಚುನಾವಣೆ ನಡೆಯಲಿದ್ದು, ಸಮುದಾಯದ ಏಳಿಗೆಗಾಗಿ ಶ್ರಮಿಸುತ್ತಿರುವ ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಹಾಗೂ ಎಲ್. ಮಹದೇವಸ್ವಾಮಿ ಮತ್ತು ಚಿಕ್ಕಾನ್ಯ ಎಸ್.ಶಿವಕುಮಾರ್ ಅವರನ್ನು ನಿರ್ದೇಶಕರ ಸ್ಥಾನಕ್ಕೆ ಚುನಾಯಿಸಬೇಕೆಂದು ಹಡಜನ ಟಿ. ಲಿಂಗರಾಜು ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಬೇಕಾಗಿತ್ತು. ಆದರೆ ಈಗಿನ ಜಿಲ್ಲಾಧ್ಯಕ್ಷರ ಓರ್ವರೊಡನೆ ಶಾಮೀಲಾಗಿರುವ ಕಾರಣ ಅನಿವಾರ್ಯವಾಗಿ ಚುನಾವಣೆ ನಡೆಯಬೇಕಾಗಿ ಬಂದಿದೆ. ಆದರೂ ತಾವು ಗೆಲ್ಲುವ ವಿಶ್ವಾಸವಿದೆ ಎಂದರು.

ತಾವು ರಾಜಕೀಯ ಲಾಭಕ್ಕಾಗಿ ಸ್ಪರ್ಧಿಸುತ್ತಿಲ್ಲ, ಬಸವಣ್ಣನವರ ತತ್ವಗಳನ್ನು ನಂಬಿಕೊಂಡು, ನಿಷ್ಠೆಯಿಂದ ಸಮಾಜಕ್ಕಾಗಿ ಕೆಲಸ ಮಾಡುತ್ತಿದ್ದೇನೆ. ಜಿಲ್ಲಾ ನಿರ್ದೇಶಕನಾಗಿ ಸೇವೆ ಸಲ್ಲಿಸಿದ ವೇಳೆ ನಗರದ ಜೆಎಸ್‌ಎಸ್ ಬಡಾವಣೆಯಲ್ಲಿ ಸಿಎ ನಿವೇಶನ ದೊರೆಯಲು ಮೂಲ ಕಾರಣ ನಾನಾಗಿದ್ದೇನೆ. ಇದಲ್ಲದೆ ಸಂಘಟನೆಯ ಬಲವರ್ಧನೆಗೆ ಶ್ರಮಿಸಿದ್ದೇನೆ. ಮುಂದಿನ ದಿನಗಳಲ್ಲಿ ಭವ್ಯ ಬಸವ ಭವನ ನಿರ್ಮಾಣಕ್ಕೆ ಶ್ರಮಿಸಲಿದ್ದೇನೆ. ಸಮುದಾಯದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಿದ್ದೇನೆ. ಸಮುದಾಯದ ಜನರ ಸಮಸ್ಯೆ ಬಗೆಹರಿಸಲು ಯತ್ನಿಸುವೆ, ಮಠಾಧೀಶರ ಮಾರ್ಗದರ್ಶನದಲ್ಲಿ ಯುವ ಸಮೂಹದ ಆರೋಗ್ಯಕರ ಬೆಳವಣಿಗೆಗೆ ಒತ್ತು ನೀಡಲಿದ್ದೇನೆ. ಹೀಗಾಗಿ ಮತದಾರರು ತಮ್ಮನ್ನು ಚುನಾಯಿಸಬೇಕೆಂದು ಕೋರಿದರು.

ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿರುವ ಎಲ್. ಮಹದೇವಸ್ವಾಮಿ ಹಾಗೂ ಚಿಕ್ಕಾನ್ಯ ಎಸ್. ಶಿವಕುಮಾರ್ ಇದ್ದರು.

### ಮೇ 28ರಂದು ಬಕ್ರೀದ್ ಆಚರಣೆ ಹಿನ್ನೆಲೆ

# ಜಿಲ್ಲಾಧಿಕಾರಿ ಶ್ರೀರೂಪ ಅಧ್ಯಕ್ಷತೆಯಲ್ಲಿ ಸೌಹಾರ್ದ ಸಭೆ

ಚಾಮರಾಜನಗರ, ಇದೇ ತಿಂಗಳ ಮೇ 28ರಂದು ಆಚರಿಸಲಾಗುವ ಬಕ್ರೀದ್ ಹಬ್ಬದ ಹಿನ್ನೆಲೆ ನಗರದಲ್ಲಿಂದು ಜಿಲ್ಲಾಧಿಕಾರಿ ಶ್ರೀರೂಪ ಅವರ ಅಧ್ಯಕ್ಷತೆಯಲ್ಲಿ ಸೌಹಾರ್ದ ಸಭೆ ನಡೆಯಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬಕ್ರೀದ್ ಆಚರಣೆ ಹಿನ್ನೆಲೆಯಲ್ಲಿ ಸಮುದಾಯದ ಮುಖಂಡರ ಸಮ್ಮುಖದಲ್ಲಿ ಪೂರ್ವಭಾವಿಯಾಗಿ ಆಯೋಜಿಸಲಾಗಿದ್ದ ಸೌಹಾರ್ದ ಸಭೆಯಲ್ಲಿ ಮೊದಲಿಗೆ ಮುಖಂಡರ ಸಲಹೆ, ಅಭಿಪ್ರಾಯ, ಅನಿಸಿಕೆಗಳನ್ನು ಜಿಲ್ಲಾಧಿಕಾರಿಯವರು ಆಲಿಸಿದರು.

ಮುಖಂಡರು ಮಾತನಾಡಿ ಪ್ರತಿವರ್ಷದಂತೆ ಈ ಬಾರಿಯು ಸಹ ತ್ಯಾಗ, ಬಲಿದಾನದ ಬಕ್ರೀದ್ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಸರ್ವಜನಾಂಗದ ಶಾಂತಿಯ ತೋಟವಾಗಿರುವ ಚಾಮರಾಜನಗರ ಜಿಲ್ಲೆಯಲ್ಲಿ ಸಮಾಜಮುಖಿ ಚಿಂತನೆಗಳ ನೆಲೆಗಟ್ಟಿನಲ್ಲಿ ಹಬ್ಬ, ಜಾತ್ರೆ, ಉತ್ಸವಗಳನ್ನು ಸೌಹಾರ್ದಯುತವಾಗಿ ಆಚರಿಸಲು ಜಿಲ್ಲಾಡಳಿತ, ಪೊಲೀಸ್ ಇಲಾಖೆ ಸೇರಿದಂತೆ ಎಲ್ಲರ ಸಹಕಾರ ಅಗತ್ಯವಾಗಿದೆ



ಎಂದರು. ಬಕ್ರೀದ್ ಹಬ್ಬದ ದಿನದಂದು ಮೆರವಣಿಗೆ, ಸಾಮೂಹಿಕ ಪ್ರಾರ್ಥನೆ ನಡೆಯಲಿದೆ. ಮೆರವಣಿಗೆ ಸಮಯದಲ್ಲಿ ಪ್ರಮುಖ ರಸ್ತೆಗಳಲ್ಲಿ ಸಂಚಾರದಟ್ಟಣೆ ನಿಯಂತ್ರಿಸಬೇಕು. ಅಲ್ಲದೆ ಸರಕುಗಳನ್ನು ಅನ್‌ಲೋಡ್ ಮಾಡುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ ಮೆರವಣಿಗೆ ಸೂಸೂತ್ರವಾಗಿ ನಡೆಯಲು ಅವಕಾಶ ಕಲ್ಪಿಸಿಕೊಡಬೇಕು. ರಸ್ತೆಗಳು ಸ್ವಚ್ಛತೆಯಿಂದ ಕೂಡಿರಬೇಕು. ಹಬ್ಬದ ಸಂದರ್ಭದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿರಬೇಕು. ಅವಶ್ಯವಿದ್ದರೆ ಟ್ಯಾಂಕರ್‌ಗಳ ಮೂಲಕ ನೀರು ಒದಗಿಸಬೇಕು. ತ್ಯಾಜ್ಯ ಹಾಗೂ ಕಸ ಸಂಗ್ರಹಣೆ ವಾಹನಗಳು ನಿಯಮಿತವಾಗಿ ಕಸ ಸಂಗ್ರಹಿಸಬೇಕು ಎಂಬುದು ಸೇರಿದಂತೆ ಹಲವು ಅಭಿಪ್ರಾಯಗಳು ಸಭೆಯಲ್ಲಿ ವ್ಯಕ್ತವಾದವು.

ಮುಖಂಡರ ಸಲಹೆ, ಅಭಿಪ್ರಾಯಗಳನ್ನು ಆಲಿಸಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಮಾತನಾಡಿ ಬಕ್ರೀದ್ ಹಬ್ಬದ ಶುಭಾಷಯಗಳನ್ನು ತಿಳಿಸಿದರು. ಪ್ರಸ್ತುತ ಕುಡಿಯುವ ನೀರನ್ನು ನಗರದ ಬಡಾವಣೆಗಳಿಗೆ ಪ್ರತಿ ಮೂರು ದಿನಗಳಿಗೊಮ್ಮೆ ಸರಬರಾಜು ಮಾಡಲಾಗುತ್ತಿದೆ. ಹಬ್ಬದ ಸಂದರ್ಭದಲ್ಲಿ ಅವಶ್ಯವಿರುವೆಡೆ ಕುಡಿಯುವ ನೀರನ್ನು ನಿರಂತರವಾಗಿ ಪೂರೈಸುವ ಮೂಲಕ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುವುದು. ಕಸ ಸಂಗ್ರಹಿಸುವ ವಾಹನಗಳಿಗೆ ಹಸಿಕಸ ಹಾಗೂ ಒಣಕಸಗಳಾಗಿ ವಿಂಗಡಿಸಿ ನೀಡುವ ಮೂಲಕ ನಗರದ ಸ್ವಚ್ಚತೆ ಹಾಗೂ ನೈರ್ಮಲ್ಯಕ್ಕೆ ಸಹಕರಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಅವರು ಮಾತನಾಡಿ ಜಿಲ್ಲೆಯಲ್ಲಿ ಯಾವುದೇ ಧಾರ್ಮಿಕ ಹಬ್ಬಗಳು ಸೌಹಾರ್ದಯುತವಾಗಿ ನಡೆಯುತ್ತಿದೆ. ಸಾಮೂಹಿಕ ಪ್ರಾರ್ಥನೆ ಹಾಗೂ ಮೆರವಣಿಗೆ ಸಮಯದಲ್ಲಿ ಯುವಕರು ವಾಹನಗಳನ್ನು ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸದೇ ಕ್ರಮಬದ್ಧವಾಗಿ ಪಾರ್ಕಿಂಗ್ ಮಾಡಬೇಕು. ಅಪಘಾತಗಳಿಗೆ ಅವಕಾಶವಾಗದಂತೆ ತ್ರಿಬಲ್ ರೈಡಿಂಗ್ ಮಾಡಬಾರದು. ಹಬ್ಬದ ವೇಳೆ ಸಾಮಾಜಿಕ ಜಾಲತಾಣಗಳನ್ನು ಮಿತವಾಗಿ ಬಳಸಬೇಕು. ಈ ಬಗ್ಗೆ ಧಾರ್ಮಿಕ ಗುರುಗಳು ಯುವಕರಿಗೆ ಜಾಗೃತಿ ಮೂಡಿಸಬೇಕು. ಯಾವುದೇ ಅನಾಹುತ, ಅವಘಡ ಸಂಭವಿಸುವ ಮೊದಲು ಪೊಲೀಸರ ಗಮನಕ್ಕೆ ತರಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಎಂ.ಎನ್. ಶಶಿಧರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ವೆಂಕಟೇಶ್, ನಗರಸಭೆ ಪೌರಾಯುಕ್ತರಾದ ಪರಶುರಾಮ್ ಛಲವಾದಿ, ಗುಂಡ್ಲುಪೇಟೆ ಪುರಸಭೆ ಮುಖ್ಯಾಧಿಕಾರಿ ಶರವಣ, ಕೊಳ್ಳೇಗಾಲ ತಹಶೀಲ್ದಾರ್ ಬಸವರಾಜು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಪಶುಪಾಲನಾ ಇಲಾಖೆ ಉಪನಿರ್ದೇಶಕರಾದ ಮಂಜುನಾಥ್, ವಿವಿಧ ಸಮುದಾಯದ ಮುಖಂಡರುಗಳಾದ ವಸೀಂ ಪಾಶ, ಆಯುಬ್ ಖಾನ್, ನಯಾಜ್ ಉಲ್ಲಾ, ಚಾ.ರಂ. ಶ್ರೀನಿವಾಸಗೌಡ, ಶಿವಣ್ಣ, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಉನ್ನತ ಶಿಕ್ಷಣದ ಗುರಿ ಸಾಧಿಸಲು ತರಬೇತಿ

## ನಗರಸಭಾಧ್ಯಕ್ಷ ಕೆ.ಶೇಷಾದಿ ಹೇಳಿಕೆ | ಅಂಬೇಡ್ಕರ್ ಜಯಂತಿ, ಪ್ರತಿಭಾ ಪುರಸ್ಕಾರ

ರಾಮನಗರ: ನಗರಸಭೆಯಲ್ಲಿನ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಜೆಇಇ, ನೀಟ್ ಮುಂತಾದ ವೃತ್ತಿಪರ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲಕರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ನಗರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 135 ಜಯಂತಿ ಮತ್ತು ಅಕ್ಷರೋತ್ಸವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಗರಸಭೆಯಲ್ಲಿ ಶೇ 24.7 ಮತ್ತು ಶೇ 7.2 ಅನುದಾದಡಿಯಲ್ಲಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲಕ್ಕೆ ಕ್ರಮಗಳನ್ನುವಹಿಸಲಾಗಿದೆ. ಎಸ್ಸಿ, ಎಸ್ಟಿ ಸಮುದಾಯದ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ನೆರವು ನೀಡಲಾಗುತ್ತಿದೆ. ಈ ಸಮುದಾಯಗಳ ಪೈಕಿ ಆರ್ಥಿಕವಾಗಿ ಹಿಂದುಳಿದವರನ್ನು ಮುಂಚೂಣಿ ತೆಗೆದುಕೊಳ್ಳಲು ಕಾರ್ಯಕ್ರಮಗಳು ಜಾರಿಯಲ್ಲಿವೆ ಎಂದರು.

ರಾಮನಗರದಲ್ಲಿರುವ ಪ್ರತಿಭಾವಂತರನ್ನು ಪ್ರೋತ್ಸಾಹಿಸುವಲ್ಲಿ ನಗರಸಭೆ ಸದಾ ಮುಂದಿದೆ ಎಂದರು. ಇದೇ ನಿಟ್ಟಿನಲ್ಲಿ ದಲಿತ ಸಂಘರ್ಷ ಸಮಿತಿ (ಭೀಮವಾದ) ಕೂಡ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

### ಅಂಬೇಡ್ಕರ್ ಅವರನ್ನು ಅನುಸರಿಸಲು ವಿದ್ಯಾರ್ಥಿಗಳಿಗೆ ಶಿವಕುಮಾರ್ ಕರೆ

ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದ ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಶಿವಕುಮಾರ್ ಮಾತನಾಡಿ, ಸಮುದಾಯವೊಂದರಲ್ಲಿರುವ ಯೋಗ್ಯ ವ್ಯಕ್ತಿಗಳನ್ನು ಆಧರಿಸಿ ಆ ಸಮುದಾಯಕ್ಕೆ ಸಮಾಜದಲ್ಲಿ ಗೌರವ ಸಿಗುತ್ತದೆ. ಹೀಗಾಗಿ ಸಮಾಜ ಮತ್ತು ಸಮುದಾಯದ ಗೌರವ ಉಳಿಸಿಕೊಳ್ಳಲು ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು ಆಗಲೇ ನೀವು ಅಂಬೇಡ್ಕರ್ ಅವರಿಗೆ ಸಲ್ಲಿಸುವ ಗೌರವ ಎಂದರು. ಅಂಬೇಡ್ಕರ್ ವಿಚಾರದಲ್ಲಿ ಮೆರವಣಿಗೆಗಳನ್ನು ಮಾಡುವುದರಿಂದ ಉಪಯೋಗವಿಲ್ಲ. ಸ್ವತಃ ಅಂಬೇಡ್ಕರ್ ಅವರು ವ್ಯಕ್ತಿ ಪೂಜೆಯನ್ನು ಟೀಕಿಸಿದ್ದರು ಎಂದರು.



ಅಂಬೇಡ್ಕರ್ ಗೌತಮ ಬುದ್ದರ ಅನುಯಾಯಿಗಾಗಿದ್ದರು. ಬುದ್ದನ ಪಂಚಶೀಲ ತತ್ವಗಳನ್ನು ಅಳವಡಿ ಸಿಕೊಂಡಿದ್ದರು. ವಿದ್ಯೆಗೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ಅಂಬೇಡ್ಕರ್ ತಮ್ಮ ನಡವಳಿಕೆಗೆ ಕೊಟ್ಟಿದ್ದರು. ನೀವು ಅಂಬೇಡ್ಕರರನ್ನು ಅನುಸರಿಸಿ ಎಂದು ಕರೆ ನೀಡಿದರು. ಅಂಬೇಡ್ಕರ್ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಪ್ರತಿ 12 ಗಂಟೆಗಳ ಕಾಲ ಜ್ಞಾನಾರ್ಜನೆಗೆ ಮೀಸಲಿಟ್ಟಿದ್ದರು. ಇಂದು ನೀವು ಕನಿಷ್ಠ 6 ಗಂಟೆಗಳಾದರೂ ಮೀಸಲಿಡಿ ಎಂದರು.

ದೇಶದ ನ್ಯಾಯವ್ಯವಸ್ಥೆಯಲ್ಲಿ ನ್ಯಾಯಾಧೀಶರ ಪೈಕಿ ಎಸ್ಸಿ,ಎಸ್ಟಿ ಸಮುದಾಯದವರ ಸಂಖ್ಯೆ ಶೇ 1ರಷ್ಟು ಮಾತ್ರವಿದೆ. ಐಎಎಸ್, ಐಪಿಎಸ್ ಮುಂತಾದ ಸೇವಾ ವ್ಯವಸ್ಥೆಯಲ್ಲಿ ಶೇ 22.5 ಮೀಸಲಾತಿ ಇದ್ದರೂ ಈ ಸಮುದಾಯಗಳ ಸಂಖ್ಯೆ ಕೇವಲ ಶೇ ಎರಡೂ ಮುಕ್ಕಾಲುರಷ್ಟಿದೆ. ಈ ಸಮುದಾಯದ ವಿದ್ಯಾರ್ಥಿಗಳಿಗೆ ದೇಶದ ನ್ಯಾಯಾಂಗ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಉನ್ನತ ಸ್ಥಾನಗಳನ್ನು ದಕ್ಕಿಸಿಕೊಳ್ಳಲು ಸಾಕಷ್ಟು ಅವಕಾಶಗಳಿವೆ. ಹೀಗಾಗಿ ಸಾಧನೆ ಮಾಡಿ ಎಂದರು.

ಇದೇ ವೇಳೆ ಅವರು ಬಸವಣ್ಣನವರ ಕಾಯಕ ನಿಷ್ಠೆಯ ಬಗ್ಗೆ ಮಾತನಾಡಿದರು. ಎಸ್.ಎಸ್.ಎಲ್.ಸಿ, ಪಿಯೂಸಿ ಕಾಲಘಟ್ಟ ಚಂಚಲ ಮನಸ್ಸು. ಆದರೆ ಇದೇ ವಯಸ್ಸಿನಲ್ಲಿ ಅಂಬೇಡ್ಕರ್ ಶಿಕ್ಷಣಾರ್ಜನೆಗೆ ಹೆಚ್ಚು ಗಮನ ಕೊಟ್ಟರು. ಅತ್ಯಂತ ಉನ್ನತ ಆಲೋಚನೆಗಳು ಇರಲಿ, ದೊಡ್ಡದೊಡ್ಡ ಕನಸು ಕಾಣಿ, ಕನಸನ್ನು ಸಾಕಾರಗೊಲಿಸಿಕೊಳ್ಳಲು ಶ್ರಮಿಸಿ ಐಐಟಿ, ಐಐಎಂ, ಐಐಎಸ್ಸಿ, ನ್ಯಾಷನಲ್ ಲಾ ಸ್ಕೂಲ್ ಮುಂತಾದ ಉತ್ಕೃಷ್ಟ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಪ್ರಯತ್ನಿಸಿ ಎಂದು ಅವರು ಶುಭಹಾರೈಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವುದರ ಮೂಲಕ ಕಾರ್ಯಕ್ರಮ ಆರಂಭವಾಯಿತು. ಸ್ಫೂರ್ತಿಧಾಮ ಬುದ್ಧವಿಹಾರದ ಪ್ರಮುಖರಾದ ಬಿಕ್ಕು ಧಮ್ಮವೀರ ದಿವ್ಯ ಸಾನಿಧ್ಯವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಲಿತ ಸಂಘರ್ಷ ಸಮಿತಿಯ (ಭೀಮವಾದ) ಅಧ್ಯಕ್ಷ ಎಂ.ಸಿ.ನಾರಾಯಣ್‌ವಹಿಸಿದ್ದರು. ನಗರಸಭಾ ಸದಸ್ಯ ಮುತ್ತುರಾಜ್, ಸಂವಿಧಾನ ಬಳಗದ ರಾಜ್ಯಾಧ್ಯಕ್ಷ ಜಯಕಾಂತ್ ಚಾಲುಕ್ಯ, ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಶಿವಕುಮಾರಸ್ವಾಮಿ, ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಂ.ಎನ್. ಜಯಪ್ರಕಾಶ್, ಸಮನ್ವಯ ಸಮಿತಿ ಜಿಲ್ಲಾಧ್ಯಕ್ಷ ಗವಿಯಪ್ಪ, ಹಿರಿಯ ದಲಿತ ಮುಖಂಡ ಕೆಂಗಲಯ್ಯ, ಪ್ರಮುಖರಾದ ಹನುಮಂತಯ್ಯ, ವೆಂಕಟೇಶ್, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಜೆಡಿಎಸ್ ಮುಖಂಡ ದೊರೆಸ್ವಾಮಿ, ಕಾರ್ಯಕ್ರಮದ ನೇತೃತ್ವವಹಿಸಿದ್ದ ಶಿವಶಂಕರ್ ಕೆ, ನಂಜುಂಡಯ್ಯ, ಅಶೋಕ್ ಮೂಲನಿವಾಸಿ, ಶ್ರೀನಿವಾಸ್ ಗೌತಮ್. ಮುಂತಾದವರು ಉಪಸ್ಥಿತರಿದ್ದರು.

### ಜಾಲತಾಣಗಳಲ್ಲಿ ಕಾಲಾಹರಣ ಬೇಡ

**ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಶಿವಕುಮಾರ್ ತಮ್ಮ ಭಾಷಣದಲ್ಲಿ ಸಮಯವನ್ನು ಕಳೆಯುವುದು ಮತ್ತು ಸಮಯವನ್ನು ಉಪಯೋಗಿಸಿಕೊಳ್ಳುವುದು ಈ ಎರೆಡರ ನಡುವೆ ವ್ಯತ್ಯಾಸವಿದೆ, ಸಾಮಾಜಿಕ ಜಾಲತಾಣದಲ್ಲಿ ರೀಲ್ಸ್ ನೋಡುವುದು ಸಮಯವನ್ನು ಕಳೆಯುವುದು, ಜ್ಞಾನವನ್ನು ಬೆಳೆಸಿಕೊಳ್ಳಲು ಓದುವುದು ಸಮಯವನ್ನು ಉಪಯೋಗಿಸಿಕೊಳ್ಳುವುದು ಎಂದು ನೆರೆದಿದ್ದ ವಿದ್ಯಾರ್ಥಿಗಳನ್ನು ಪರೋಕ್ಷವಾಗಿ ಸಾಮಾಜಿಕ ಎಂದು ಸೂಚ್ಯಕವಾಗಿ ತಿಳಿಸಿದರು.**

## ಯಾವುದೇ ಶಾಲೆಗಳನ್ನು ಮುಚ್ಚುವುದಿಲ್ಲ: ಮಧು ಬಂಗಾರಪ್ಪ ಸ್ಪಷ್ಟನೆ

ಮೈಸೂರು: ಶಿಕ್ಷಣಲ್ಲಿ ಬದಲಾವಣೆ, ಗುಣಮಟ್ಟದ ಶಿಕ್ಷಣ ತರಲು ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭಿಸುತ್ತಿದ್ದೇವೆ ಹೊರತು ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚುವುದಿಲ್ಲ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ಕುವೆಂಪುನಗರದ ನವಿಲು ರಸ್ತೆಯಲ್ಲಿರುವ ಹಿರಿಯ ಸಾಹಿತಿ ದೇವನೂರು ಮಹಾದೇವ ಅವರ ನಿವಾಸಕ್ಕೆ ಶನಿವಾರ ತೆರಳಿ 1 ಗಂಟೆಗೂ ಹೆಚ್ಚು ಸಮಯ ಅವರೊಂದಿಗೆ ಚರ್ಚಿಸಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.



ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭದಿಂದ ಶಾಲೆಗಳನ್ನು ಮುಚ್ಚುವುದಿಲ್ಲ, ಕೆಲವರ ತಪ್ಪು ಗ್ರಹಿಕೆಯಿಂದ ವಿರೋಧ ವ್ಯಕ್ತವಾಗುತ್ತಿದೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಇದಕ್ಕೆ ವಿರೋಧವಿದ್ದರೆ ಅವರ ಜೊತೆಯೂ ಮಾತನಾಡಿ ಅವರಿಗೆ ಇದರ ಉದ್ದೇಶವನ್ನು ತಿಳಿಸುತ್ತೇನೆ ಎಂದು ಹೇಳಿದರು. ಒಬ್ಬ ಶಿಕ್ಷಣ ಸಚಿವನಾಗಿ ಸಾಹಿತಿ ದೇವನೂರು ಮಹದೇವ ಅವರ ಸಲಹೆ ಪಡೆಯಲು ಭೇಟಿ ಮಾಡಿದ್ದೇನೆ. ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಬದಲಾವಣೆಗಳನ್ನು ತಂದಿದ್ದೇವೆ. ಅದರ ಫಲವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ ಎಂದು ಹೇಳಿದರು. ಈಗಾಗಲೇ ದೇವನೂರು ಮಹಾದೇವ ಅವರು ನಾಟಕ, ಕಲೆ, ಸಾಹಿತ್ಯದ ಅರಿವು ಮೂಡಿಸುವಂತೆ ಸಲಹೆ ನೀಡಿದ್ದಾರೆ. ಅವರ ಸಲಹೆಗಳನ್ನು ಸ್ವೀಕರಿಸಿ ಅವುಗಳನ್ನು ಜಾರಿಗೆ ತರಲಾಗುವುದು ಎಂದು ಹೇಳಿದರು.

### ಕೇಂದ್ರ ಶಿಕ್ಷಣ ಸಚಿವ ನನ್ನ ಬಳಿ ಬಂದು ಕಲಿಯಲಿ

ನೀಟ್ ಪರೀಕ್ಷೆ ಸೋರಿಕೆಯಾದ ಮೇಲೆ ಉತ್ತರಿಸಲಾಗದೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನಾಲ್ಕು ದಿನ ಕಣ್ಮರೆಯಾಗಿದ್ದರು. ಇವರಿಗೆ ಯಾವ ನೈತಿಕತೆ ಇದೆ. ನನ್ನ ರೀತಿ ಕುಳಿತು ಮಾಧ್ಯಮಗಳಿಗೆ ಉತ್ತರ ನೀಡಬೇಕಿತ್ತು. ಇವರಿಗೆ ಶಿಕ್ಷಣ ಇಲಾಖೆ ನಡೆಸಲು ಗೊತ್ತಿಲ್ಲದಿದ್ದರೆ ನನ್ನ ಬಳಿ ಬರಲಿ ನಾನು ಕಲಿಸಿಕೊಡುತ್ತೇನೆ ಎಂದು ಹೇಳಿದರು. ತಮ್ಮ ಶೈಕ್ಷಣಿಕ ಅರ್ಹತೆಯನ್ನು ಪ್ರಶ್ನಿಸುವವರ ವಿರುದ್ಧವೂ ವಾಗ್ದಾಳಿ ನಡೆಸಿದ ಅವರು, ನನ್ನ ಶೈಕ್ಷಣಿಕ ಹಿನ್ನಲೆ ಬಗ್ಗೆ ಗೇಲಿ ಮಾಡುವವರು ಮೊದಲು ಪ್ರಧಾನಿ ನರೇಂದ್ರ ಮೋದಿ ಅವರ ಡಿಗ್ರಿ ಪ್ರಮಾಣಪತ್ರದ ಬಗ್ಗೆ ಮಾತನಾಡಲಿ. ನಾನು ಪಿಯುಸಿ ಮುಗಿಸಿದ್ದೇನೆ. ನಾನು ಒರಿಜಿನಲ್ ದಾಖಲಾತಿ ತೋರಿಸುತ್ತೇನೆ. ಅವರು ತೋರಿಸುತ್ತಾರ? ಪಿಯುಸಿ ಮುಗಿದ ಬಳಿಕ ವ್ಯವಹಾರಕ್ಕೆ ಮುಂದಾದ ಕಾರಣ ಓದು ಮುಂದುವರಿಸಲಿಲ್ಲ ಅಷ್ಟೆ ಎಂದು ವಿರೋಧಿಗಳ ಹೇಳಿಕೆಗೆ ತಿರುಗೇಟು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್ ಉಪಸ್ಥಿತರಿದ್ದರು.

# ಬೈರಮಂಗಲಕ್ಕೆ ಬನ್ನಿ, ರೈತರು ಯಾರಿಗೆ ಘೇರಾವ್ ಹಾಕ್ತಾರೆ ಗೊತ್ತಾಗುತ್ತೆ: ಸಬ್ಬಕೆರೆ ಶಿವಲಿಂಗಪ್ಪ

ರಾಮನಗರ: ಡಿಸಿಎಂ ಅವರ ಜೊತೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ಅಧ್ಯಕ್ಷ ಗಾಣಕಲ್ ನಟರಾಜು ಅವರು ಬೈರಮಂಗಲ ಕಡೆ ಬರಲಿ, ಅಲ್ಲಿನ ಜನತೆ, ರೈತರು ಯಾರಿಗೆ ಘೇರಾವ್ ಹಾಕುತ್ತಾರೆ ಎಂಬುದನ್ನು ತಿಳಿದುಕೊಳ್ಳಲಿ ಎಂದು ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ ಸವಾಲು ಎಸೆದರು.

ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜು ಅವರು ಜೆಡಿಎಸ್ ಯುವ ಮುಖಂಡ ನಿಖಿಲ್ ಕುಮಾರಸ್ವಾಮಿ ಅವರ ವಿರುದ್ದ ನಡೆಸಿದ ಟೀಕಾ ಪ್ರಹಾರಕ್ಕೆ ಪ್ರತ್ಯುತ್ತರ ನೀಡಲು ಆಯೋಜಿಸಿದ್ದ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ನಿಖಿಲ್ ಅವರು ಬಿಡದಿ ಎಐ ಸಿಟಿ ಯೋಜನೆ ವಿಚಾರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ವಿರುದ್ದ ಏಕವಚನ ಪದ ಬಳಸಿಲ್ಲ. ಅವರು ಅಂತಹ ಸಂಸ್ಕೃತಿಯಲ್ಲಿ ಬೆಳೆದಿಲ್ಲ. ಹಿರಿಯರಿಗೆ ಗೌರವ ಕೊಡುವುದನ್ನು ರೂಢಿಸಿಕೊಂಡಿದ್ದಾರೆ ಎಂದರು. ಗಾಣಕಲ್ ನಟರಾಜು ಅವರು ರಾಜ್ಯಮಟ್ಟದ ನಾಯಕನಂತೆ ಭಾವಿಸುವುದು ಬೇಡ ಎಂದರು. ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ನಿಖಿಲ್ ವಿರುದ್ದ ಬರೆದುಕೊಟ್ಟಿದ್ದನ್ನು ಗಾಣಕಲ್ ನಟರಾಜು ಅವರು ಒಪ್ಪಿಸಿದ್ದಾರೆ ಎಂದು ಟೀಕಿಸಿದರು.

### 2000 ಎಕರೆ ಸರ್ಕಾರಿ ಭೂಮಿ ಏನಾಯ್ತು

ಸಧ್ಯ ಬಿಡದಿ ಎಐ ಸಿಟಿಗಾಗಿ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಯ ಪೈಕಿ ಜಿಲ್ಲಾಡಳಿತ ಮೊದಲು ಹೊರೆಡಿಸಿದ್ದ ಪ್ರಕಟಣೆಯಲ್ಲಿ 2000 ಎಕರೆ ಸರ್ಕಾರಿ ಭೂಮಿ ಇದೆ ಎಂದು ಹೇಳಲಾಗಿತ್ತು. ತದನಮಂತ ಈ ಪ್ರಮಾಣ ತಗ್ಗಿದೆ. ಉಳಿದ ಭೂಮಿ ಏನಾಯ್ತು ಎಂದು ಸಬ್ಬಕೆರೆ ಶಿವಲಿಂಗಪ್ಪ ಪ್ರಶ್ನಿಸಿದರು.

ಬಿಡದಿ ಎಐ ಸಿಟಿಗಾಗಿ ನಡೆದಿರುವ ಭೂಸ್ವಾಧೀನದ ವಿವರಗಳ ದಾಖಲೆಗಳು ನಮ್ಮ ಬಳಿಯೂ ಇದೆ. ಇನ್ನು ಕೆಲವು ದಾಖಲೆಗಳನ್ನು ಸಂಗ್ರಹಿಸುತ್ತಿದ್ದೇವೆ. ನಾವು ಈ ವಿಚಾರದಲ್ಲಿ ಮೌನವಾಗಿದ್ದೀವಿ ಎಂದು ಕಾಂಗ್ರೆಸ್‌ನವರು ಭಾವಿಸುವುದು ಬೇಡ ಎಂದರು.

### ಚಿಕ್ಕಹುಡುಗನನ್ನು ಸೋಲಿಸಿದ್ದೀರಿ!

ನಿಖಿಲ್ ಅವರನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಚಿಕ್ಕಹುಡುಗ ಎಂದಿದ್ದಾರೆ. ಚಿಕ್ಕಹುಡುಗನ್ನು



ಸೋಲಿಸಲು ಇಡೀ ಕಾಂಗ್ರೆಸ್ ದಂಡೇ ನೆರೆದಿತ್ತು ಎಂದು ಅವರು ಮಾತಿನ ಚಾಟಿ ಬೀಸಿದರು. ಜೆಡಿಎಸ್–ಕಾಂಗ್ರೆಸ್ ಮೈತ್ರಿ ಇದ್ದಾಗಲೇ ನಿಖಿಲ್ ಸೋತರು, ಅವರ ಸೋಲಿಗೆ ಕಾಂಗ್ರೆಸ್ಸಿಗರೇ ಕಾರಣ ಎಂದ ಅವರು. ತಮ್ಮ ಪಕ್ಷದ ನಾಯಕರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದು ಸರಿಯಲ್ಲ ಎಂದರು.

### ಡಿಕೆಶಿ ಸಿಎಂ ಆದರೆ ಗೂಂಡಾ ರಾಜ್ಯ – ನರಸಿಂಹ ಮೂರ್ತಿ

ಜೆಡಿಎಸ್ ಮುಖಂಡ ನರಸಿಂಹಮೂರ್ತಿ ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಉಪಮುಖ್ಯಮಂತ್ರಿಗಳಂತೆ ಮಾತನಾಡಬೇಕು, ಕೊತ್ವಾಲನ ಶಿಷ್ಯನಾಗಿ ಮಾತನಾಡಬೇಡಿ, ಕೊತ್ವಾಲ್ ಗರಡಿಯಲ್ಲಿ ಪಳಗಿರುವ ನಿಮಗೆ ಸೌಜನ್ಯ ಹಾಗೂ ಸಂಸ್ಕಾರ ಎಲ್ಲಿಂದ ಬರಬೇಕು ಎಂದು ಟೀಕಾ ಪ್ರಹಾರ ನಡೆಸಿದರು.. ಡಿ.ಕೆ. ಶಿವಕುಮಾರ್ ಅವರು ಈ ರಾಜ್ಯದ ಮುಖ್ಯಮಂತ್ರಿಯಾದರೆ, ಕರ್ನಾಟಕವೂ ಗೂಂಡ ರಾಜ್ಯವಾಗುವುದರಲ್ಲಿ ಯಾವುದೇ ಅನುಮಾನಗಳಿಲ್ಲ ಎಂದರು. ಕಾಂಗ್ರೆಸ್ ನಾಯಕರು ಜೆಡಿಎಸ್ ನಾಯಕರಿಗೆ ಕೌಂಟರ್ ಕೊಡುವುದನ್ನು ನಿಲ್ಲಿಸಬೇಕು, ಇಲ್ಲದಿದ್ದರೆ ಜೆಡಿಎಸ್ ಪಕ್ಷದ ಕಾರ್ಯಕರ್ತರೇ ಕೌಂಟರ್ ಕೊಡುವುದನ್ನು ಆರಂಭಿಸ 'ಬೇಕಾಗುತ್ತದೆ ಎಂದು ಎಚ್ಚರಿಸಿದರು.

### ಚಿಕ್ಕವರು ಪ್ರಶ್ನೆಯನ್ನೇ ಮಾಡಬಾರದೇ? –

ಜೆಡಿಎಸ್‌ನ ಮತ್ತೊಬ್ಬ ಮುಖಂಡ ಬಿ.ಉಮೇಶ್ ಮಾತನಾಡಿ, ಯಾರದರು ಒಬ್ಬರ ವಿರುದ್ದ ಮಾತನಾಡಿ ದರೆ ತಾವು ಗ್ರೇಟ್ ಆಗ್ತಿವಿ ಎಂಬ ಭ್ರಮಯಲ್ಲಿದ್ದಾರೆ ಎಂದು ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜ್ ವಿರುದ್ದ ಹರಿಹಾಯ್ದರು. ಚಿಕ್ಕವರು ಆಡಳಿತದ ವಿಚಾರದಲ್ಲಿ ಪ್ರಶ್ನೆಯನ್ನೇ ಕೇಳಬಾರದೇ, ಹಾಗೆಂದು ಕಾನೂನು ಇದೆಯೇ ಎಂದು ಪ್ರಶ್ನಿಸಿದರು. ನಿಖಿಲ್ ಅವರ ಹೇಳಿಕೆಯನ್ನು ತಿರುಚಿ ಗಾಣಕಲ್ ನಟರಾಜ್ ಅವರು ಹೇಳಿಕೆಯನ್ನು ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಸಿದ್ದ ಮೇಲಿನ ಕೋಪವನ್ನು ಎಚ್‌ಡಿಕೆ ವಿರುದ್ದ ತೀರಿಸಿದರೆ ಹೇಗೆ? ದೊರೆಸ್ವಾಮಿ


ಜೆಡಿಎಸ್ ಮುಖಂಡ ದೊರೆಸ್ವಾಮಿ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರ ಮೇಲಿನ ಕೋಪವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕುಮಾರಸ್ವಾಮಿ ಮೇಲೆ ತೋರಿಸುತ್ತಿದ್ದಾರೆ. ಕುಮಾರಸ್ವಾಮಿ ವಿರುದ್ಧ ಮಾತನಾಡಿದರೆ ಗಾಣಕಲ್ ನಟರಾಜು ಪ್ರಸಿದ್ಧರಾಗುತ್ತೇವೆ ಎಂಬ ಮನೋಭಾವ ಇರಬೇಕು. ಹಾಗಾಗಿ ಮಾತನಾಡುತ್ತಿದ್ದಾರೆ ಎಂದರು. ಗಾಣಕಲ್ ನಟರಾಜು ಖುರ್ಚಿ ಉಳಿಸಿಕೊಳಿಸಿಕೊಳ್ಳುವ ಸಲುವಾಗಿ ಡಿಸಿಎಂ ಬರೆದು ಕೊಟ್ಟಿದ್ದನ್ನು ಓದುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ಮಾವಿನ ಸಸಿ ವೆಂಕಟೇಶ್, ಕೃಷ್ಣೇಗೌಡ, ರಾಜಶೇಖರ್, ಜಯಕುಮಾರ್, ಕೆಂಪರಾಜು, ಗೂಳಿ ಕುಮಾರ್, ಎ.ರವಿ, ವಾಸುನಾಯಕ್, ಸುಗ್ಗನಹಳ್ಳಿ ರಾಮಕೃಷ್ಣ ಮುಂತಾದವರು ಹಾಜರಿದ್ದರು.

## ಚಾಮುಲ್‌ನಿಂದ ಪರಿಹಾರ ವಿತರಣೆ

ಗುಂಡ್ಲುಪೇಟೆ: ಜಿಲ್ಲಾ ಹಾಲು ಒಕ್ಕೂಟ ಹಾಗೂ ಚಾಮುಲ್ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ಮರಣ ಹೊಂದಿದ ಹಾಲು ಉತ್ಪಾದಕ ಸಹಕಾರ ಸಂಘದ ಕೃತಕ ಗರ್ಭಧಾರಣ ಕಾರ್ಯಕರ್ತರಿಗೆ ನೀಡುವ ನಿವೃತ್ತಿ ಪರಿಹಾರವನ್ನು ಫಲಾನುಭವಿ ಆದ ಚಿಕ್ಕ ಹೊನ್ನೇಗೌಡ ಪತ್ನಿ ಮಹಾದೇವಮ್ಮನವರಿಗೆ 1 ಲಕ್ಷ ರೂಗಳ ಚೆಕ್ಕನ್ನು ಸಹಕಾರ ಒಕ್ಕೂಟದ ಅಧ್ಯಕ್ಷ ಹಾಗೂ ಚಾಮುಲ್ ನಿರ್ದೇಶಕ ಹೆಚ್ ಎಸ್ ನಂಜುಂಡ ಪ್ರಸಾದ್ ಹಾಗೂ ಎಂಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷರು ಹಾಗೂ ಚಾಮುಲ್ ನಿರ್ದೇಶಕ ಎಂ ಪಿ ಸುನಿಲ್ ವಿತರಿಸಿದರು.

ಕ್ಷೇತ್ರ ಮಟ್ಟದಲ್ಲಿ ಕೃತಕ ಗರ್ಭದಾರಣೆ ಕಾರ್ಯಕರ್ತರು ಇನ್ನೂ ಹೆಚ್ಚಿನ ಆಸಕ್ತಿಯಿಂದ ಕೆಲಸ ನಿರ್ವಹಿಸಿ ಉತ್ಪಾದಕರಿಗೆ ಇನ್ನು ಹೆಚ್ಚಿನ ಸೇವೆ ನೀಡುವ ಉದ್ದೇಶದಿಂದ ಈ ಯೋಜನೆ ಜಾರಿಗೆ ತರಲಾಗಿದೆ ಎಂದರು. ಚಾಮುಲ್ ವಿಸ್ತರಣಾಧಿಕಾರಿಗಳಾದ ಎಚ್ ಪ್ರಕಾಶ್, ಸಿದ್ದಲಿಂಗೇಶ್, ಮುದ್ದಪ್ಪ , ಹಾಗೂ ಫಲಾನುಭವಿ ಮಹಾದೇವಮ್ಮ ಹಾಪ್ ಕಾಮ್ಸ್ ನಿರ್ದೇಶಕ ಸ್ವಾಮಿ ತಮ್ಮಡಿ ಹಾಜರಿದ್ದರು.



### ಶಾಸಕ ಇಕ್ಬಾಲ್ ಹುಸೇನ್ ಅವರಿಂದ ಚಾಲನೆ

# ಮಂಚನಬೆಲೆ ಜಲಾಯಶದ ಎಡದಂಡೆ ನಾಲೆಯಲ್ಲಿ ನೀರು ಹರಿವು

ರಾಮನಗರ: ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಮಂಚನಬೆಲೆ ಜಲಾಶಯದ ಎಡದಂಡೆ ನಾಲೆಯಲ್ಲಿಯೂ ನೀರು ಹರಿಯುತ್ತಿದೆ. ಕೃಷಿ ಚಟುವಟಿಕೆಗಳಿಗೆ ಬೆಂಬಲ ನೀಡುವುದು ನಮ್ಮ ಕರ್ತವ್ಯ ಎಂದು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ಮಂಚನಬೆಲೆ ಜಲಾಶಯದ ಎಡದಂಡೆ ನಾಲೆಗೆ ಗುರುವಾರ ಅಧಿಕೃತವಾಗಿ ಪೂಜೆ ಸಲ್ಲಿಸಿ, ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ತಾವು ಈ ಭಾಗದಲ್ಲಿ ಪ್ರವಾಸ ಕೈಗೊಂಡಾಗ ಜನರು ಎರಡು ನಾಲೆಗಳ ದುರಸ್ಥಿ ಮಾಡಿಸಿ ನೀರು ಹರಿಸುವಂತೆ ಮನವಿ ಮಾಡಿದ್ದರು. ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಮಾರ್ಗದರ್ಶನ ಪಡೆದು, ಎರಡೂ ನಾಲೆಗಳಲ್ಲಿ ನೀರು ಹರಿಯುವಂತೆ ಮಾಡಲಾಗಿದೆ. ರೈತರ ಬೆಳೆಗಳಿಗೆ ನೀರಿನ ತೊಂದರೆ ಯಾಗದಂತೆ ನೋಡಿಕೊಳ್ಳಲು ನಾವು ಬದ್ಧರಾಗಿದ್ದೇವೆ. ಜಲಾಶಯದಿಂದ ಹರಿಸಲಾಗುತ್ತಿರುವ



ನೀರನ್ನು ರೈತರು ಪೋಲು ಮಾಡದೆ, ಮಿತವಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಅಲ್ಲದೆ, ಅಂತರ್ಜಲ ಮಟ್ಟ ಹೆಚ್ಚಿಸಲು ಈ ಕಾರ್ಯ ಸಹಕಾರಿಯಾಗಲಿದೆ ಎಂದರು.

ಎರಡು ದಶಕಗಳಿಂದ ಮಳೆಯ ಅಭಾವ ಮತ್ತು ಬೆಳೆಗಳಿಗೆ ನೀರಿನ ಕೊರತೆಯಿಂದಾಗಿ ಕಂಗೆಟ್ಟಿದ್ದ ನಾಲಾ ವ್ಯಾಪ್ತಿಯ ರೈತರು, ಕೃಷಿ ಚಟುವಟಿಕೆಗಳಿಗಾಗಿ ನಾಲೆಗೆ ನೀರು ಹರಿಸುವಂತೆ ಶಾಸಕರಲ್ಲಿ ಮನವಿ ಮಾಡಿದ್ದರು. ರೈತರ ಸಮಸ್ಯೆಗೆ ತಕ್ಷಣವೇ ಸ್ಪಂದಿಸಿದ ಶಾಸಕರು, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳೊಂದಿಗೆ ಚರ್ಚಿಸಿ, ರೈತರ ಬೇಡಿಕೆಗೆ ಸ್ಪಂದನೆ ಮಾಡಿ ನಿಯಮಾನುಸಾರ ನೀರು ಬಿಡಲು ಸೂಚನೆ ನೀಡಿದ್ದರು. ಅದರಂತೆ ಎಡದಂಡೆ ನಾಲೆಯ ದುರಸ್ಥಿ ಕಾರ್ಯ ನಡೆಸಿ ಸಾವಿರಾರು ಹೆಕ್ಟೇರ್ ಕೃಷಿ ಭೂಮಿಗೆ ನೀರು ಹರಿಸಲಾಗಿದೆ.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ರಾಜು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್‌ನಟರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಹೆಚ್.ರಾಜು, ಕೆಡಿಪಿ ಸದಸ್ಯ ಮುಕುಂದ, ಸಾಗುವಳಿ ಸಮಿತಿ ಸದಸ್ಯ ರವಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಸ್ವಾಮಿ, ಚಿಕ್ಕಸ್ವಾಮಿ ಮುಖಂಡ ಆಂಜನಪ್ಪ, ಮಂಚನಬೆಲೆ ಯೋಜನಾ ವಿಭಾಗದ ಎಇಇ ಉಮೇರಾ ಸೇರಿದಂತೆ ನೀರಾವರಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ರಾಜೀವ್ ವಿವಿಗೆ ಭೂಮಿ ಕೊಟ್ಟವರು ರೈತರಲ್ಲವೇ?

## ಅವರ ಬಗ್ಗೆ ಆಗ ಕಾಳಜಿ ಇರಲಿಲ್ಲವೇ: ರವಿ | ಬಿಡದಿ ಎಐಸಿಟಿ ಭೂಸ್ವಾಧೀನಕ್ಕೆ ಜೆಡಿಎಸ್ ವಿರೋಧಕ್ಕೆ ಕಾಂಗ್ರೆಸ್ ಪ್ರಶ್ನೆ

ರಾಮನಗರ: ಹೆಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಮತ್ತು ಡಿ.ಕೆ.ಶಿವಕುಮಾರ್ ಅವರ ನಡುವೆ ರಾಜ್ಯ ಮಟ್ಟದಲ್ಲಿ ಪರಸ್ಪರ ಕೊಟ್ಟ ಹೇಳಿಕೆ ಪ್ರತಿಹೇಳಿಕೆಗಳಿಗೆ ರಾಮನಗರದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪರಸ್ಪರ ಕೌಂಟರ್ ಹೇಳಿಕೆಗಳನ್ನು ನೀಡಲಾರಂಭಿಸಿದ್ದಾರೆ.

ಗುರುವಾರ ಕಾಂಗ್ರೆಸ್ ಮುಖಂಡರ ಪತ್ರಿಕಾಗೋಷ್ಠಿಗೆ ಪ್ರತ್ಯುತ್ತರವಾಗಿ ಶುಕ್ರವಾರ ಜೆಡಿಎಸ್ ಮುಖಂಡರು ಪತ್ರಿಕಾಗೋಷ್ಠಿ ನಡೆಸಿದ್ದರು. ಜೆಡಿಎಸ್ ಪತ್ರಿಕಾಗೋಷ್ಠಿಗೆ ಪ್ರತಿಯಾಗಿ ಶನಿವಾರ ಕಾಂಗ್ರೆಸ್ ಕಾರ್ಯಕರ್ತರು ಪತ್ರಿಕಾಗೋಷ್ಠಿ ನಡೆಸಿ ಕೌಂಟರ್ ಕೊಟ್ಟಿದ್ದಾರೆ.



### ರಾಜೀವ್ ವಿವಿಗೆ ಭೂಮಿ ಕೊಟ್ಟವರು ರೈತರಲ್ಲವೇ – ರವಿ

ನಗರದ ಹೊರವಲದಯಲ್ಲಿರುವ ಖಾಸಗಿ ಹೋಟೆಲ್ ಕಾಂಗ್ರೆಸ್ ಕಾರ್ಯಕರ್ತರು ಪತ್ರಿಕಾಗೋಷ್ಠಿಯನ್ನು ಆಯೋಜಿಸಿದ್ದರು. ಈ ವೇಳೆ ಮಾತನಾಡಿದ, ಬಗರ್ ಹುಕುಂ ಸಾಗುವಳಿ ಸಮಿತಿ ಸದಸ್ಯ ಹಾಗೂ ಕಾಂಗ್ರೆಸ್ ಕಾರ್ಯಕರ್ತ ಕೆ.ರವಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿಯವರನ್ನು ತರಾಟೆಗೆ ತೆಗೆದುಕೊಂಡರು. ರಾಜೀವ್ ಗಾಂಧಿ ವಿಶ್ವವಿದ್ಯಾನಿಯಲಕ್ಕೆ ಭೂಸ್ವಾಧೀನ ಪಡಿಸಿಕೊಂಡಾಗ ನಿಮ್ಮ ತಂದೆಯವರಿಗೆ ರೈತರು ಕಾಣಲಿಲ್ಲವೇ, ಕೋಟಿ ಬಾಳುತ್ತಿದ್ದ ಭೂಮಿಗೆ ಕೇವಲ ಲಕ್ಷಗಳಲ್ಲಿ ಪರಿಹಾರ ಕೊಡಿಸಿದ್ದಾರೆ ಇದು ರೈತರಿಗೆ ಮಾಡಿದ ನ್ಯಾಯವೇ ಎಂದು ಪ್ರಶ್ನಿಸಿದರು.

ರಾಜೀವ್ ಗಾಂಧಿ ವಿವಿಗೆ ಭೂಸ್ವಾಧೀನ ಪಡಿಸಿಕೊಂಡ ನಂತರ ವಿವಿ ನಿರ್ಮಾಣ ಕಾರ್ಯ ನೆನೆಗುದಿಗೆ ಬಿದ್ದಿತ್ತು. ಕಾಂಗ್ರೆಸ್ ಸರ್ಕಾರ ಬಂದ ನಂತರ ಡಿಸಿಎಂ ಡಿ.ಕೆ.ಶಿವಕುಮಾರ್ ಆಸಕ್ತಿವಹಿಸಿ ವಿವಿ ನಿರ್ಮಾಣ ಕಾರ್ಯ ಆರಂಭವಾಗಿದೆ. ನಿರ್ಮಾಣ ಕಾರ್ಯ ಏಕೆ ಆರಂಭವಾಗಲಿಲ್ಲ ಎಂಬುದನ್ನು ನಿಮ್ಮ ತಂದೆಯವರನ್ನು ಕೇಳಿ ಎಂದು ನಿಖಿಲ್ ಅವರನ್ನು ಉದ್ದೇಶಿಸಿ ಮಾತನಾಡಿದರು.

ಎಚ್.ಡಿ.ಕುಮಾರಸ್ವಾಮಿಯವರು ಕೇಂದ್ರ ಸಚಿವರಾಗಿದ್ದಾರೆ. ರಾಜ್ಯದಲ್ಲಿ ಭೂಮಿ ಕೊಡಿಸಿ ಕೈಗಾರಿಕೆ ಮಾಡ್ತೀವಿ ಅಂತ ಹೇಳುತ್ತಿದ್ದಾರೆ. ಕೈಗಾರಿಕೆಗಳು ನಿರ್ಮಿಸಲು ರೈತರೇ ಭೂಮಿ ಕೊಡಬೇಕಾಗಿದೆ. ಆಗ ರೈತರು ಕಾಣುವುದಿಲ್ಲವೇ, ಬಿಡದಿ ಹೋಬಳಿಯಲ್ಲಿರುವವರು ಮಾತ್ರ ರೈತರೇ ಎಂದು ಪ್ರಶ್ನಿಸಿದರು.

ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಹಾಗೂ ಅನಿತಾ ಕುಮಾರಸ್ವಾಮಿ ಅವರು ಕ್ಷೇತ್ರದ ಶಾಸಕರಾಗಿದ್ದರು, ಅವರ ಅಧಿಕಾರವಧಿಯಲ್ಲಿ ಒಂದೇ ಒಂದು ಇಂಚು ಭೂಮಿಯನ್ನು ಬಗರ್ ಹುಕುಂ ಹಕ್ಕಿನಡಿಯಲ್ಲಿ ಕೊಟ್ಟಿದ್ದಾರಾ, ಕೊಟ್ಟಿದ್ದರೆ ದಾಖಲೆಗಳೊಂದಿಗೆ ಚರ್ಚೆಗೆ ಬನ್ನಿ ಎಂದರು.

ಹೆಚ್.ಡಿ.ದೇವೇಗೌಡರನ್ನು ಪ್ರಧಾನಿ ಮಾಡಿದ್ದು ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ, ಹೆಚ್.ಡಿ.ಕುಮಾರಸ್ವಾಮಿ ಅವರನ್ನ ಮುಖ್ಯಮಂತ್ರಿ ಮಾಡಿದ್ದು ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ. ಡಿಸಿಎಂ ಅವರಿಗೆ ಘೆರಾವ್ ಹಾಕಿದರೆ ಗ್ರಾಮಗ್ರಾಮಗಳಲ್ಲಿರುವ ಕಾಂಗ್ರೆಸ್ ಕಾರ್ಯಕರ್ತರು ನಿಮ್ಮ ಪಕ್ಷದ ನಾಯಕರಿಗೂ ಘೆರಾವ್ ಹಾಕ್ತಾರೆ ಎಂದು ಎಚ್ಚರಿಸಿದರು. ಅಭಿವೃದ್ಧಿಯನ್ನು ಯಾರು ತಡೆಯಬಾರದು. ನಿಖಿಲ್ ಅವರು ತಮ್ಮ ಘನತೆಗೆ ತಕ್ಕಂತೆ ಮಾತನಾಡಬೇಕು ಎಂದು ಸಲಹೆ ನೀಡಿದರು.

### ಸೋಲಿನ ಹತಾಶೆಯಲ್ಲಿರುವುದು ನಿಖಿಲ್ – ಗಂಗಾಧರ್

ವಿಎಸ್ ಎಸ್ ಎನ್ ಮಾಜಿ ಅಧ್ಯಕ್ಷ ಗಂಗಾಧರ್ ಮಾತನಾಡಿ, ಜೆಡಿಎಸ್ ಮುಖಂಡರು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ನಮ್ಮ ನಾಯಕರುಗಳಾದ ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ಬಗ್ಗೆ ಮನಬಂದಂತೆ ಮಾತನಾಡಿದ್ದಾರೆ. ಡಿ.ಕೆ.ಸುರೇಶ್ ಒಂದು ಬಾರಿ ಸೋತಿದ್ದಾರೆ, ನಿಮ್ಮಂತೆ ಸೋಲಿನ ಸರಮಾಲೆಯನ್ನು ಧರಿಸಿಲ್ಲ ಎಂದು ನಿಖಿಲ್ ಬಗ್ಗೆ ಲೇವಡಿಯಾಡಿದರು. ಡಿ.ಕೆ.ಸುರೇಶ್ ಬಮೂಲ್ ಅಧ್ಯಕ್ಷರಾಗಿ ನಷ್ಟದಲ್ಲಿದ್ದ ಸಂಸ್ಥೆಯನ್ನು ಲಾಭಗಳಿಸುವಂತೆ ಮಾಡಿದ್ದಾರೆ ಎಂದರು.

ಜಿಲ್ಲೆಯ ನಾಲ್ಕೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರಬಲರಾಗಿದ್ದಾರೆ. ಹೀಗಾಗಿಯೇ ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಶಾಸಕರು ಆರಿಸಿ ಬಂದಿದ್ದಾರೆ. ಡಿಕೆಶಿ ಅವರನ್ನು ಟೀಕಿಸಿದರೆ ಲೀಡರ್ ಆಗುವ ಭಾವನೆಯಲ್ಲಿ ನಿಖಿಲ್ ಇದ್ದಾರೆ. ನಮ್ಮ ನಾಯಕರ ಬಗ್ಗೆ ಹಗುರವಾಗಿ ಮಾತನಾಡಿದರೆ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

25 ವರ್ಷಗಳ ಕಾಲ ಕ್ಷೇತ್ರದ ಶಾಸಕರಾಗಿ ನಿಮ್ಮ ಪಕ್ಷದ ಮುಖಂಡರು ಅಭಿವೃದ್ಧಿಯನ್ನೇ ಮಾಡಲಿಲ್ಲ. ಜಿಲ್ಲಾ ಕೇಂದ್ರದಲ್ಲಿ ಒಂದೆರೆಡು ಭವನ ಕಟ್ಟಿಸಿದ್ದು ಬಿಟ್ಟರೆ ಯಾವ ಅಭಿವೃದ್ಧಿಯೂ ಆಗಲಿಲ್ಲ. ಡಿಸಿಎಂ ಡಿ.ಕೆ.ಶಿವಕುಮಾರ್, ಶಾಸಕ ಇಕ್ಬಾಲ್ ಹುಸೇನ್ ಅವರು ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದನ್ನು ಸಹಿಸದೆ ಟೀಕೆ ಮಾಡುತ್ತಿದ್ದಾರೆ ಎಂದ ಅವರು ಇದೇ ಅವಧಿಯಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗ್ತಾರೆ ಎಂದರು. ಅವರನ್ನು ಜನ ಬಂಡೆ ಅಂತಲೇ ಕರೆಯುತ್ತಾರೆ, ಅವರು ಯಾರಿಗೂ ಹೆದರಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಲೋಹಿತ್ ಬಾಬು, ಲೋಕೇಶ್, ಮುತ್ತುರಾಜ್, ಉಮೇಶ್, ನಾಗಭೂಷಣ್, ಮುಷೀರ್, ಷಡಕ್ಷರಿ, ಶಂಭೂಗೌಡ, ಸುನೀಲ್, ರಾಮು, ಮುಕುಂದ, ಅನಿಲ್ ಜೋಗೆಂದರ್ ಮುಂತಾದವರು ಹಾಜರಿದ್ದರು.

### ಜೆಡಿಎಸ್ ನರಸಿಂಹಮೂರ್ತಿಗೆ ಎಚ್ಚರಿಕೆ ನೀಡಿದ ನರಸಿಂಹಯ್ಯ

ಅರಣ್ಯ ಅಭಿವೃದ್ಧಿ ನಿಗಮ ಮಾಜಿ ನಿರ್ದೇಶಕ ನರಸಿಂಹಯ್ಯ (ಟೌನ್ ಎಂ.ಎಲ್.ಎ) ಮಾತನಾಡಿ, ಜೆಡಿಎಸ್ ವಕ್ತಾರ ನರಸಿಂಮೂರ್ತಿ ನಮ್ಮ ನಾಯಕರಾದ ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಹದ್ದು ಮೀರಿ ಮಾತನಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನರಸಿಂಹಮೂರ್ತಿಯವರು ಕನ್ನಡ ಪರ ಸಂಘಟನೆಯ ಹೆಸರು ಹೇಳಿಕೊಂಡು ಹಣ ಲೂಟಿ ಹೊಡೆದಿದ್ದಾರೆ. ಹೀಗಾಗಿಯೇ ಅವರನ್ನು ಜನ ಊರಿಂದ ಹೊರಗೆ ಕಳುಹಿಸಿದ್ದಾರೆ. ಅಡ್ಡದಾರಿಯಲ್ಲೇ ಸಾಗಿ ಬಂದ ನರಸಿಂಹಮೂರ್ತಿ ಅವರಿಗೆ ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಹೆಚ್.ಡಿ.ಕುಮಾರಸ್ವಾಮಿ ಅವರ ಪಂಥಾಹ್ವಾನವನ್ನು ನಮ್ಮ ನಾಯಕರಾದ ಶಿವಕುಮಾರ್ ಸ್ವೀಕರಿಸಿದ್ದಾರೆ. ಚರ್ಚೆಗೆ ಸ್ಥಳ, ಸಮಯ, ದಿನ ನಿಗಧಿ ಮಾಡಿ ಎಂದಿದ್ದಾರೆ. ಕುಮಾರಸ್ವಾಮಿ ಅವರು ಪಂಥಾಹ್ವಾನಕ್ಕೆ ಬರಲಾಗದೆ ತಮ್ಮ ಪಕ್ಷದ ಮುಖಂಡರನ್ನು ಛೂ ಬಿಟ್ಟಿದ್ದಾರೆ ಎಂದರು. ನರಸಿಂಹ ಮೂರ್ತಿ ಅವರು ನಮ್ಮ ನಾಯಕರ ಬಗ್ಗೆ ಹಗುರವಾಗಿ ಮಾತನಾಡಿದರೆ, ಅವರು ಹೋದಡೆಯಲ್ಲೆಲ್ಲ, ಕಾಂಗ್ರೆಸ್ ಕಾರ್ಯಕರ್ತರು ಘೆರಾವ್ ಮಾಡುತ್ತಾರೆ ಎಂದು ಎಚ್ಚರಿಸಿದರು.

### ವಿಠಲೇನಹಳ್ಳಿಗೆ ಕರೆತಂದಿದ್ದೆವು, ಬೈರಮಂಗಲಕ್ಕೂ ಕರೆತರುತ್ತೇವೆ

ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿಕ್ಕೇಗೌಡ ಮಾತನಾಡಿ, ಬಿಡದಿ ಟೌನ್ ಶಿಪ್ ಯೋಜನೆಯನ್ನು ರೂಪಿಸಿ, ಸ್ವಾಧೀನಕ್ಕೆ ಭೂಮಿಯನ್ನು ಗುರುತಿಸಿ ರೆಡ್ ಜೋನ್ ಎಂದು ಘೋಷಿಸಿದ್ದ ಕುಮಾರಸ್ವಾಮಿ. ತದನಂತರ ಅವರು ಸಿಎಂ ಆಗಿದ್ದಾಗಲೂ ಯೋಜನೆಯನ್ನು ರದ್ದುಗೊಳಿಸಿ ಡಿ–ನೋಟಿಫೈ ಮಾಡಲಿಲ್ಲ. ನಿಖಿಲ್ ಮೊದಲು ಗ್ರಾಮ ಪಂಚಾಯತ್ ಸದಸ್ಯರಾಗಲಿ ತದನಂತರ ರಾಜಕೀಯ ವಿಚಾರಗಳನ್ನು ಮಾತನಾಡಲಿ ಎಂದರು. ಬೈರಮಂಗಲಕ್ಕೆ ಡಿಕೆಶಿ ಅವರನ್ನು ಕರೆತನ್ನಿ ಎಂದು ಸವಾಲು ಎಸೆದಿರುವ ಜೆಡಿಎಸ್ ಮುಖಂಡರಿಗೆ ಉತ್ತರ ಕೊಟ್ಟ ಅವರು, 2006ರಲ್ಲಿ ಚನ್ನಪಟ್ಟಣ ತಾಲ್ಲೂಕಿನ ವಿಠ್ಠಲೇನಹಳ್ಳಿಯಲ್ಲಿ ಗೋಲಿಬಾರ್ ವಿಚಾರದಲ್ಲಿ ದೇವೇಗೌಡರು ಸವಾಲು ಹಾಕಿದ್ದಾಗ, ಕಾಂಗ್ರೆಸ್ ಕಾರ್ಯಕರ್ತರು ಡಿ.ಕೆ.ಶಿವಕುಮಾರ್ ಅವರನ್ನು ವಿಠಲೇನಹಳ್ಳಿಗೆ ಕರೆದೊಯ್ದಿದ್ದರು, ಈಗಲೂ ಬೈರಮಂಗಲಕ್ಕೆ ಕರೆತರುತ್ತೇವೆ, ತಾಕತ್ತಿದ್ದರೆ ನೀವು ತಡೆಯಿರಿ ಎಂದು ಜೆಡಿಎಸ್ ಮುಖಂಡರಿಗೆ ಸವಾಲು ಎಸೆದರು. ಕುಮಾರಸ್ವಾಮಿ ಸಿಎಂ ಆಗಿ, ಕ್ಷೇತ್ರದ ಶಾಸಕರಾಗಿ ರಾಮನಗರಕ್ಕೆ ಏನು ಕೊಡುಗೆ ನೀಡಿದ್ದಾರೆ ಎಂದು ಪ್ರಶ್ನಿಸಿದರು.

---

# ಪರಿಶ್ರಮದ ವಿದ್ಯಾಭ್ಯಾಸದಿಂದ ಮಾತ್ರ ಗುರಿ ಸಾಧನೆ ಸಾಧ್ಯ

**ಶಾಸಕ ಹೆಚ್.ಟಿ. ಮಂಜು**



ಕೆ.ಆರ್. ಪೇಟೆ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಕ್ರೀಡಾ, ಸಾಂಸ್ಕೃತಿಕ ಹಾಗೂ ಎನ್.ಎಸ್.ಎಸ್. ಚಟುವಟಿಕೆಗಳ 2025–2026ನೇ ಸಾಲಿನ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಶಾಸಕ ಹೆಚ್.ಟಿ. ಮಂಜು ಅವರು ಮಾತನಾಡಿದರು.

### ಗುರಿ ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ

ಸಕಾರಾತ್ಮಕ ಚಿಂತನೆ ಹಾಗೂ ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿದರೆ ಉತ್ತಮ ಶಿಕ್ಷಣ ಪಡೆದುಕೊಂಡು ತಮ್ಮ ಗುರಿ ಸಾಧಿಸಲು ಖಂಡಿತವಾಗಿ ಸಾಧ್ಯವಾಗುತ್ತದೆ ಎಂದು ಶಾಸಕರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ತಾವು ಕೂಡ ಇದೇ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡಿದ್ದಾಗಿ ಸ್ಮರಿಸಿಕೊಂಡ ಅವರು, ಪ್ರಸ್ತುತ ಓದುತ್ತಿರುವ ವಿದ್ಯಾರ್ಥಿಗಳು ಕ್ರೀಡೆ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಾಧನೆ ಮಾಡಿದರೆ ಪೋಷಕರಿಗೆ, ಕಾಲೇಜಿಗೆ ಹಾಗೂ ಕ್ಷೇತ್ರದ ಶಾಸಕನಾಗಿ ತಮಗೂ ಕೀರ್ತಿ ತರುತ್ತದೆ ಎಂದರು. ಅಲ್ಲದೆ, ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸುವುದಾಗಿ ಅವರು ಈ ಸಂದರ್ಭದಲ್ಲಿ ಭರವಸೆ ನೀಡಿದರು.

### ಶೈಕ್ಷಣಿಕ ಸಾಧನೆಯೇ ಸಮಗ್ರ ಅಭಿವೃದ್ಧಿಯ ಮಾನದಂಡ

ಯಾವುದೇ ಒಂದು ತಾಲೂಕು ಅಭಿವೃದ್ಧಿಯಾಗಿದೆ ಎಂದರೆ ಕೇವಲ ಮೂಲಭೂತ ಸೌಲಭ್ಯಗಳಷ್ಟೇ ಅಲ್ಲ, ಶೈಕ್ಷಣಿಕವಾಗಿಯೂ ಉನ್ನತ ಸಾಧನೆ ಮಾಡಿರಬೇಕು. ಈ ಬಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ನಂದಿನಿ ಅವರ ಮಾರ್ಗದರ್ಶನ, ಸ್ಥಳೀಯ ಶಿಕ್ಷಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಠಿಣ ಪರಿಶ್ರಮದಿಂದ ನಮ್ಮ ಜಿಲ್ಲೆ ರಾಜ್ಯಕ್ಕೆ ಐದನೇ ಸ್ಥಾನ ಪಡೆದಿದೆ. ನಮ್ಮ ತಾಲೂಕು ಜಿಲ್ಲಾ ಮಟ್ಟದಲ್ಲಿ ಎರಡನೇ ಸ್ಥಾನ ಗಳಿಸಿದೆ. ಪರೀಕ್ಷೆಗೂ ಐದಾರು ತಿಂಗಳ ಮುನ್ನವೇ ರಾತ್ರಿ ವೇಳೆ ವಿಶೇಷ ತರಗತಿಗಳನ್ನು ನಡೆಸಲಾಗಿತ್ತು. ತಾವು ಕೂಡ ಆ ತರಗತಿಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಿದ್ದರ ಫಲವಾಗಿ ಶೇ. 97.89ರಷ್ಟು ಉತ್ತಮ ಫಲಿತಾಂಶ ಹೊರಹೊಮ್ಮಿದೆ. ತಾಲೂಕಿನ ಇತಿಹಾಸದಲ್ಲೇ ಮೊದಲ ಬಾರಿಗೆ 39 ಶಾಲೆಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿರುವುದು ಶಾಸಕನಾಗಿ ತಮಗೆ ಅತೀವ ಸಂತಸ ತಂದಿದೆ. ಇದೇ ಮಾದರಿಯಲ್ಲಿ ಪದವಿ ವಿದ್ಯಾರ್ಥಿಗಳು ಕೂಡ ಅತ್ಯುನ್ನತ ಫಲಿತಾಂಶ ಪಡೆದು ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳುವ ಜೊತೆಗೆ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಬೇಕು ಎಂದು ಅವರು ಕರೆ ನೀಡಿದರು.

### ಗಣ್ಯರ ಉಪಸ್ಥಿತಿ ಹಾಗೂ ಪ್ರಧಾನ ಉಪನ್ಯಾಸ

ಸಮಾರಂಭದಲ್ಲಿ ಮಹಿಳಾ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಕೆಂಡಗಣ್ಣೇಗೌಡ ಅವರು ಕಾರ್ಯಕ್ರಮದ ಕುರಿತು ಪ್ರಧಾನ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಎ.ಟಿ. ಕರಿಶೆಟ್ಟಿ, ಕಿಕ್ಕೇರಿ ಕೆ.ಬಿ. ಮಧು, ವಾಸು, ಹೊಸಹೊಳಲು ವೆಂಕಟಾಚಲ, ಪ್ರಾಂಶುಪಾಲರಾದ ಡಾ. ವಿ.ವಿ. ಜಗದೀಶ್, ಕಾಲೇಜಿನ ಪ್ರಾಧ್ಯಾಪಕರಾದ ಡಾ. ಜಯಕೀರ್ತಿ, ಡಾ. ಮಹೇಶ್, ಪ್ರೊ. ಬೋರೇಗೌಡ, ಪ್ರೊ. ಉಮೇಶ್ ಹಾಗೂ ಡಾ. ಸವಿತಾ ಉಪಸ್ಥಿತರಿದ್ದರು. ಪತ್ರಾಂಕಿತ ವ್ಯವಸ್ಥಾಪಕಿ ಜೆ. ಭುವನೇಶ್ವರಿ, ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಸಿ.ಬಿ. ಚೇತನ್ ಕುಮಾರ್, ದ್ವಿತೀಯ ದರ್ಜೆ ಸಹಾಯಕ ರಾಯಸಮುದ್ರ ಶಿವರಾಂ ಸೇರಿದಂತೆ ಕಾಲೇಜಿನ ಎಲ್ಲಾ ಉಪನ್ಯಾಸಕರು, ಅತಿಥಿ ಉಪನ್ಯಾಸಕರು ಹಾಗೂ ಆಡಳಿತ ವರ್ಗದ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

---

# ಜೆಎಸ್‌ಎಸ್ ಕಾಲೇಜಿನಲ್ಲಿ 508 ಮಂದಿಗೆ ಪದವಿ ಪ್ರಧಾನ

ಮೈಸೂರು: ಜೆಎಸ್‌ಎಸ್ ಮಹಿಳಾ ಕಾಲೇಜಿನ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಸೇರಿಸಿ ಒಟ್ಟು 508 ಮಂದಿಗೆ ಪದವಿ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ವಿವಿಧ ವಿಭಾಗಗಳ 21 ವಿದ್ಯಾರ್ಥಿನಿಯರಿಗೆ ಪದಕ ಹಾಗೂ ಬಹುಮಾನವನ್ನು ನೀಡಲಾಯಿತು.

ನಗರದ ಸರಸ್ವತಿಪುರಂನಲ್ಲಿ ಇರುವ ಜೆಎಸ್ ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶನಿವಾರ ನಡೆದ 18ನೇ ಪದವೀಧರ ದಿನಾಚರಣೆಯ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪದಕ ಹಾಗೂ ಬಹುಮಾನವನ್ನು ವಿತರಣೆ ಮಾಡಿದ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಗಿರೀಶ್ ಸಿ.ಹೊಸೂರ್ ಮಾತನಾಡಿ,




ಮಹಿಳೆಯರ ಸಬಲೀಕರಣವೂ ಶಿಕ್ಷಣದಿಂದ ಮಾತ್ರ ಸಾಧ್ಯ. ಕೆಲ ಹಿಂದಿನ ದಶಕಗಳಿಗೆ ಹೋಲಿಕೆ ಮಾಡಿದರೇ ಪ್ರಸ್ತುತ ದಿನದಲ್ಲಿ ಮಹಿಳೆಯರ ಪ್ರಾತಿನಿಧ್ಯ ಎಲ್ಲ ಕ್ಷೇತ್ರದಲ್ಲೂ ಇದೆ. ಪುರಷರಿಗಷ್ಟೇ ಮೀಸಲು ಎನ್ನುವಂತಹ ಹುದ್ದೆಗಳು, ಕ್ಷೇತ್ರಗಳಲ್ಲಿಗೂ ಮಹಿಳೆಯರೂ ಕಾಲಿಟ್ಟು ಯಶಸ್ಸು ಕೂಡ ಕಂಡಿದ್ದಾರೆ. ಆದರೆ ಈ ಪ್ರಮಾಣವೂ ಹೇಳಿಕೊಳ್ಳುವಷ್ಟರ ಮಟ್ಟಿಗೆ ಇಲ್ಲ. ಇದಕ್ಕೆ ಹಲವಾರು ಕಾರಣಗಳೂ ಇವೆ. ಬಡತನ, ಅವಕಾಶ ಸಿಗದಿರುವುದು ಮುಂತಾದ ವಿಷಯಗಳು ಪ್ರತಿಕೂಲ ಪರಿಣಾಮವನ್ನು ಬೀರುತ್ತವೆ. ಆದ್ದರಿಂದ ಮಹಿಳೆಯರು ಉನ್ನತ ಮಟ್ಟದಲ್ಲಿ ಮುಂದೆ ಬರಲು ಶಿಕ್ಷಣವೇ ಪ್ರಬಲ ಅಸ್ತ್ರ. ಶಿಕ್ಷಣವನ್ನು ಪಡೆದುಕೊಂಡರೇ ಯಾವುದನ್ನಾದರೂ ಸಾಧನೆ ಮಾಡಬಹುದು ಎಂದು ಹುರುಪು ತುಂಬಿದರು.

ಪದವಿಯನ್ನು, ಸ್ನಾತಕೋತ್ತರ ಪದವಿಯನ್ನು ಗಳಿಸಿದ ವಿದ್ಯಾರ್ಥಿಗಳು ಮುಂದೆ ಜೀವನದಲ್ಲಿ ಉನ್ನತ ಮಟ್ಟದ ಹುದ್ದೆಗೋ, ಬೇರೆ ಇನ್ಯಾವುದಾದರೂ ಕ್ಷೇತ್ರದಲ್ಲಿ ಯಶಸ್ಸುಗಳಿಸಿ, ಒಂದು ಹಂತವನ್ನು ತಲುಪಿದಾಗ ಸಮಾಜವನ್ನು ಮರೆಯಬಾರದು. ಪ್ರತಿಭಾವಂತರಾಗಿದ್ದರೂ ಹಲವು ಕಾರಣಗಳಿಂದ ಅವಕಾಶ ಸಿಗದೇ ವಂಚಿತರಾಗಿರುವವರಿಗೆ ಸಹಾಯವನ್ನು ಮಾಡಬೇಕು. ಅವರಿಗೆ ಇಂತಹ ದಾರಿ ಇದೆ ಎನ್ನುವುದನ್ನು ತೋರಿಸಕೊಡಬೇಕು. ದೀನರನ್ನು ಮೇಲೆತ್ತಬೇಕು. ಆಗ ಮಾತ್ರ ನೀವು ಕಲಿತ ವಿದ್ಯೆಗೂ ಸಾರ್ಥಕತೆ ಸಿಗುತ್ತದೆ ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ಪ್ರತಿಜ್ಞಾ ವಿಧಿ ಬೋಧಿಸಿದರು. ನಿಖಿತ ಭಟ್ ಮತ್ತು ವೃಂದದವರು ಪ್ರಾರ್ಥಿಸಿದರು. ಪ್ರಾಂಶುಪಾಲ ಡಾ.ರೇಚಣ್ಣ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಆರ್. ಎಸ್.ಕುಮಾರ್ ವಂದಿಸಿದರು. ಸಹಾಯಕ ಪ್ರಾಧ್ಯಾಪಕಿ ಜೆ.ಪುಷ್ಪಲತಾ ನಿರೂಪಿಸಿದರು.

---

# ಹಸಿಕಸ, ಒಣ ಕಸ, ಸ್ಯಾನಿಟರಿ, ಸ್ಪೆಷಲ್ ಕೇ ವೇಸ್ಟ್ ಬೇರ್ಪಡಿಸಿ

ಮಡಿಕೇರಿ:–ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳುಷ2026 ಅನ್ನು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿಗದಿತ ಕಾಲಾ ವಧಿಯೊಳಗೆ ಅನುಷ್ಠಾನಗೊಳಿಸುವ ಕುರಿತು ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅಪೀಲ್ ಸಂಖ್ಯೆ 6174 /2023 ಪ್ರಕರಣ ದಾಖಲಾಗಿದೆ. ಆದ್ದರಿಂದ ಮಡಿಕೇರಿ ನಗರ ವ್ಯಾಪ್ತಿಯಲ್ಲಿರುವ ವಾಣಿಜ್ಯ ಬಳಕೆದಾರರು, ಬಸ್ ನಿಲ್ದಾಣ, ಡಿಪೋಷಗಳು, ಕೈಗಾರಿಕಾ ಘಟಕಗಳು, ಕೈಗಾರಿಕಾ ವಲಯಗಳು, ಹೋಟೆ ಲ್‌ಗಳು, ಆಸ್ಪತ್ರೆಗಳು, ನಸಿರ್ಂಗ್ ಹೋಮ್ ಗಳು, ಹಾಸ್ಟೆಲ್‌ಗಳು, ಕ್ರೀಡಾಂಗಣಗಳು, ಕ್ರೀಡಾ ಸಂಕೀರ್ಣಗಳು, ಸಮುದಾಯ ಸಭಾಂಗಣ ಗಳು, ಸಮಾವೇಶ ಸಭಾಂಗಣಗಳು, ಮದುವೆ ಹಾಗೂ ಔತಣ ಕೂಟದ ಸಭಾಂಗಣಗಳು, ಪ್ರವಾಸಿ ತಾಣಗಳು, ವಸತಿ ಸಂಘಗಳು ಹಾಗೂ ಇತರೆ ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು ತಮ್ಮ ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ನಾಲ್ಕು ವಿಧಗಳಲ್ಲಿ ವಿಂಗಡಿಸಿ ಕಡ್ಡಾಯವಾಗಿ ಪ್ರತ್ಯೇಕಿಸಿ ನಗರಸಭೆಯ ತ್ಯಾಜ್ಯ ಸಂಗ್ರಹ ವಾಹನಗಳಿಗೆ ಹಸ್ತಾಂತರಿಸಬೇಕು. ಆದ್ದರಿಂದ ಮಡಿಕೇರಿ ನಗರಸಭೆ ವ್ಯಾಪ್ತಿಯ ಸಾರ್ವಜನಿಕರ ಘನ ತ್ಯಾಜ್ಯ ವಸ್ತುಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ ನಿಯಮಗಳು ಅನುಷ್ಠಾನಗೊಳಿಸಲು ಸಹಕಾರ ನೀಡುವಂತೆ ನಗರಸಭೆ ಪೌರಾಯುಕ್ತರಾದ ಎಚ್.ಆರ್.ರಮೇಶ್ ಅವರು ಕೋರಿದ್ದಾರೆ.

---

# ನಾಲ್ಕು ದಿನಗಳ ಮೈರಿಯಾಲ್ಟಿ ಎಕ್ಸ್ಪೋಗೆ ಚಾಲನೆ

ಮೈಸೂರು: ಬಿಲ್ಡರ್‌ರಸ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ, ಕ್ರೆಡಾಯ್ ಮೈಸೂರು, ಬಿಲ್ಡರ್‌ರಸ ಚಾರಿಟಬಲ್ ಫೌಂಡೇಷನ್ ಸಹಯೋಗದಲ್ಲಿ ಮೈಸೂರಿನ ಸ್ಕೌಟ್?ಸ ಆ?ಯಂಡ್ ಗೈಡ್ಸ್ ಮೈದಾನದಲ್ಲಿ ಶುಕ್ರವಾರ ನಾಲ್ಕು ದಿನಗಳ ಮೈರಿಯಾಲ್ಟಿ–2026 ರಿಯಲ್ ಎಸ್ಟೇಟ್ ಎಕ್ಸ್ಪೋಗೆಗೆ ಚಾಲನೆ ದೊರೆಯಿತು.




ಮೈ ಬಿಲ್ಡ್ ವ್ಯವಸ್ಥಾಪನಾ ಮಂಡಳಿ ಸದಸ್ಯ ಉದ್ಯಮಿ ಕೆ.ಶ್ರೀರಾಮ್ ಮಾತನಾಡಿ, ದೇಶದ ಆರ್ಥಿಕ ಪರಿಸ್ಥಿತಿ ಗಂಭೀರವಾಗಿರುವ ಸಂದರ್ಭದಲ್ಲಿ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಉದ್ಯಮಿಗಳು ಮುಂದಿನ ಆರು ತಿಂಗಳ ಕಾಲ ಶಾಂತವಾಗಿರಬೇಕು. ನಂತರ ಸುವರ್ಣ ಅವಧಿ ಶುರುವಾಗುತ್ತದೆ. "ಪ್ರಧಾನಿ ನರೇಂದ್ರ ಮೋದಿ ನೀಡಿರುವ ಮಿತ ವ್ಯಯ ಮತ್ತು ಎಚ್ಚರಿಕೆಯ ಕರೆ ಅನಗತ್ಯ ಭೀತಿ ಸೃಷ್ಟಿಸಿದೆ ಎಂಬ ಟೀಕೆಗಳ ನಡುವೆಯೂ, ದೇಶದ ಆರ್ಥಿಕ ಸ್ಥಿತಿ ಅತ್ಯಂತ ಗಂಭೀರವಾಗಿದೆ. ಇಂತಹ ಸಂದರ್ಭದಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರದವರು ಯಾವುದೇ ಹೊಸ ಪ್ರಯೋಗಗಳಿಗೆ ಕೈ ಹಾಕದೇ ತಟಸ್ಥವಾಗಿ ಮುಂದುವರಿಯಬೇಕು," ಎಂದು ಮಾರ್ಗದರ್ಶನ ಮಾಡಿದರು.

"ದೇಶದ ಸಾರಿಗೆ ಮತ್ತು ಲಾಜಿಸ್ಟಿಕ್?ಸ ವೆಚ್ಚವು ಜಿಡಿಪಿಯ ಶೇ. 15 ರಿಂದ 8 ಕ್ಕೆ ಇಳಿದಿರುವುದು ಉತ್ತಮ ಬೆಳವಣಿಗೆಯಾಗಿದೆ. ವಿಕಸಿತ ರಾಷ್ಟ್ರಗಳಲ್ಲಿ ಈ ವೆಚ್ಚ ಶೇ. 5 ಶೇಕಡಕ್ಕಿಂತ ಕಡಿಮೆ ಇರುತ್ತದೆ. ಭಾರತವು ಈ ದಿಕ್ಕಿನಲ್ಲಿ ಮಹತ್ವದ ಪ್ರಗತಿ ಸಾಧಿಸಿದೆ," ಎಂದು ತಿಳಿಸಿದರು. "ಈ ವರ್ಷ ಮಳೆಯ ಅಸ್ಥಿರತೆ ಎದುರಾಗುವ ಸಾಧ್ಯತೆ ಇದ್ದು, ಕೃಷಿ ಆಧರಿತ ಭಾರತದ ಆರ್ಥಿಕತೆಗೆ ಇದು ದೊಡ್ಡ ಸವಾಲಾಗಬಹುದು. ಅಲ್ಲದೆ ಗಲ್?ಫ ರಾಷ್ಟ್ರಗಳ ಆರ್ಥಿಕ ಸಮಸ್ಯೆಗಳ ಪರಿಣಾಮವಾಗಿ ವಿದೇಶದಲ್ಲಿರುವ ಭಾರತೀಯರಿಂದ ಬರುತ್ತಿದ್ದ ಹಣ ವರ್ಗಾವಣೆ ಕೂಡ ಕಡಿಮೆಯಾಗುವ ಸಾಧ್ಯತೆ ಇದೆ," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈ ರಿಯಾಲ್ಟಿ–2026ರ ಚೇರ್ಮನ್ ಅಶ್ವಿನ್ ಆರ್. ಪಾಳೇಗಾರ್, ಗೌರವ ಕಾರ್ಯದರ್ಶಿ ಕೆ.ಎಸ್.ಪ್ರಕಾಶ್, ಬಿಎಐ ಚೇರ್‌ಮನ್ ಕೆ.ಆರ್. ಪ್ರಭಾಕರ್‌ರಾವ್, ಗೌರವ ಕಾರ್ಯದರ್ಶಿ ಎಂ.ಡಿ. ಪ್ರವೀಣ್‌ಪಾಲ್ , ಕ್ರೆಡಾಯ್ ಮೈಸೂರು ಚಾಪ್ಟರ್ ಅಧ್ಯಕ್ಷ ಹರೀಶ್ ಶೆಣೈ, ಗೌರವ ಕಾರ್ಯದರ್ಶಿ ನಾಗರಾಜ್ ವಿ. ಭೈರಿ, ಉದ್ಯಮಿಗಳಾದ ಶ್ರೀಹರಿ ಹಾಗೂ ಇತರರು ಇದ್ದರು.

---

**ಲಿಂಗರಾಜು ಹೇಳಿಕೆ**

# ಯುವಸಮೂಹಕ್ಕೆ ಉದ್ಯೋಗ ಕೊಡುವ ಕೆಲಸವಾಗಲಿ

ಮೈಸೂರು: ಕೇಂದ್ರ ಅಥವಾ ರಾಜ್ಯ ಸರ್ಕಾರ ಯುವ ಸಮೂಹಕ್ಕೆ ಉದ್ಯೋಗ ಸೃಷ್ಟಿಸಬೇಕು.ಇಲ್ಲವಾದರೆ ನಿರುದ್ಯೋಗ ಯುವಕರು ಆತ್ಮಹತ್ಯೆ ಮಾಡಿಕೊಳ್ಳುವ ಸಂಭವ ಎದುರಾಗಲಿದೆ ಎಂದು ಮೈಸೂರು ಕೈಗಾರಿ ಕೆಗಳ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು ಹೇಳಿದರು.



ಮೈಸೂರು ಕನ್ನಡ ವೇದಿಕೆಯಿಂದ ನಗರದ ಸ್ವಾತಿ ಹೋರಾಟಗಾರರ ಉದ್ಯಾನವನದಲ್ಲಿ ಕಾರ್ಮಿಕ ದಿನಾಚರಣೆ ಪ್ರಯುಕ್ತ ಅಸಂಘಟಿತ ಕಾರ್ಮಿಕರಿಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಕಾರ್ಮಿಕರ ಏಳಿಗೆಗಾಗಿ ನಮ್ಮ ಕೈಗಾರಿಕಾ ವಾಣಿಜ್ಯ ಉದ್ಯಮದಿಂದ ಅನೇಕ ಸವಲತ್ತುಗಳನ್ನು ಮಾಡುತ್ತಿದ್ದೇವೆ. ವರ್ಷದಲ್ಲಿ ಅಸಂಘ ಟಿತ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ನಡೆಸುವುದು ಅವರ ಮಕ್ಕಳಿಗೆ ಶಾಲೆಯ ಶುಲ್ಕ ಭರಿಸುವುದು ಆಸ್ಪತ್ರೆಯ ಚಿಕಿತ್ಸೆ ಖರ್ಚು ಇವೆಲ್ಲವೂ ಸಹ ಮಾಡುತ್ತಾ ಬಂದಿದ್ದೇವೆಂದರು.

ಅಸಂಘಟಿತವಲಯದಲ್ಲಿ ಇಂದು ಇಂಜಿನಿಯರ್, ಎಂಎ, ಎಂಕಾಂ ಸೇರಿ ಅನೇಕ ಉನ್ನತ ಪದವೀಧರರು ದುಡಿಯುತ್ತಿರುವುದು ಗಮನಿಸಿದರೆ ನೋವಿನ ಸಂಗತಿ ಯಾಗಿದೆ. ಈ ನಿಟ್ಟಿನಲ್ಲಿ ದುಡಿಯುವ ಯುವ ಜನರಿಗೆ ಸರ್ಕಾರಗಳು ಉದ್ಯೋಗ ಕೊಡುವ ಕೆಲಸ ಮಾಡಬೇ ಕಿದೆ. ಯುವಕರಿಗೆ ಕಾಯಕ ನೀಡಿದಾಗ ಮಾತ್ರವೇ ಶಿಕ್ಷಣ ನೀಡಿದ್ದು ಸಾರ್ಥಕವಾಗಲಿದೆ ಎಂದರು.

ಎಪಿಎನ್ ಸಂಸ್ಥೆಯ ನಾಗೇಶ್ ಮಾತನಾಡಿ, ಇತ್ತಿಚೆಗೆ ನಮ್ಮಲ್ಲಿಗೆ ಅನೇಕ ಐಟಿ, ಇಂಜಿನಿಯರ್ ಪದವಿ ಮುಗಿಸಿದ ಯುವ ಸಮೂಹ ಉದ್ಯೋಗ ಬೇಡಿಕೆಯೊಂದಿಗೆ ಬರುತ್ತಿದ್ದಾರೆ. ಆದರೆ ನಮಗೆ ನಲ್ಲಿ, ಎಲೆಕ್ಟ್ರಿಕ್ ಕೆಲಸಗಾರರು ಬೇಕಿರುತ್ತಾರೆ. ಹೀಗಾಗಿ ಉನ್ನತ ವ್ಯಾಸಂಗ ಮುಗಿಸಿದವರಿಗೆ ಯಾವ ಉದ್ಯೋಗ ಕೊಡುವುದು ಎಂಬ ಪ್ರಶ್ನೆ ಎದುರಾಗುತ್ತಿದೆ. ಹೀಗಾಗಿ ಸರ್ಕಾರ ಯುವಕರ ವಿದ್ಯಾರ್ಹತೆಗೆ ಅನುಗುಣವಾದ. ಉದ್ಯೋಗ ಸೃಷ್ಟಿಸುವ ಕೆಲಸಮಾಡಬೇಕಿದೆ ಎಂದರು.

ವಿವಿಧ ಕ್ಷೇತ್ರದ ಶ್ರಮಜೀವಿಗಳಾದ ನಾಗೇಶ್ ರಾವ್, ಚಕ್ರವರ್ತಿ, ಆರ್. ಮಹದೇವ್, ಮುಬಾರಕ್ ಪಾಷ, ಎಸ್.ಪಳನಿ, ಕೆ.ಶಂಕರ್, ಸ್ವಾಮಿ, ಎಂ.ಕಿಶೋರ್, ಜೆ.ಎಸ್.ಕಿರಣಕುಮಾರ್, ಎನ್.ಶಿವೇಗೌಡ, ಸುರೇಶ್ ಅವರಿಗೆ ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಭೂ ದಾಖಲೆ ಸಹಾಯಕ ನಿರ್ದೇಶಕ ಎಂ.ಜೆ.ಚಿಕ್ಕಣ್ಣ, ನೀರಾವರಿ ಇಲಾಖೆ ಸಹಾಯಕ ಇಂಜಿನಿಯರ್ ರೇಣುಕೇಶ್ವರ ಅತಿಥಿಗಳಾಗಿದ್ದರು. ವೇದಿಕೆ ಅಧ್ಯಕ್ಷ ಬಾಲಕೃಷ್ಣ, ವೇದಿಕೆಯ ನಾಲಾಬೀದಿ ರವಿ, ಮನೋಹರ್, ಸಾಲುಂಡಿ ದೊರೆಸ್ವಾಮಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೇಸದ ಬಾಬು ಸೇರಿ ಅನೇಕರು ಉಪಸ್ಥಿತರಿದ್ದರು.

ವರ್ತಮಾನ



## ಎರಡು ದಿನಗಳ ರಾಜ್ಯ ಪತ್ರಕರ್ತರ ಕಾರ್ಯಾಗಾರ

# ಪತ್ರಕರ್ತರ ಸವಲತ್ತುಗಳಿಗೆ ಸಂಘ ಶ್ರಮಿಸುತ್ತಿದೆ: ರಾಜ್ಯಾಧ್ಯಕ್ಷ ಜಿ.ಎಮ್.ರಾಜಶೇಖರ್ ಹೇಳಿಕೆ




**ಎಚ್.ಡಿ.ಕೋಟೆ:** ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ವತಿಯಿಂದ ಉಡುಪಿ ಜಿಲ್ಲೆಯ, ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದಲ್ಲಿ ನಡೆದ ಎರಡು ದಿನಗಳ ರಾಜ್ಯ ಪತ್ರಿಕಾ ಕಾರ್ಯಗಾರದಲ್ಲಿ ಎಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಸಂಘವು ಭಾಗವಹಿಸಿ ರಾಜ್ಯ ಸಂಘಕ್ಕೆ ಸಹಕಾರ ನೀಡಿತು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಜಿ. ಎಂ.ರಾಜಶೇಖರ್ ಮಾತನಾಡಿ, ಸರ್ಕಾರದ ಸೌಲಭ್ಯಗಳು ದೊಡ್ಡ ಪತ್ರಿಕೆಗಳಿಗೆ ಮಾತ್ರ ಸಿಗುತ್ತದೆಯೇ ವಿನಹ ಗ್ರಾಮೀಣ ಪತ್ರಕರ್ತರಿಗೆ ಸಿಗುತ್ತಿಲ್ಲ. ಈ ಬಗ್ಗೆ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳ ನಡುವೆ ನಮ್ಮ ಸಂಘ ಸಮನ್ವಯತೆ ಸಾಧಿಸುತ್ತಿದ್ದು, ಗ್ರಾಮೀಣ ಪತ್ರಕರ್ತರ ಸವಲತ್ತುಗಳಿಗಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಅಂದಿನ ಪತ್ರಿಕೋದ್ಯಮಕ್ಕೂ, ಇಂದಿನ ಪತ್ರಕರ್ತ ಪತ್ರಿಕೋದ್ಯಮಕ್ಕೂ ಬಹಳಷ್ಟು ವ್ಯತ್ಯಾಸವಿದ್ದು, ಪತ್ರಕರ್ತರು ಅಧ್ಯಯನ ಮಾಡಿ ಸುದ್ದಿಗಳನ್ನು ಮಾಡಬೇಕು ಹಾಗೂ ಸ್ಥಳೀಯವಾಗಿ ಮಾಹಿತಿಗಳು ಪತ್ರಕರ್ತರಿಗೆ ತಿಳಿದಿರಬೇಕು ಎಂಬ ಉದ್ದೇಶದಿಂದಲೇ ರಾಜ್ಯ ಸಂಘವು ಪತ್ರಕರ್ತರಿಗೆ ಕಾರ್ಯಗಾರವನ್ನು ಏರ್ಪಡಿಸುತ್ತಿದೆ. ಪತ್ರಕರ್ತರ ಸಮಸ್ಯೆಗಳಿಗೆ ಸಂಘವು ಸ್ಪಂದಿಸುವುದಾಗಿ ಹೇಳಿದರು.

ಇತ್ತೀಚಿನ ದಿನಗಳಲ್ಲಿ ಒಂದು ಪತ್ರಿಕೆಯನ್ನು ಬೆಳೆಸಿ, ಉಳಿಸಿಕೊಳ್ಳುವುದು ಸಂಕಷ್ಟದ ವಿಚಾರ. ಉಡುಪಿ, ಮಂಗಳೂರು ಜಿಲ್ಲೆಗಳು ಪತ್ರಿಕಾರಂಗದ ಮಹತ್ವವನ್ನು ಸಾರಿ ಹೇಳಿವೆ. ಆದ್ದರಿಂದ, ಈ ಜಿಲ್ಲೆಗಳಲ್ಲಿ ಪತ್ರಿಕಾರಂಗ ಇಂದಿಗೂ ಸಿರಿವಂತವಾಗಿ ಉಳಿದುಕೊಂಡಿದೆ. ಈಗಿನ ಡಿಜಿಟಲ್ ಯುಗದಲ್ಲಿ ಪತ್ರಿಕೆಯನ್ನು ಉಳಿಸಿಕೊಳ್ಳುವುದು ಸಾಹಸದ ಕಾರ್ಯವಾಗಿದ್ದು, ಪತ್ರಿಕೆಗಳು ಆರ್ಥಿಕವಾಗಿ ನಷ್ಟ ಅನುಭವಿಸುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ಫೆಡರೇಶನ್ ಆಫ್ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಡಾ.ರವೀಂದ್ರ ಶೆಟ್ಟಿ ಬಜಗೋಳಿ ಮಾತನಾಡಿ, ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘವು ರಾಜ್ಯದಲ್ಲಿ ಪತ್ರಕರ್ತರಿಗಾಗಿ ಹಲವಾರು ಸೇವಾ ಚಟುವಟಿಕೆಗಳನ್ನು ಹಮ್ಮಿಕೊಂಡಿರುವುದು ಬಹಳ ಸಂತಸದ ವಿಚಾರ. ಪತ್ರಕರ್ತರ ಸಂಕಷ್ಟಗಳ ಬಗ್ಗೆ ರಾಜ್ಯ ಸಂಘವು ಸ್ಪಂದಿಸುವ ಕೆಲಸ ಮಾಡುತ್ತಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿರುವ ಪತ್ರಕರ್ತರು ಕಾರ್ಯಗಾರದಲ್ಲಿ ಭಾಗವಹಿಸುವುದರ ಜೊತೆಗೆ ಕರಾವಳಿ ಭಾಗದ ಐತಿಹಾಸಿಕ ಹಾಗೂ ಧಾರ್ಮಿಕ ಹಿನ್ನೆಲೆಯನ್ನು ಪರಿಚಯ ಮಾಡಿಕೊಂಡಿರುವುದು ಸಂತಸ ತಂದಿದೆ. ಮಾಧ್ಯಮ ರಂಗವನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ರಾಜ್ಯದ ಪತ್ರಕರ್ತರ ಅಭಿವೃದ್ದಿಗಾಗಿ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘವು ಹಲವಾರು ರೂಪು ರೇಷೆಗಳನ್ನು ಹಮ್ಮಿಕೊಂಡಿದೆ ಎಂದು ಹೇಳಿದರು.

ಪತ್ರಿಕೆಗಳಿಂದ ನಾವು ಬಹಳಷ್ಟು ಜ್ಞಾನಾರ್ಜನೆಯ ಜೊತೆಗೆ ಮಾಹಿತಿಗಳನ್ನು ಪಡೆಯುತ್ತಿದ್ದೇವೆ. ಪತ್ರಿಕೆ ಎಂದರೆ ಪ್ರತಿಯೊಬ್ಬರಿಗೂ ಅನಿವಾರ್ಯವಾದ ವ್ಯವಸ್ಥೆ. ಸಮಾಜದಲ್ಲಿ ಪತ್ರಿಕೆಗಳ ಜವಾಬ್ದಾರಿ ಪ್ರಮುಖವಾಗಿ ಇರುವುದರಿಂದ ಪತ್ರಿಕಾ ರಂಗವು ಬಹಳಷ್ಟು ಶ್ರೇಷ್ಠವಾದದ್ದು, ಪತ್ರಿಕೆಗಳಿಲ್ಲದ ಜಗತ್ತನ್ನು ಊಹಿಸಲು ಸಾಧ್ಯವಿಲ್ಲ ಎಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನ ನಿರ್ದೇಶಕ ಭಾಸ್ಕರ ಎಸ್ ಕೋಟ್ಯಾನ್ ಅವರು ಪತ್ರಿಕೆಗಳ ಮಹತ್ವದ ಬಗ್ಗೆ ತಿಳಿಸಿದರು.

**ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ:** ಸಹಕಾರ ರತ್ನ ಪ್ರಶಸ್ತಿಗೆ ಭಾಜನರಾದ ರಾಜಾಪುರ ಸಾರಸ್ವತ್ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿಯ ಅಧ್ಯಕ್ಷ ಕಡಾರಿ ರವೀಂದ್ರ ಪ್ರಭು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಭಾಸ್ಕರ ಎಸ್ ಕೋಟ್ಯಾನ್, ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಮುದ್ರಾಡಿ ಗ್ರಾ.ಪಂ ಅಧ್ಯಕ್ಷೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕ್ರಿಯೇಟಿವ್ ಸಂಸ್ಥೆಯ ಸಹ ಸಂಸ್ಥಾಪಕ ಗಣಪತಿ ಭಟ್ ಅವರನ್ನು ಸನ್ಮಾನಿಸಲಾಯಿತು.

ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ವಸಂತ್ ಕುಮಾರ್, ಜಿಲ್ಲಾಧ್ಯಕ್ಷ ಎಂ.ಎನ್. ಕೊಟ್ಟಾರಿ, ಕಾರ್ಕಳ ಸಂಘದ ಅಧ್ಯಕ್ಷೆ ನಳಿನಿ ಸುವರ್ಣ, ಕಾರ್ಯದರ್ಶಿ ರಂಜಿತ್, ಶಶಿಕಾಂತ್ ಹಾಗೂ ಸಂಘದ ಎಲ್ಲ ಪದಾಧಿಕಾರಿಗಳು, ಉದ್ಯಮಿ ಹಾಗೂ ಸಮಾಜ ಸೇವಕ ಬೋಳ ಪ್ರಶಾಂತ್ ಕಾಮತ್ , ಹೈ ಕೋರ್ಟ್ ನ್ಯಾಯವಾದಿ ಅಮೃತೇಶ್, ಹಿರ್ಗಾನ ಗ್ರಾ.ಪಂ ಮಾಜಿ ಅಧ್ಯಕ್ಷ ಸಂತೋಷ್ ಶೆಟ್ಟಿ, ಹಿರ್ಗಾನ ಗ್ರಾಮದ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸಿರಿಯಣ್ಣ ಶೆಟ್ಟಿ, ಉದ್ಯಮಿ ಹರಿಶ್ಚಂದ್ರ ಕುಲಾಲ್, ಶ್ರೀಧರ ಆಚಾರ್ಯ ಕಾನಂಗಿ, ತನುಜಾ ರಾಜೇಶ್, ಸರ್ಟಿಫೈಡ್ ಯು ಟ್ಯೂಬರ್ ಅಲೆನ್‌ಡಿ ಮೆಲ್ಲೋ ಸೇರಿದಂತೆ ಎಲ್ಲ ಜಿಲ್ಲೆಗಳ ಪದಾಧಿಕಾರಿಗಳು ಇದ್ದರು.

# ಶೀಘ್ರದಲ್ಲಿ ಕೆರೆಗಳಿಗೆ ನೀರು ತುಂಬಿಸಲಾಗುವುದು: ಶಾಸಕ

**ಎಚ್ ಡಿ ಕೋಟೆ :**ಆದಿವಾಸಿಗಳ ಅಭಿವೃದ್ಧಿ, ಶಿಕ್ಷಣ, ಅವರ ಪಾರಂಪರಿಕ ಹಕ್ಕುಗಳ ಜೊತೆಗೆ ರೈತರ ಪರವಾಗಿಯೂ ಪೀಪಲ್ ಟ್ರೀ ಸಂಸ್ಥೆಯು ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ಶಾಸಕ ಅನಿಲ್ ಚಿಕ್ಕಮಾದು ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಡಾ ಬಿ ಆರ್ ಅಂಬೇಡ್ಕರ್ ಭವನದಲ್ಲಿ ಪೀಪಲ್ ಟ್ರೀ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಹವಾಮಾನ ಬದಲಾವಣೆ ನಿಭಾಯಿಸಲು ಒಗ್ಗೂಡುವಿಕೆ ಎಂಬ ವಿಷಯದಲ್ಲಿ ತಾಲೋಕು ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು

ಮೊನ್ನೆಯಷ್ಟೇ ಡಿಬಿ ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 50 ಮಂದಿಗೆ ಅರಣ್ಯ ಹಕ್ಕು ಪತ್ರಗಳನ್ನು ವಿತರಿಸಲಾಗಿದೆ.. ಉಳಿದವರ ಹಕ್ಕುಪತ್ರಗಳನ್ನು ಶೀಘ್ರದಲ್ಲಿ ನೀಡಲಾಗುವುದು. ಇತ್ತೀಚಿಗೆ ನಮ್ಮ ತಾಲೂಕಿನ ರೈತರು ರಾಗಿ, ಭತ್ತ, ಜೋಳ ಬದಲಿಗೆ ಶುಂಠಿ ಬೆಳೆ ಮೊರೆ ಹೋಗಿದ್ದಾರೆ. ಆದಷ್ಟು ರೈತರು ಸಾವಯವ ಗೊಬ್ಬರ ಬಳಸಿ ವ್ಯವಸಾಯ ಮಾಡುವ ಮೂಲಕ ಮಣ್ಣಿನ ಫಲವತ್ತತೆ ಕಾಪಾಡಿಕೊಂಡು ಹೋಗಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ರೈತರಿಗೆ ಸಲಹೆ ನೀಡಿದರು.

ಪೀಪಲ್ ಟ್ರೀ ಸಂಸ್ಥೆ ನೀಡಿರುವ ಮನವಿ ಪತ್ರ ಕುರಿತು ಪ್ರತಿಕ್ರಿಯಿಸಿದ ಶಾಸಕರು, ನಮ್ಮ ತಾಲೂಕಿನಲ್ಲಿ ನಾಲ್ಕು ಡ್ಯಾಮ್ ಗಳಿದ್ದು, ಅವುಗಳ ಮೂಲಕ ಕೆರೆಗಳಿಗೆ ನೀರು ತುಂಬಿಸುವ ಪ್ರಾಜೆಕ್ಟ್ ಅನ್ನು ಈಗಾಗಲೇ ಕೈಗೆಟ್ಟಿಕೊಳ್ಳಲಾಗಿದೆ.. ಆದಷ್ಟು ಬೇಗ ಅದನ್ನು ಕೂಡ ಕಾರ್ಯರೂಪಕ್ಕೆ ತರಲಾಗುವುದು ಎಂದು ಹೇಳಿದರು.

ಹಿರಿಯ ಪತ್ರಕರ್ತ ಮಹೇಶ್ ಮಾತನಾಡಿ, ಸರಕಾರದಷ್ಟೇ ಎನ್ ಜಿ ಒಗಳು ಕೂಡ ಹೆಚ್ ಡಿ ಕೋಟೆ ತಾಲೂಕು ಅಭಿವೃದ್ಧಿಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿವೆ. ಎನ್ ಜಿಒಗಳ ಈ ಸಮಾಜಸೇವೆಗೆ ಶಾಸಕ ಅನಿಲ್ ಚಿಕ್ಕಮಾದು ಅವರು ಕೂಡ ಸಹಕಾರ ನೀಡುತ್ತಿದ್ದಾರೆ. ರಾಜಕೀಯ ಹೊರತುಪಡಿಸಿ ನೋಡಿದ್ರೆ ಶಾಸಕರು ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಸಂಶೋಧಕ ಚೆನ್ನರಾಜು ಮಾತನಾಡಿ ಬದಲಾಗುತ್ತಿರುವ ಈ ಸನ್ನಿವೇಶದಲ್ಲಿ ಹವಾಮಾನದ ಬದಲಾವಣೆಯಿಂದ ಜಾಗತಿಕ ಮಟ್ಟದಲ್ಲಿ ಸಾಕಷ್ಟು ಬದಲಾವಣೆ ಆಗುತ್ತಿದ್ದು, ಇದರಿಂದ ಜನ ಜಾನುವಾರು ಮತ್ತು ಜೀವ ಸಂಕುಲಗಳ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರುತ್ತಿದ್ದು ನಮ್ಮ ದೈನಂದಿನ ಬದುಕಿನಲ್ಲಿ ತುಂಬಾ ಏರುಪೇರುಗಳಾಗುತ್ತಿವೆ. ಇದರಿಂದ ನಮ್ಮ ಆರೋಗ್ಯದ ಮೇಲೆ ತುಂಬಾ ದುಷ್ಪರಿಣಾಮ ಬೀರುತ್ತಿದೆ. ಇದರ ಬಗ್ಗೆ ಇಡಿ ನಾಗರಿಕ ಸಮಾಜ ಒಗ್ಗೂಡಿ ಕೆಲಸ ಮಾಡದಿದ್ದರೆ ಬಹುಶಃ ಮುಂದಿನ ಪೀಳಿಗೆಗೆ ನಾವು ಅತ್ಯಂತ ದ್ರೋಹ ಬಗೆದಂಗೆ ಆಗುತ್ತದೆ, ಅದ್ದರಿಂದ ನಾವೆಲ್ಲರೂ ಈಗೀನಿಂದಲೆ ಹವಾಮಾನವನ್ನ ಕಾಪಾಡಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಹಶಿಲ್ದಾರ್ ಶ್ರೀನಿವಾಸ್, ಬಿಕೆಎಸ್ ವಿಜಯ ಕುಮಾರ್, ಸುದೀಪ್, ನಾಗರಾಜ್, ಮಹೇಶ್, ಚೆನ್ನರಾಜ್, ಗುರುಸ್ವಾಮಿ, ಮರಿಲಿಂಗಣ್ಣ, ಲಿಂಗರಾಜ್, ಪ್ರಕಾಶ್, ರಾಜಹುಣಸೂರು, ಸಣ್ಣಸ್ವಾಮಿನಾಯಕ, ಮಂಜು, ಇಂದ್ರಮ್ಮ, ರೇಖಾ, ವಿಜಿಯಮ್ಮ, ಜವರೇಗೌಡ, ಸುರೇಶ್, ಚೆನ್ನಬಸಪ್ಪ, ರೀನಾ, ಫಣೀಶ್, ಶಿವಮ್ಮ, ಸೇರಿದಂತೆ ಅನೇಕ ಮಂದಿ ಉಪಸ್ಥಿತರಿದ್ದರು.




# ಅರ್ಜಿ ಆಹ್ವಾನ



**ರಾಮನಗರ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ (ಪಿ.ಯು.ಸಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ (ಪಿ.ಯು.ಸಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ವಿದ್ಯಾರ್ಥಿಗಳು 2026–27ನೇ ಸಾಲಿಗೆ ವೆಬ್‌ಸೈಟ್ http://shp.karnataka.gov.in/bcwd ಆನ್‌ಲೈನ್ ಮೂಲಕ 2026ರ ಜೂನ್ 15ರ ವರೆಗೆ ಅರ್ಜಿ ಸಲ್ಲಿಸಬಹುದು.

# ನಮ್ಮೂರು ನಮ್ಮ ಕೆರೆ ಯೋಜನೆಗೆ ಚಾಲನೆ



**ಕೆ.ಆರ್.ನಗರ:** ತಾಲ್ಲೂಕಿನ ವಡ್ಡರ ಕೊಪ್ಪಲು ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಡಿ 6 ಎಕರೆ ವಿಸ್ತೀರ್ಣದ ನರಸಿಂಹ ಕೆರೆಯ ದುರಸ್ತಿ ಕಾರ್ಯಕ್ಕೆ ಗುದ್ದಲಿಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕಿ ಮಮತರಾವ್ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ ಬರದ ಭೂಮಿಗೆ ಭಗೀರಥ ಕಾರ್ಯಕ್ರಮವೇ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮ ಎಂದರು. ಕೃಷಿಕರು, ಜನ, ಜಾನುವಾರು, ಪ್ರಾಣಿಪಕ್ಷಿಗಳ ಬದುಕಿಗೆ ಕೆರೆ ಕಟ್ಟೆಗಳು ಆದಾರವಾಗಿವೆ. ಇಂತಹ ಕೆರೆಗಳನ್ನು ಉಳಿಸುವುದು ನಮ್ಮಂತಹ ಪ್ರಜ್ಞಾವಂತ ನಾಗರೀಕರ ಹೊಣೆಗಾರಿಕೆಯಾಗಿದೆ ಎಂದರು. ಈ ಭೂಮಿ ನಾವು ಬಾಡಿಗೆಗೆ ಪಡೆದ ಸ್ವತ್ತಾಗಿದೆ. ಇದನ್ನು ಮುಂದಿನ ಪೀಳಿಗೆಗೆ ಜೋಪಾನದಿಂದ ಕಾಪಾಡಿ ವರ್ಗಾಯಿಸಬೇಕಾಗಿದೆ ಎಂದರು.

ಯೋಜನೆಯ ತಾಲೂಕು ಯೋಜನಾಧಿಕಾರಿ ಉಮೇಶ್ ಪೂಜಾರಿ, ತಾಲೂಕು ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ವಡ್ಡರಕೊಪ್ಪಲು ಶಿವರಾಮು, ಕೆರೆ ಸಮಿತಿ ಅಧ್ಯಕ್ಷ ಮೋಹನ್, ಉಪಾಧ್ಯಕ್ಷ ದೇವರಾಜು, ಲೆಕ್ಕ ಪರಿಶೋಧಕ ಅಶೋಕ್, ಮೇಲ್ವಿಚಾರಕಿ ಸಂಗೀತ, ಕಾರ್ಯದರ್ಶಿ ರಮೇಶ್, ರೈತ ಮುಖಂಡ ಹರೀಶ್, ಒಕ್ಕೂಟದ ಅಧ್ಯಕ್ಷೆ ರೂಪ, ಸೇವಾ ಪ್ರತಿನಿಧಿ ಪವಿತ್ರ ಗ್ರಾಮಸ್ಥರು ಉಪಸ್ಥಿತರಿದ್ದರು.

# ಬಸವಣ್ಣ ತತ್ವಗಳನ್ನು ಪಾಲಿಸಿದರೆ ದೇಶ ಜ್ಯಾತ್ಯತೀತವಾಗಲಿದೆ: ಡಾ.ಡಿ.ತಿಮ್ಮಯ್ಯ



**ಮೈಸೂರು:** ಬಸವಣ್ಣ ಅವರನ್ನು ಎಲ್ಲರೂ ಪಾಲಿಸಿದರೆ ಮಾತ್ರ ಇಡೀ ದೇಶ ಜ್ಯಾತ್ಯತೀತ ದೇಶವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ನಗರದ ಹೊಸಮಠದ ನಟರಾಜ ಸಭಾ ಭವನದಲ್ಲಿ ಮೈಸೂರು ಶರಣ ಮಂಡಲಿ ವತಿಯಿಂದ ಶನಿವಾರ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಬಸವರತ್ನ ಪ್ರಶಸ್ತಿಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಬಸವಣ್ಣ ಅವರ ತತ್ವಗಳನ್ನು ಎಲ್ಲರಿಗೂ ವಿಸ್ತರಿಸುವ ಕೆಲಸವಾಗಬೇಕು ಎಂದರು.

ಎಲ್ಲರಿಗೂ ಲಿಂಗಧಾರಣೆ ಮಾಡುವ ಮೂಲಕ ಅಂತರ್ಜಾತಿ ವಿವಾಹಕ್ಕೆ ಒತ್ತು ಕೊಟ್ಟರು. ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ ಎಂಬ ಅವರ ವಚನ ಎಷ್ಟು ಅರ್ಥಗರ್ಭಿತವಾಗಿದೆ. ಇದನ್ನು ಯಾವ ಧರ್ಮದಲ್ಲೂ ಯಾರೂ ಹೇಳಲಿಲ್ಲ. ನಾವು ಬಸವಣ್ಣ ಅವರನ್ನು ನೆನೆದರೆ ಸಾಲದು, ಅವರನ್ನು ಅನುಸರಿಸಬೇಕು ಎಂದರು.

ಬಸವಣ್ಣ ಅವರು ದೇಶದಲ್ಲಿ ಮಹಾಪುರುಷನಾಗಿ ಜನಿಸಿ ಜಗತ್ತಿಗೆ ದಿವ್ಯಜ್ಯೋತಿ ನೀಡಿದರು. ಅವರು ಬಾಲ್ಯದಲ್ಲಿಯೇ ಸಮಾಜದ ಕೆಟ್ಟ ಸಂಪ್ರದಾಯಗಳನ್ನು ವಿರೋಧಿಸಿ, ಸಮಾಜ ಸುಧಾರಣೆಗೆ ಮುಂದಾದರು. ಕಾಯಕ ಮತ್ತು ದಾಸೋಹ ಸಂದೇಶ ಸಾರಿದರು. ವೈಚಾರಿಕತೆ ಬಗ್ಗೆ ಅರಿವು ಮೂಡಿಸಿದರು ಎಂದರು.

ಎಲ್ಲ ತುಳಿತ ಸಮುದಾಯದವರನ್ನು ಒಗ್ಗೂಡಿಸಿ ಸಮಾಜದ ಒಳಿತಿಗೆ ಅನುಭವ ಮಂಟಪ ಮಾಡಿದರು ಎಂದರು.

ಬಸವಣ್ಣ ಅವರು 12ನೇ ಶತಮಾನದಲ್ಲಿಯೇ ಸ್ತ್ರೀ ಸಮಾನತೆ ನೀಡಿದರು. ಇಂದು ಅದೇ ಹಾದಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ತ್ರೀಯರಿಗೆ ಸ್ತ್ರೀ ಶಕ್ತಿ, ಗೃಹಲಕ್ಷ್ಮೀ, ಅನ್ನಭಾಗ್ಯ ಸೇರಿ ನಾನಾ ಯೋಜನೆಗಳನ್ನು ಜಾರಿ ಮಾಡುವ ಮೂಲಕ ನೆರವಾಗಿದ್ದಾರೆ. ಹಾಗಾಗಿ, ನಮ್ಮ ಮಹಿಳೆಯರು ಬಸವಣ್ಣ ಅವರ ಜೊತೆಗೆ ಸಿದ್ದರಾಮಯ್ಯ ಅವರನ್ನು ನೆನೆಯಬೇಕು ಎಂದರು.

**ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ:** ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಿಸಿಪಿ ಸುಂದರ್ ರಾಜ್, ಹಂಪಿ ಕನ್ನಡ ವಿವಿ ಕುಲಪತಿ ಡಿ.ವಿ.ಪರಶಿವಮೂರ್ತಿ, ಡಿಎವಿ ಶಾಲೆಯ ಎನ್. ಸರ್ದಾರ್ ಸಚ್ಚಿದಾನಂದ ಮೂರ್ತಿ, ಎಂಐಟಿ ವಿದ್ಯಾಸಂಸ್ಥೆಯ ಪ್ರೊ. ಮುರುಳಿ, ಸಮಾಜ ಸೇವಕರಾದ ಎಚ್.ಎನ್.ಪ್ರೇಮ್ ಕುಮಾರ್, ಸುಧಾ ಮೃತ್ಯುಂಜಯಪ್ಪ ಅವರಿಗೆ 2026ನೇ ಸಾಲಿನ ಬಸವ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸೂರ್ಯಸಿಂಹಾಸನ ಮಠಾಧ್ಯಕ್ಷ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಹೆಳವರ ಹುಂಡಿ ಸಿದ್ದಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು, ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಮೈಸೂರು ಶರಣ ಮಂಡಳಿಯ ಗೌರವಾಧ್ಯಕ್ಷ ಯು.ಎಸ್. ಕುಮಾರ್, ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಕಾರ್ಯಾಧ್ಯಕ್ಷ ಎ.ಸಿ. ಜಗದೀಶ್, ಪ್ರಧಾನ ಸಂಚಾಲಕ ಎಂ.ಚಂದ್ರಶೇಖರ್ ಹಾಜರಿದ್ದರು.

# ಬಸವನಗುಡಿ ಶಾಖೆಯಲ್ಲಿ ವಿದ್ಯಾಪೀಠಗಳ ಶುಭಾರಂಭ

**ಬೆಂಗಳೂರು:** ನಗರದ ಬಸವನಗುಡಿ ಪ್ರದೇಶದಲ್ಲಿರುವ ಶ್ರೀ ಪುತ್ತಿಗೆ ಮಠದ ಶಾಖೆಯಲ್ಲಿ ಮಕ್ಕಳಿಗಾಗಿ ಶ್ರೀ ಸುಗುಣ ಸ್ಕೂಲ್ ವಿಪ್ರ ಮಹಿಳೆಯರಿಗೆ ಮಹಿಳಾ ವಿದ್ಯಾಪೀಠಹಾಗೂ ವಿಪ್ರ ಪುರುಷರಿಗೆ ಸಂಧ್ಯಾ ವಿದ್ಯಾಪೀಠವನ್ನು ಶುಭಾರಂಭ ಮಾಡಲಾಗಿದೆ.

ಈ ವಿದ್ಯಾಪೀಠಗಳ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಹಾಗೂ ಶ್ರೀ ವಿದ್ಯೇಶ ತೀರ್ಥ ಶ್ರೀಪಾದರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಅಹಲ್ಯ ಶರ್ಮ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಯಾಗಿ, ಹಾಗೂ ಅಸಗೋಡು ಜಯಸಿಂಹ, ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಭಾಗವಹಿಸಿ ಶುಭ ಹಾರೈಸಿದರು.

ವಿದ್ಯಾಪೀಠಗಳಲ್ಲಿ ತ್ರಿಮತಸ್ಥ ವಿಪ್ರ ಮಹಿಳೆಯರಿಗೆ ಪ್ರತಿದಿನ ಸ್ತೋತ್ರಗಳು, ಭಜನೆ, ಹಾಡುಗಳ ಅಭ್ಯಾಸವನ್ನು ನೀಡಲಾಗುತ್ತದೆ. ವಿಪ್ರ ಪುರುಷರಿಗೆ ವೇದ–ಶಾಸ್ತ್ರಗಳ ಪರಿಚಯ, ಮಂತ್ರಗಳು ಮತ್ತು ಸ್ತೋತ್ರಗಳ ಬೋಧನೆ ನಡೆಯಲಿದೆ.

ಇದಲ್ಲದೆ, ಶ್ರೀ ಸುಗುಣ ಸ್ಕೂಲ್‌ನಲ್ಲಿ ವಿಪ್ರ ಮಕ್ಕಳಿಗೆ ಮಹಾಂತೇ ಸರಿಯಾದ ಮಾಧ್ಯಮದಲ್ಲಿ ಪಾಠಗಳನ್ನು ಕಲಿಸಲಾಗುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.




# ವಿದ್ಯುತ್ ಅನಾಹುತ ತಪ್ಪಿಸಲು ಸೆಸ್ಕ್ ಸನ್ನದ್ಧ

**ಮೈಸೂರು:** ಗ್ರಾಹಕರಿಗೆ ಅಡಚಣೆರಹಿತ ವಿದ್ಯುತ್ ಸೇವೆ ನೀಡುತ್ತಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್), ಪ್ರಸ್ತುತ ಪೂರ್ವ ಮುಂಗಾರು ಆರಂಭ ಆಗುತ್ತಿರುವ ಸಂದರ್ಭದಲ್ಲಿ ಉಂಟಾಗುವ ವಿದ್ಯುತ್ ಸಮಸ್ಯೆಗಳು, ಅಪಾಯಗಳ ಕುರಿತಂತೆ ಜಾಗೃತಿ ಮೂಡಿಸಿ, ಎಚ್ಚರಿಕೆಯಿಂದಿರುವಂತೆ ಗ್ರಾಹಕರಿಗೆ ಸಲಹೆ ಮಾಡಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಸೆಸ್ಕ್ ಅಧಿಕಾರಿಗಳು, ನಿಗಮದ ವ್ಯಾಪ್ತಿಯ 5 ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಆರಂಭವಾಗಿ ಅಲ್ಲಲ್ಲಿ ಮಳೆಯಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ ಅತಿಯಾದ ಗಾಳಿ ಮತ್ತು ಮಳೆಯಿಂದ ವಿದ್ಯುತ್ ಅನಾಹುತಗಳು ಸಂಭವಿಸುವ ಸಾಧ್ಯತೆ ಇದೆ. ಮಳೆ ಸಂದರ್ಭದಲ್ಲಿ ಸಂಭವಿಸಬಹುದಾದ ವಿದ್ಯುತ್ ಅವಘಡಗಳು, ಅಡಚಣೆಗಳು ಹಾಗೂ ಇತರೆ ತೊಂದರೆಗಳನ್ನು ಎದುರಿಸಲು ಸೆಸ್ಕ್ ಸನ್ನದ್ಧವಾಗಿದೆ ಎಂದು ಹೇಳಿದ್ದಾರೆ.

ಗ್ರಾಹಕರ ಸುರಕ್ಷತೆ ಬಗ್ಗೆಯೂ ಹೆಚ್ಚಿನ ನಿಗಾವಹಿಸಲಾಗಿದ್ದು, ಸ್ಥಳೀಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಗ್ರಾಹಕರಿಗೆ ಅಗತ್ಯ ಸೇವೆ ನೀಡಲು ಕಾರ್ಯಪ್ರವೃತ್ತರಾಗಿದ್ದಾರೆ. ಅದರಂತೆ ಸಾರ್ವಜನಿಕರು ಅತಿಯಾದ ಗಾಳಿ ಮತ್ತು ಮಳೆಯ ಸಂದರ್ಭದಲ್ಲಿ ವಿದ್ಯುತ್ ಅಪಾಯಗಳು ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಲು ಕೋರಲಾಗಿದೆ.

ಸಾರ್ವಜನಿಕರು ತಮ್ಮ ಸುತ್ತಮುಲ್ಲಿನ ಪ್ರದೇಶಗಳಲ್ಲಿ ವಿದ್ಯುತ್ ತಂತಿ ತುಂಡಾಗಿ ಬಿದ್ದಿರುವುದು, ವಿದ್ಯುತ್ ಕಂಬಗಳು ಹಾನಿಯಾಗಿರುವುದು, ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಸಮಸ್ಯೆಗಳು ಕಂಡುಬಂದಲ್ಲಿ ಸಾರ್ವಜನಿಕರು ತುರ್ತಾಗಿ 24*7 ಸಹಾಯವಾಣಿ 1912 ಅಥವಾ ನಿಗಮದ ವಾಟ್ಸಾಪ್ ಸಂಖ್ಯೆ 9448991912 ಸಂಖ್ಯೆಗೆ ಫೊ?ಟೋ ಸಹಿತವಾಗಿ ಮಾಹಿತಿ ನೀಡುವಂತೆ ಅಥವಾ ಸ್ಥಳೀಯ ಸೆಸ್ಕ್ ಅಧಿಕಾರಿಗಳು, ಸಿಬ್ಬಂದಿಗೆ ಮಾಹಿತಿ ನೀಡುವಂತೆ ಸೆಸ್ಕ್ ಅಧಿಕಾರಿ ತಿಳಿಸಿದ್ದಾರೆ.

## ಮೋನಿಕಾ ಸಿಂಗ್: ಬದುಕಿನ ಅನ್-ಬ್ರೇಕಬಲ್ ಪಯಣ



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 27

ಜೀವನದಲ್ಲಿ ಎದುರಾಗುವ ಸವಾಲುಗಳು ಮನುಷ್ಯನನ್ನು ಕುಗ್ಗಿಸಬಹುದು ಅಥವಾ ಮತ್ತಷ್ಟು ಬಲಪಡಿಸಬಹುದು. ಇದಕ್ಕೆ ಜ್ವಲಂತ ಉದಾಹರಣೆ ಮೋನಿಕಾ ಸಿಂಗ್.

2005ರಲ್ಲಿ ನಡೆದ ಒಂದು ಭೀಕರ ಆಸಿಡ್ ದಾಳಿ ಅವರ ಕನಸುಗಳನ್ನು ಹೊಸಕಿ ಹಾಕಲು ಪ್ರಯತ್ನಿಸಿತು. ಕೇವಲ 19ನೇ ವಯಸ್ಸಿನಲ್ಲಿ 46ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ಅನುಭವಿಸಿದ ಮೋನಿಕಾ, ನೋವಿನ ಸುಳಿಯಲ್ಲಿ ಸಿಲುಕಿ ಮೌನವಾಗಲಿಲ್ಲ.

ಬದಲಿಗೆ,ಆ ನೋವನ್ನೇ ತಮ್ಮ ಏಳಿಗೆಯ ಮೆಟ್ಟಿಲಾಗಿಸಿಕೊಂಡರು.

ದಾಳಿಯ ನಂತರ ಸಮಾಜದ ದೃಷ್ಟಿಕೋನ ಮತ್ತು ದೈಹಿಕ ಬದಲಾವಣೆಗಳು ದೊಡ್ಡ ಸವಾಲಾಗಿದ್ದವು. ಆದರೆ ಮೋನಿಕಾ ಅವರ ಛಲ ಮಾತ್ರ ಅಚಲವಾಗಿತ್ತು.

ಫ್ಯಾಶನ್ ಲೋಕದ ಕನಸು ಕಂಡಿದ್ದ ಅವರು, ದೆಹಲಿಯ ಎನ್ ಐ ಎಫ್ ಟಿ ಯಲ್ಲಿ ಪದವಿ ಮುಗಿಸಿ, ಮುಂದೆ ನ್ಯೂಯಾರ್ಕ್‌ನ ಪ್ರತಿಷ್ಠಿತ ಪಾರ್ಸನ್ಸ್ ಸ್ಕೂಲ್ ಆಫ್ ಡಿಸೈನ್'ನಲ್ಲಿ ವ್ಯಾಸಂಗ ಮಾಡುವ ಮೂಲಕ ವಿಶ್ವದ ಗಮನ ಸೆಳೆದರು.


ಇಂದು ಅವರು ಕೇವಲ ಯಶಸ್ವಿ ಫ್ಯಾಶನ್ ಡಿಸೈನರ್ ಮಾತ್ರವಲ್ಲ, ತನ್ನ ತಂದೆಯ ಹೆಸರಿನಲ್ಲಿ ಮಹೇಂದ್ರ ಸಿಂಗ್ ಫೌಂಡೇಶನ್ ಸ್ಥಾಪಿಸಿ, ಆಸಿಡ್ ದಾಳಿಯಿಂದ ಬದುಕುಳಿದ ನೂರಾರು ಮಹಿಳೆಯರಿಗೆ ಆಸರೆಯಾಗಿದ್ದಾರೆ.



ನನ್ನ ಮುಖ ನನ್ನ ಕಥೆಯ ಒಂದು ಭಾಗವಷ್ಟೇ, ಅದು ನನ್ನ ಬದುಕಿನ ಅಂತ್ಯವಲ್ಲ ಎನ್ನುವ ಮೋನಿಕಾ ಅವರ ಮಾತುಗಳು ಸೋತು ಕುಳಿತವರಿಗೆ ಹೊಸ ಭರವಸೆ ನೀಡುತ್ತವೆ. ಸೋಲನ್ನು ಒಪ್ಪಿಕೊಳ್ಳದ ಅವರ ಮನೋಭಾವ ಮತ್ತು ಜೀವನದ ಮೇಲಿರುವ ಪ್ರೀತಿ ನಮ್ಮೆಲ್ಲರಿಗೂ ಮಾದರಿ.

ಅಡೆತಡೆಗಳು ಎಷ್ಟೇ ದೊಡ್ಡದಿದ್ದರೂ, ಆತ್ಮವಿಶ್ವಾಸವಿದ್ದರೆ ಶೂನ್ಯದಿಂದಲೂ ಸಾಮ್ರಾಜ್ಯ ಕಟ್ಟಬಹುದು ಎಂಬುದಕ್ಕೆ ಮೋನಿಕಾ ಸಿಂಗ್ ಅವರೇ ಸಾಕ್ಷಿ. ಇವರ ಬದುಕು ಕೇವಲ ಬದುಕುಳಿದವರ ಕಥೆಯಲ್ಲ, ಇದು ವಿಜಯಶಾಲಿಯ ಕಥೆ.

# ಒಳ್ಳೆಯವರಾಗಿರಿ ಆದರೆ ಮೂರ್ಖರಾಗಬೇಡಿ



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಜೀವನದಲಿ ನಾವು ಹಲವಾರು ಸಾರಿ ಎಂದುಕೊಳ್ಳುತ್ತೇವೆ
ನಾವು ಅವರನ್ನು ಎಷ್ಟು ನಂಬಿದ್ದೆವು ಅವರು ಈ ತರಹ ಮೋಸ ಮಾಡ್ತಾರೆ ಅಂದುಕೊಂಡಿರಲಿಲ್ಲ! ಅವರು ಬದಲಾದರು ಮುಂಚಿನ ತರಹ ಇಲ್ಲ! ಅವರು ಹಿಂದೆ ಹೀಗೆ ಮಾತಾಡ್ತಾರೆ ಅಂತ ಅನಿಸಿರಲಿಲ್ಲ ಅವರು ನನಗೆ ಸುಳ್ಳು ಹೇಳ್ತಾರೆ ಎನ್ನಿಸಲಿಲ್ಲ ಅವರು ಕಷ್ಟದಲಿ ಇರುವಾಗ ಎಷ್ಟು ಸಹಾಯ ಮಾಡಿದ್ದೆ

ಇಂತಹ ಸಂದರ್ಭ ಬಹುತೇಕ ಎಲ್ಲರ ಬದುಕಿನಲ್ಲೂ ಬಂದಿರುತ್ತದೆ. ಆಗ ನಮ್ಮನ್ನು ಕಾಡುವ ಪ್ರಶ್ನೆ ಯಾಕೆ ಹೀಗೆ ಆಯಿತು ಒಳ್ಳೆಯವರಿಗೆ ಕಾಲವಿಲ್ಲ ಒಳ್ಳೆತನಕ್ಕೆ ಬೆಲೆ ಇಲ್ಲ

ಇಂತಹ ನೋವು ಹೃದಯ ಕಿವುಚುವದು.

ಹಾಗೆಂದು ಕೆಟ್ಟವರಾಗಿ, ಮೋಸಮಾಡುತ್ತ ಬದುಕಬೇಕೆ ಇಲ್ಲವಲ್ಲ ಮತ್ತೇನು ಹಾವನ್ನು ನೋಡಿ ಹೆದರಬೇಡ, ಹಾವಿನ ಸ್ವಭಾವ ತಿಳಿದು ನಡೆಯು ಎನ್ನುವ ಹಳೆಯ ಮಾತಿದೆ.

ಹಾಗೆಯೇ ಬದುಕಿನಲ್ಲಿ ಮನುಷ್ಯರನ್ನು ದ್ವೇಷಿಸಬೇಕಿಲ್ಲ; ಆದರೆ ಅವರನ್ನು ಅರ್ಥ ಮಾಡಿಕೊಳ್ಳುವ ಜಾಣ್ಮೆ ಬೇಕು.

**ನಂಬಿಕೆ:** ನಂಬಿಕೆ ಎನ್ನುವುದು ಬಹುಮೂಲ್ಯ ಆಸ್ತಿ. ಅದನ್ನು ಕಂಡಕಂಡವರ ಕೈಗೆ ಕೊಟ್ಟರೆ, ಕಳೆದುಕೊಂಡ ಮೇಲೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ನಾವು ಯಾರನ್ನಾದರೂ ನಂಬಬೇಕಾದರೆ ಎಷ್ಟು, ಯಾವಾಗ, ಯಾವ ಮಟ್ಟಿಗೆ ನಂಬಬೇಕು ಎಂಬುದನ್ನು ಅವರ ವ್ಯಕ್ತಿತ್ವ, ವಿಚಾರಧಾರೆ, ನಡೆನುಡಿಗಳನ್ನು ತಿಳಿದು ನಿರ್ಧರಿಸಬೇಕು.

ಅತಿಯಾದ ನಂಬಿಕೆ ಕೆಲವೊಮ್ಮೆ ಅತಿದೊಡ್ಡ ನೋವಿಗೆ ಕಾರಣವಾಗುತ್ತದೆ ಎನ್ನುವ ಮಾತು ವ್ಯರ್ಥವಲ್ಲ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ ಒಳ್ಳೆಯ ಹೃದಯ ಇರಬೇಕು; ಆದರೆ ದುರ್ಬಲ ಮನಸ್ಸು ಇರಬಾರದು.

ಒಳ್ಳೆಯತನವೆಂದರೆ ಎಲ್ಲರ ಮಾತಿಗೂ ತಲೆಬಾಗುವುದು ಅಲ್ಲ. ಪ್ರಾಮಾಣಿಕತೆ ಎಂದರೆ ಯಾರೇ ಬಂದರೂ ಕಣ್ಣುಮುಚ್ಚಿ ನಂಬುವುದು ಅಲ್ಲ.

**ಸಮಯ ಮತ್ತು ಸಂದರ್ಭ:** ಇವು ಅತಿ ಮುಖ್ಯ. ಒಳ್ಳೆಯ ಸಮಯದಲ್ಲಿ ಎಲ್ಲರೂ ಪ್ರಾಮಾಣಿಕರಂತೆ ಕಾಣುತ್ತಾರೆ; ಆದರೆ ಒತ್ತಡ ಮತ್ತು ಕಷ್ಟ ಬಂದಾಗ ಮನುಷ್ಯ ಬದಲಾಗುತ್ತಾನೆ. ಪರಿಸ್ಥಿತಿಯ ಒತ್ತಡ, ಸಂಕಟ, ಆರೋಗ್ಯ ಸಮಸ್ಯೆ ಮತ್ತು ಆರ್ಥಿಕ ದುಸ್ಥಿತಿಯಲ್ಲಿ ಮನುಷ್ಯನ ಸ್ವಭಾವ, ನಡವಳಿಕೆ ಬೇರೆ ಆಗಬಹುದು.

ಆ ಸಮಯದಲ್ಲಿ ಮನುಷ್ಯ ಹೆಚ್ಚು ಮೃದುವಾಗಿ, ನಯವಿನಯದಿಂದ ಇರಬಹುದು. ಪರಿಸ್ಥಿತಿಯ ಒತ್ತಡಕ್ಕೆ ಹೇಳಿದ ಎಲ್ಲವನ್ನೂ ಹೌದು ಎನ್ನಬಹುದು. ಆದರೆ ಅದೇ ಅವನ ಮೂಲ ಸ್ವಭಾವವಾಗಿರಬೇಕೆಂದಿಲ್ಲ.

ಕೆಲವರು ಹೇಳುತ್ತಾರೆ ಮೊದಲು ಇವರಿಗೆ ಊಟಕ್ಕೂ ಗತಿ ಇರಲಿಲ್ಲ; ಆಗ ನಾನೇ ಸಹಾಯ ಮಾಡಿದ್ದು. ಈಗ ನಮ್ಮ ಮುಂದೆ ಬೀಗುತ್ತಾರೆ! ಇದು ಸಣ್ಣ ಮನಸ್ಥಿತಿ. ಈಗ ಅವರ ಸಂದರ್ಭ ಚೆನ್ನಾಗಿದ್ದರೆ, ಚೆನ್ನಾಗಿ ಬದುಕುವುದು ಅವರ ಹಕ್ಕು. ಅಲ್ಲಿ ಅನಗತ್ಯ ಅಧಿಕಾರ ಸ್ಥಾಪನೆ ಮಾಡಬಾರದು.

ಬುದ್ಧನು ಹೇಳುತ್ತಾನೆ ಈ ಜಗತ್ತಿನಲ್ಲಿ ಶಾಶ್ವತವಾದುದು ಬದಲಾವಣೆ ಮಾತ್ರ. ಪರಿಸ್ಥಿತಿ ಬದಲಾಗಿದರೆ ಮನುಷ್ಯ ಬದಲಾಗುವುದು ಒಂದು ಸರ್ವಕಾಲಿಕ ಸತ್ಯ. ಅದನ್ನು ಒಪ್ಪಿಕೊಳ್ಳಬೇಕು.

**ಕೆಲಸದವರಲ್ಲಿ ಆದರ್ಶ ಹುಡುಕುವುದು:** ಇದು ಮಹಾ ಮೂರ್ಖತನ! ಮನೆ ಕೆಲಸಕ್ಕೆ ಅಥವಾ ಇತರ ಕೆಲಸಗಳಿಗೆ ಜನರನ್ನು ಇರಿಸಿಕೊಂಡಾಗ, ಅವರೊಂದಿಗೆ ದಯೆಯಿಂದ ವರ್ತಿಸುವುದು ನಮ್ಮ ವ್ಯಕ್ತಿತ್ವ. ಆದರೆ ಅವರು ಸಣ್ಣಪುಟ್ಟ ಮೋಸ ಮಾಡಿದಾಗ, ಹೆಚ್ಚು ದುಡ್ಡಿಗಾಗಿ ಬೇರೆ ಕಡೆ ಕೆಲಸಕ್ಕೆ ಹೋದಾಗ, ನಾನು ಮಾಡಿದ ಸಹಾಯ ಮರೆತರು ಎಂದು ಜಾಲಾಡುವುದು ಅಥವಾ ಹೀಯಾಳಿಸುವುದು ಹೀನಬುದ್ಧಿ.

ಅವರು ಯಾರೂ ಗೌತಮ ಬುದ್ಧರ ಅನುಯಾಯಿಗಳಲ್ಲ; ಸಾಮಾನ್ಯ ಮನುಷ್ಯರು. ಹಾಗಾಗಿ ಸಾಮಾನ್ಯವಾಗಿ ವರ್ತಿಸುವುದನ್ನು ಒಪ್ಪಿಕೊಳ್ಳಬೇಕು. ಎಲ್ಲರಲ್ಲೂ ಆದರ್ಶ ಹುಡುಕುವುದು ಸರಿಯಲ್ಲ; ಎಲ್ಲರೂ ವಿವೇಕಾನಂದರ ಶಿಷ್ಯರಲ್ಲ.

ಬಸವಣ್ಣನವರು ಹೇಳುತ್ತಾರೆ

ಮನದೊಳಗೊಂದು, ಬಾಯೊಳಗೊಂದು ಇರಬಾರದು.

ಆದರೆ ಬದುಕಿನ ವಾಸ್ತವದಲ್ಲಿ ಎಲ್ಲರೂ ಆ ಮಟ್ಟದ ನಿಷ್ಠೆಯಿಂದ ಬದುಕುವುದಿಲ್ಲ ಎಂಬ ಅರಿವೂ ನಮಗಿರಬೇಕು.

**ಸ್ನೇಹಿತರು ಮತ್ತು ನಂಬಿಕೆ:** ಸ್ನೇಹ ಎನ್ನುವುದು ಬದುಕಿನ ಬಹುಮೂಲ್ಯ ಆಸ್ತಿ. ಉತ್ತಮ ಸ್ನೇಹಿತರು ಜೀವನಪೂರ್ತಿ ಒಳ್ಳೆಯ ಸಂಗಾತಿಯಾಗಿ, ಸಲಹೆಗಾರರಾಗಿ, ಕಷ್ಟದಲ್ಲಿ ಬೆಂಬಲವಾಗಿ ನಿಲ್ಲುತ್ತಾರೆ. ನಾವು ಮಾಡಿದ ತಪ್ಪನ್ನು ಎದುರಲ್ಲೇ ಹೇಳಿ, ಹಿಂದಿನಿಂದ ನಮ್ಮ ಬೆಂಬಲವಾಗಿ ನಿಂತುಕೊಳ್ಳುತ್ತಾರೆ.

ನಿಜವಾದ ಸ್ನೇಹಿತರು ನಿಷ್ಠುರರಾಗಿದ್ದರೂ ನಾವು ದಾರಿ ತಪ್ಪದಂತೆ ಕಾಳಜಿ ವಹಿಸುತ್ತಾರೆ. ಸರಿತಪ್ಪುಗಳನ್ನು ನೇರವಾಗಿ ಹೇಳುತ್ತಾರೆ; ಬಣ್ಣದ ಮಾತುಗಳಿಗೆ ಅವಕಾಶ ಕೊಡುವುದಿಲ್ಲ.

ಚಾಣಕ್ಯ ಹೇಳಿದ್ದಾನೆ ಮುಖದಲ್ಲಿ ಸಿಹಿ ಮಾತು, ಮನದಲ್ಲಿ ವಿಷ ಇಟ್ಟುಕೊಂಡವರಿಂದ ದೂರವಿರು.

ಕೆಲವು ಸ್ನೇಹಿತರು ಕೆಟ್ಟ ಚಟಗಳಿಗೆ ಪ್ರೇರೇಪಿಸುತ್ತಾರೆ. ಮನೆಯ ಕಲಹಗಳನ್ನು ಹೇಳಿದಾಗ, ನಿನ್ನದೇ ಸರಿ, ಸೋಲಬೇಡ ಎಂದು ಭಂಡ ಧೈರ್ಯ ತುಂಬುತ್ತಾರೆ. ಮುಂದೆ ಹೊಗಳಿ, ಹಿಂದೆ ಚರಿತ್ರವಧೆ ಮಾಡುತ್ತಾರೆ. ಇಂತಹ ಸ್ನೇಹಿತರು ಮತ್ತು ಸಂಬಂಧಿಗಳಿಂದ ಯಾವಾಗಲೂ ಅಂತರವಿಡಬೇಕು.

ಕಷ್ಟದಲಿ ಗೆಳೆಯನ ಗುಣ ನೋಡು ಎಂಬಂತೆ, ಕಷ್ಟ ಬಂದಾಗಲೇ ನಿಜವಾದ ಆಪ್ತರು ಯಾರು ಎಂಬುದು ಗೊತ್ತಾಗುತ್ತದೆ.

**ಒಳ್ಳೆತನ ಮತ್ತು ಚಾತುರ್ಯ:** ಆದರೂ ಬದುಕು ಎಂಬುದು ಭಾವಬಂಡಿ. ಎಲ್ಲವನ್ನೂ ಅಳೆದು ತೂಗಿ ಮಾಡುವುದೇ ಜೀವನವಲ್ಲ. ಮನುಷ್ಯ ಸಂಘಜೀವಿ; ಸ್ನೇಹ, ವಿಶ್ವಾಸ ಮತ್ತು ಭಾವನೆಗಳ ಜಗತ್ತಿನ ಅನುರಾಗಿ. ಎಲ್ಲರನ್ನೂ ವಿರೋಧಿಸುತ್ತಲೇ ಬದುಕುವುದು ಅಸಾಧ್ಯ.

ಹುಲಿ ನಮ್ಮನ್ನು ತಿನ್ನಬಾರದು ಎಂದರೆ, ನಾವು ಹುಲಿಯನ್ನು ತಿನ್ನುವುದಿಲ್ಲ ಎಂಬುದು ನ್ಯಾಯವಲ್ಲ. ಆದರೆ ಹುಲಿಗೆ ಆಹಾರವಾಗದಂತೆ, ಅದು ದಾಳಿ ಮಾಡಿದರೆ ಎದುರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು.

ಮನದ ಮಾತು...

ಹಾಗೆಯೇ, ನಾವು ಒಳ್ಳೆಯವರಾಗಿದ್ದರೂ ಇನ್ನೊಬ್ಬರು ನಮ್ಮನ್ನು ಮೋಸಮಾಡದಂತೆ ಚತುರರಾಗಿರಬೇಕು.

ಶ್ರೀಕೃಷ್ಣನು ಮಹಾಭಾರತದಲ್ಲಿ ಧರ್ಮವನ್ನು ಕಾಪಾಡಲು ಬುದ್ಧಿಯನ್ನೂ ಬಳಸಿದ್ದಾನೆ. ಕೇವಲ ಒಳ್ಳೆಯ ಮನಸ್ಸಿನಿಂದ ಮಾತ್ರ ಬದುಕು ಸಾಗುವುದಿಲ್ಲ; ವಿವೇಕವೂ ಬೇಕು.


ದೇವರು ಒಳ್ಳೆಯವರಾಗಿರಿ, ಪ್ರಾಮಾಣಿಕರಾಗಿರಿ ಎಂದು ಹೇಳಿದ್ದಾನೆ ಹೊರತು ಮೂರ್ಖರಾಗಿ ಮೋಸಹೋಗಿ ಎಂದು ಹೇಳಿಲ್ಲ.

ಹಲವಾರು ಬಾರಿ ನಾವು ಮೋಸ ಹೋಗುವುದಕ್ಕೆ ಕಾರಣ ನಮ್ಮ ಒಳ್ಳೆತನವಲ್ಲ; ನಮ್ಮ ಅತಿನಂಬಿಕೆ ಮತ್ತು ಅಜಾಗರೂಕತೆ.

ಸಂಬಂಧಗಳು ಮತ್ತು ವ್ಯವಹಾರ

ವ್ಯಕ್ತಿಗಳ ಗುಣಸ್ವಭಾವ ಗುರುತಿಸಬೇಕು. ಬಣ್ಣದ ಮಾತಿಗೆ ಬಲಿಯಾಗಿ ಅತಿನಂಬಿಕೆ ಇಡಬಾರದು. ಸ್ನೇಹ ಅಥವಾ ಸಂಬಂಧ ಎಷ್ಟೇ ಗಾಢವಾಗಿದ್ದರೂ, ವ್ಯವಹಾರ ಮಾಡುವಾಗ ಕಾನೂನುಬದ್ಧ ಮತ್ತು ನಿಯಮಬದ್ಧವಾಗಿರಬೇಕು.

ಕರಾರುಗಳು, ತಕರಾರುಗಳು ಇವುಗಳನ್ನು ಮುಕ್ತವಾಗಿ ಮತ್ತು



ನೇರವಾಗಿ ಹೇಳಬೇಕು. ಏನು ಅಂದುಕೊಳ್ಳುತ್ತಾರೆ ಎಂಬ ಒಳಮಡಿಕೆಯ ಭಯದಿಂದ ಅನೇಕ ಸಂಬಂಧಗಳು ಕಡಿಯುತ್ತವೆ.

ದುಡ್ಡು ಮತ್ತು ಮರ್ಯಾದೆಯ ಪ್ರಶ್ನೆ ಬಂದಾಗ, ಗೌರವ ಕೊಡುವುದನ್ನೂ ಪಡೆಯುವುದನ್ನೂ ಕಲಿಯಬೇಕು. ಡಾ. ಬಿ.ಆರ್. ಅಂಬೇಡ್ಕರ್ ಹೇಳಿದ್ದಾರೆ ಸ್ವಾಭಿಮಾನ ಕಳೆದುಕೊಂಡ ಮನುಷ್ಯ ಬದುಕಿದ್ದರೂ ಸತ್ತವನಂತೆ.

**ಮಾತಿನ ಮಿತಿ**

ಎಷ್ಟೇ ಆತ್ಮೀಯ ಸ್ನೇಹಿತನಾಗಿದ್ದರೂ, ಅತಿಯಾಗಿ ವೈಯಕ್ತಿಕ ವಿಷಯಗಳಲ್ಲಿ ತಲೆಹಾಕುವುದು, ಖಾಸಗಿ ಮಾತುಗಳನ್ನು ಸಾರ್ವಜನಿಕವಾಗಿ ಹೇಳುವುದು, ಅಪಹಾಸ್ಯ ಮಾಡುವುದು ಇವು ಮನಸ್ಸಿಗೆ ಆಳವಾದ ನೋವು ಕೊಡುತ್ತವೆ.

ಯಾರ ವೈಯಕ್ತಿಕ ವಿಷಯಗಳನ್ನೂ ಕೆದಕಬಾರದು. ಇನ್ನೊಬ್ಬರ ಬಗ್ಗೆ ಕೆಟ್ಟದಾಗಿ ಮಾತನಾಡುವುದು ನಮ್ಮ ವ್ಯಕ್ತಿತ್ವವನ್ನೇ ಕೆಳಗೆ ಇಳಿಸುತ್ತದೆ.

ತಾಯಿ ತೆರೇಸಾ ಹೇಳುತ್ತಾರೆ

ಜನರನ್ನು ತೀರ್ಪು ಮಾಡುತ್ತ ಕುಳಿತರೆ, ಅವರನ್ನು ಪ್ರೀತಿಸಲು ಸಮಯ ಸಿಗುವುದಿಲ್ಲ.

**ಏಕಾಂತ ಮತ್ತು ಆತ್ಮಾವಲೋಕನ**

ಯಾರನ್ನಾದರೂ ನಂಬಬೇಕಾದರೆ, ಸಮಯ ತೆಗೆದುಕೊಂಡು ಅವರೊಂದಿಗೆ ಒಡನಾಡಿ, ಅರ್ಥ ಮಾಡಿಕೊಂಡು ನಂತರ ನಂಬಿ. ಕೆಲವೊಮ್ಮೆ ಏಕಾಂಗಿಯಾಗಿರುವುದನ್ನೂ ಕಲಿಯಬೇಕು. ನಮಗೆ ನಾವೇ ಉತ್ತಮ ಸ್ನೇಹಿತರು.

ಏಕಾಂತದಲ್ಲಿ ನಾವು ಮಾಡಿದ ಕೆಲಸ, ಯೋಚಿಸಿದ ರೀತಿಗಳನ್ನು ಅವಲೋಕಿಸಿದಾಗ ಸರಿ–ತಪ್ಪುಗಳು ಸ್ಪಷ್ಟವಾಗುತ್ತವೆ.

ರಮಣ ಮಹರ್ಷಿಗಳು ಹೇಳುತ್ತಾರೆ

ಹೊರಜಗತ್ತನ್ನು ಅರಿಯುವ ಮುಂಚೆ, ನಿನ್ನನ್ನೇ ಅರಿತುಕೋ.

**ಉಪಕಾರ ಮತ್ತು ಗೌರವ**

ಯಾರಿಗಾದರೂ ಸಹಾಯ ಮಾಡಿದರೆ, ಅದನ್ನು ಮರೆತುಬಿಡಿ. ಅದರ ಋಣಭಾರವನ್ನು ಹೊತ್ತುಕೊಂಡು ಸದಾ ಅವರಿಗೆ ನೆನಪಿಸುತ್ತಿರಬೇಡಿ.

ಉಪಕಾರ ಮಾಡಿ ಅವಮಾನಿಸುವುದು, ಕೊಟ್ಟು ಕೀಳಾಗಿ ಮಾತನಾಡುವುದು ಇವು ಸಹಾಯವಲ್ಲ; ಅಹಂಕಾರ.

ಬಲಗೈ ಕೊಟ್ಟದ್ದು ಎಡಗೈಗೆ ಗೊತ್ತಾಗಬಾರದು ಎಂಬ ಮಾತು ಸೇವೆಯ ನಿಜಸ್ವರೂಪ ಹೇಳುತ್ತದೆ.

ಹೊಗಳಿಕೆ ಮತ್ತು ನಿಜವಾದ ಮೌಲ್ಯ

ಬಣ್ಣದ ಮಾತಿಗೆ ನಗುವ ಸ್ನೇಹಿತರು, ಸದಾ ಹೊಗಳುವವರು ಮೊದಲಿಗೆ ಖುಷಿ ಕೊಡಬಹುದು; ಆದರೆ ಅವರು ತಾತ್ಕಾಲಿಕರು.

ಒಂದು ಮರ ಸಮೃದ್ಧವಾಗಿ ಎಲೆ–ಕೊಂಬೆಗಳನ್ನು ಬಿಟ್ಟಾಗ ಹೂವು ಅರಳುತ್ತದೆ; ಆದರೆ ಅದು ಒಂದೇ ದಿನ. ಹಾಗೆಯೇ ಪರಿಶ್ರಮವಿಲ್ಲದೆ ಬಂದ ಹೊಗಳಿಕೆಗೆ ಉಬ್ಬಿ ಹೋಗಬಾರದು.

ಕುವೆಂಪು ಅವರು ಹೇಳುತ್ತಾರೆ

ಮಾನವತ್ವವೇ ದೊಡ್ಡ ಧರ್ಮ.

ಆದರೆ ಮಾನವತ್ವದ ಜೊತೆಗೆ ವಿವೇಕವೂ ಬೇಕು.

**ಅಂತಿಮ ಮಾತು**

ನಂಬಿಕೆ ಅನ್ನುವುದು ಬಂಗಾರದಂತೆ. ಎಲ್ಲಾ ಕಲ್ಲುಗಳಲ್ಲಿ ಬಂಗಾರ ಇರುವುದಿಲ್ಲ; ಆದರೆ ಬಂಗಾರ ಇರುವುದು ಕಲ್ಲಿನಲ್ಲೇ. ಹಾಗೆಯೇ ಎಲ್ಲಾ ಮನುಷ್ಯರು ನಂಬಿಕೆಗೆ ಯೋಗ್ಯರಲ್ಲ; ಆದರೂ ಮನುಷ್ಯನಿಗೆ ನಿಜವಾದ ಸ್ನೇಹಿತರು ಮನುಷ್ಯರಲ್ಲಿಯೇ ಸಿಗುತ್ತಾರೆ.

ಹೀಗಾಗಿ ನಂಬಿಗಸ್ತರು ದೊರೆಯುವವರೆಗೆ ತಾಳ್ಮೆಯಿಂದ ಕಾಯಿರಿ.

ಮನುಷ್ಯನ ಸ್ಥಾನಮಾನ, ಆಸ್ತಿ, ಸಂದರ್ಭ ಬದಲಾಗಿದಂತೆ ಸ್ವಭಾವವೂ ಬದಲಾಗುತ್ತದೆ. ಬದಲಾವಣೆ ಜಗದ ನಿಯಮ. ಅದನ್ನು ಸುಲಭವಾಗಿ ಒಪ್ಪಿಕೊಳ್ಳಿ. ಬದಲಾದವರನ್ನು ಪದೇಪದೇ ಹೀಯಾಳಿಸುವುದು, ತೇಜೋವಧೆ ಮಾಡುವುದು ಸರಿಯಲ್ಲ.

ಒಳ್ಳೆಯವರಾಗಿರಿ. ಪ್ರಾಮಾಣಿಕರಾಗಿರಿ. ನಾವು ಒಳ್ಳೆಯತನದಲ್ಲಿ ಇರುವುದೇ ಯಾರಿಗಾದರೂ ಮಾಡುವ ಉಪಕಾರವಲ್ಲ; ಅದು ನಮ್ಮ ಗುಣಸ್ವಭಾವವಾಗಿರಬೇಕು.

ಆದರೆ ಮೂರ್ಖತನದಿಂದ, ಅತಿನಂಬಿಕೆಯಿಂದ ಇಕ್ಕಟ್ಟಿಗೆ ಸಿಲುಕಬಾರದು.

ಯಾವುದೇ ಕೆಲಸ ಮಾಡುವಾಗ, ಯಾವುದೇ ಮಾತು ಆಡುತ್ತಿರುವಾಗ ಒಂದು ಬಿಟ್ಟು ಎರಡು ಬಾರಿ ಯೋಚಿಸಿ ಮಾಡಿ. ಕೆಲವರು ಮಕ್ಕಳಿಗೆ ಹೇಗೆ ಚಾಲಾಕಿ ಆಗಿ ಇರಬೇಕು ಎಂದು ಹೇಳುತ್ತಾರೆ, ಆದರೆ ಇದು ತಪ್ಪು!! ಅವರ ಮುಗ್ಧತೆಯನು ಕಸಿಯಬೇಡಿ...

ಕುದರೆ ರೇಸು ಗೆಲ್ಲಬೇಕು ನಮ್ಮ ಕುದುರೆಯನು ಓಡಿಸಿ ವಿನಃ ಇನ್ನೊಬ್ಬರ ಕುದುರೆ ಕಾಲು ಕತ್ತರಿಸಿ ಗೆಲ್ಲಬಾರದು. ಮಕ್ಕಳಿಗೆ ಗಟ್ಟಿತನ ಕಲಿಸಿಕೊಡಿ ವಿನಃ ವಂಚನೆಯನಲ್ಲ!

ಆಗ ಮೋಸಹೋಗುವುದನ್ನು ಖಂಡಿತ ತಪ್ಪಿಸಬಹುದು.

ಪ್ರಾಮಾಣಿಕತೆ ತಪ್ಪಲ್ಲ.

ಆದರೆ ಪೆದ್ದುತನ ಮತ್ತು ಮೂರ್ಖತನ ಅಪಾಯಕಾರಿಯೇ ಸರಿ.

**ಮತ್ತೊಂದು ಮನದ ಮಾತು ಮುಂದಿನ ವಾರ....**

# ಉಪ್ಪಿಟ್ಟು ಯಾರಿಗೆ ಫೇವರೆಟ್ಟು



ಸ್ನೇಹಾ ಆನಂದ್

ಯಾವುದೇ ತಿಂಡಿ ಮಾಡಲು ತೋಚದೇ ಇದ್ದಾಗ ಉಪ್ಪಿಟ್ಟು ಮಾಡ್ಲಾ ಅಂದ್ರೆ ಸಾಕು ನಮ್ಮಮ್ಮಂಗೆ ಅಡುಗೆಯ ರುಚಿಯೇ ಗೊತ್ತಿಲ್ಲ ಅನ್ನುವ ಮಕ್ಕಳು ಇದ್ದಾರೆ ಅಲ್ವಾ!

ಒಂದು ನಿಜ ಹೇಳ್ಲಾ ಯಾರಿಗೆ ಉಪ್ಪಿಟ್ಟು ರುಚಿಯಾಗಿ ಮಾಡಲು ಬರುತ್ತೆ ಅವರು ಯಾವ ಅಡುಗೆ ಮಾಡಿದ್ರೂ ರುಚಿಯಾಗಿರುತ್ತೆ ಕಣ್ರಿ!

ಉದಾಹರಣೆಗೆ ಒಂದು ಅಗಳು ಅನ್ನ ಬೆಂದಿದ್ದು ನೋಡಿ ಅನ್ನ ಸರಿಯಾಗಿದೆ ಎಂದು ಹೇಳುತ್ತೇವೆ ಅಲ್ವಾ ಹಾಗೆಯೇ ಇದು ಕೂಡ ಉಪ್ಪಿಟ್ಟಿನ ರುಚಿ ನೋಡಿ ಅವರ ಕೈ ರುಚಿ ಕಂಡು ಹಿಡಿಯಬಹುದು!

ಉಪ್ಪಿಟ್ಟು ಮಾಡುವುದು ತುಂಬಾ ಸುಲಭ ಹಾಗು ಸರಳ ಆದರೆ ರುಚಿಯಾಗಿ ಮಾಡುವುದು ಇದೆಯಲ್ಲ ಅಷ್ಟು ಸುಲಭವಲ್ಲ!

ಏಕೆಂದರೆ ಉಪ್ಪಿಟ್ಟು ಹದವಾಗಿ ಬೇಯಿಸಬೇಕು, ಬೆಂದ ಮೇಲೆ ರವೆಯು ಹಗುರವಾಗಿದೆ ಅನಿಸಬೇಕು ಅದಕ್ಕೆ ಬೇಕಾದ ಪ್ರತಿಯೊಂದು ಸಾಮಗ್ರಿಗಳನ್ನು ಹಾಕಬೇಕು, ಉಪ್ಪಿಟ್ಟನ್ನು ಆಸಕ್ತಿಯಿಂದ ಮಾಡದಿದ್ದರೆ ಈ ಹದ ಬರುವುದಿಲ್ಲ, ನೀರು,ನೀರಾಗಿ, ಮದ್ದೆಯಂತೆ, ಇಲ್ಲಾ ತುಂಬಾ ಉದುರು ಉದುರಾಗಿ ಬಿಕ್ಕಳಿಕೆ ಬರುವಂತೆ ಆಗುವುದುಂಟು !

ಸ್ವಲ್ಪವೇ ಉಪ್ಪಿಟ್ಟು ನಾವು ಮಾಡಿದರೆ ತುಂಬಾ ರುಚಿಯಾಗುತ್ತದೆ, ಅದಕ್ಕೆ ತಕ್ಕಂತೆ ಎಲ್ಲವನ್ನೂ ಹಾಕುತ್ತೇವೆ, ಜಾಸ್ತಿ ಕ್ವಾಂಟಿಟಿಯಲ್ಲಿಮಾಡಿದಾಗ ರವೆಯೇ ಜಾಸ್ತಿಯಾಗಿ ಉಪ್ಪಿಟ್ಟು ತಿಂದರೆ ಸಿಮೆಂಟ್ ಎಂದು ಹೇಳಿ ಹಾಸ್ಯ ಮಾಡುತ್ತಾರಲ್ಲ ಹಾಗಾಗುತ್ತದೆ, ಹೀಗಾಗಿ ಆ ಸಮಯದಲ್ಲಿ ಜಾಗ್ರತೆಯಿಂದ ಸರಿಯಾದ ಹದದಲ್ಲಿ ಪದಾರ್ಥಗಳನ್ನು ಹಾಕಬೇಕು!

ಇನ್ನು ಉಪ್ಪಿಟ್ಟು ನಾಲ್ಕು ವಿಧದಲ್ಲಿ ಮಾಡಬಹುದು!

**ಮೊದಲ ರೀತಿ:** ರವೆ, ಹಸಿಮೆಣಸಿನಕಾಯಿ, ಈರುಳ್ಳಿ ಕೊತ್ತಂಬರಿ, ಹಸಿಶುಂಠಿ, ನಿಂಬೆರಸ ಇಷ್ಟೇ ಹಾಕಿ ತುಂಬಾ ರುಚಿಯಾಗಿ "ಆಹಾ" ಎನ್ನುವಂತೆ ಮಾಡಬಹುದು, ಆದರೆ ಒಂದೇ ತರಕಾರಿ ಇರುವುದರಿಂದ ಅದನ್ನೇ ಜಾಸ್ತಿ ಹಾಕಿ ಮಾಡಿದರೆ ರುಚಿ ಇಲ್ಲದಿದ್ದರೆ ಸಿಮೆಂಟೇ

**ಎರಡನೇ ರೀತಿ:** ಎಲ್ಲಾ ತರಕಾರಿ ಅಂದರೆ



ಈರುಳ್ಳಿ,ಆಲೂಗಡ್ಡೆ, ಬಟಾಣಿ, ಹಸಿ ಮೆಣಸು, ಕ್ಯಾರೆಟ್, ಹಸಿಶುಂಠಿ, ಬೀನ್ಸ್ ,ಹೂಕೋಸು ಹೀಗೆ ನಿಮಗೆ ಬೇಕಾದ ತರಕಾರಿಗಳನ್ನು ದಂಡಿಯಾಗಿ ಹಾಕಿ ನಿಂಬೆ ರಸ ಹಾಗು ಸಣ್ಣಗೆ ಹೆಚ್ಚಿದ ಕೊತ್ತಂಬರಿ ಉದುರುಸುವುದು!ಇದರ ರುಚಿಯೂ ಅದ್ಭುತವೇ, ಏಕೆಂದರೆ ತರಕಾರಿಗಳ ಸುರಿಮಳೆ ಇರುತ್ತದಲ್ವಾ!

ಸ್ನೇಹ ಲೋಕ

**ಮೂರನೆಯ ರೀತಿ;**

ಇದು ತುಂಬಾ ಸರಳ ಅಷ್ಟೇ ರುಚಿ ಕೂಡ, ಆದರೆ ಅತಿ ಹೆಚ್ಚಿನ ಆಸಕ್ತಿ ವಹಿಸಿ ಮಾಡಬೇಕು ಏಕೆಂದರೆ ಇದರಲ್ಲಿ ತರಕಾರಿ ಯಾವುದೂ ಇರುವುದಿಲ್ಲ ಬರೀ ಹಸಿಮೆಣಸಿನಕಾಯಿ, ಕಾಯಿತುರಿ , ಕೊತ್ತಂಬರಿ, ಹಸಿಶುಂಠಿ, ನಿಂಬೆಹಣ್ಣು ಇಷ್ಟೇ! ಆದರೆ ಇಲ್ಲಿ ಕಾಯಿತುರಿ, ಕೊತ್ತಂಬರಿ ತುಂಬಾ ಅಂದ್ರೆ ತುಂಬಾ ಇದ್ದರೆ ರುಚಿ, ಉದಾಹರಣೆಗೆ ಒಂದು ಕಪ್ ರವೆಗೆ ಅರ್ಧ ಹೋಳು ತೆಂಗಿನತುರಿ ಬೇಕು, ಜಾಸ್ತಿ ಹಸಿರಾಗಿ ಕಾಣಿಸಲು ಸಣ್ಣಗೆ ಹೆಚ್ಚಿದ ಕೊತ್ತಂಬರಿ, ಈ ಉಪ್ಪಿಟ್ಟಿಗೆ ನಿಂಬೆ ರಸದ ಹುಳಿಯೂ ಜಾಸ್ತಿ ಇರಬೇಕು ಹೀಗಾಗಿ ಒಂದು ಚಮಚ ಸಕ್ಕರೆ ಉದುರಿಸಿದರೆ ರುಚಿ ದುಪ್ಪಟ್ಟಾಗುತ್ತದೆ!

**ಸಕ್ಕರೆ ಹಾಕುವುದು ಆಪ್ಷನ್ ಅಷ್ಟೇ ನಿಮ್ಮ ರುಚಿಗೆ ಬಿಟ್ಟಿದ್ದು!**

**ನಾಲ್ಕನೇದು:** ಉಪ್ಪಿಟ್ಟಿಗೆ ಎಲ್ಲಾ ರೀತಿಯ ತರಕಾರಿ ಹಾಕಿ ಜೊತೆಗೆ ಸ್ವಲ್ಪ ಮಸಾಲೆಯನ್ನು ಹಾಕುತ್ತಾರೆ,

ಅದಕ್ಕೆ ಬಾತ್ ಎಂದು ಹೆಸರು , ಇದು ಒಂದು ರೀತಿಯ ರುಚಿಯೇ, ಅಡುಗೆ ಭಟ್ಟರು ಮದುವೆ ಮನೆಯಲ್ಲಿ ಇದನ್ನು ಜಾಸ್ತಿ ಮಾಡುತ್ತಾರೆ,

ಆದರೆ ಸಾಂಪ್ರದಾಯಿಕ ಉಪ್ಪಿಟ್ಟಿಗೆ ಮಸಾಲೆ ಹಾಕದೆ ಮಾಡುವುದು ಸರಿ, ಒಟ್ಟಿನಲ್ಲಿ ನಾಲಿಗೆಗೆ ರುಚಿ ಸಿಗುವ ರೀತಿಯಲ್ಲಿ ನಾವು ಉಪ್ಪಿಟ್ಟು ತಯಾರಿಸಬೇಕು ಅಷ್ಟೇ!

ಆದರೆ ಒಂದೇ ಒಂದು ಟಿಪ್ಸ್ ಹೇಳ್ತೀನಿ, ನಿಜ ಹೇಳಬೇಕೆಂದರೆ ನೀವೆಲ್ಲ ಅಡುಗೆಯಲ್ಲಿ ಪರಿಣಿತರೇ ಹಾಗು ಅನ್ನಪೂರ್ಣೆಯರೇ ಸರಿ ಆದರೆ ನಾನು ಇಷ್ಟೆಲ್ಲಾ ಬರೆದು ಮೇಲೆ ಗೊತ್ತಿದ್ದ ಒಂದು ಟಿಪ್ಸ್ ಅಷ್ಟೇ ಇಲ್ಲಿ ಹೇಳ್ತೀನಿ!

ಉಪ್ಪಿಟ್ಟಿಗೆ ಎಣ್ಣೆ ಅತಿಯಾಗಬಾರದು, ಹಾಗಂತ ಕಡಿಮೆಯೂ ಆಗಬಾರದು, ನಾವು ಎಷ್ಟೇ ತರಕಾರಿ ಹಾಕಿ ಮಾಡಿರಲಿ ಉಪ್ಪು ಸ್ವಲ್ಪ ಕಡಿಮೆ, ಸ್ವಲ್ಪ ಜಾಸ್ತಿ ಆದರೂ ರುಚಿ ಕೈ ಕೊಡುತ್ತದೆ, ಹೀಗಾಗಿ ಅದರ ಬಗ್ಗೆ ಜಾಗೃತ ವಹಿಸಿ ತಯಾರಿಸಬೇಕು! ಬಿಸಿ, ಬಿಸಿ ಇದ್ದಾಗಲೇ ಸರ್ವ್ ಮಾಡಿದರೆ ಅತಿಥಿಗಳಿಗೆ ಖುಷಿ ಹಾಗು ನಮ್ಮ ಮನಸ್ಸಿಗೂ ಸಂತೃಪ್ತಿ!

ಇನ್ನು ಉಪ್ಪಿಟ್ಟು ಪೂರ್ತಿಯಾಗಿ ಸಿದ್ಧವಾದ ಮೇಲೆ ಒಂದು ದೊಡ್ಡ ಚಮಚ ತುಪ್ಪ ಹಾಕಿ ಕೈಯಾಡಿಸಿ ಮುಚ್ಚಿಟ್ಟು ಬಿಡಬೇಕು, ಇದರಿಂದ ತುಪ್ಪದ ಘಮ ಉಪ್ಪಿಟ್ಟಿನಲ್ಲಿ ಹಾಗೆಯೇ ಉಳಿದು ಒಂದು ರೀತಿಯ ವಿಶೇಷ ರುಚಿಯನ್ನು ಕೊಡುತ್ತದೆ! ಹಗುರವಾದ, ಹಿತವಾದ ಇಂತಹ ಬಿಸಿ ಬಿಸಿಯಾದ ಉಪ್ಪಿಟ್ಟು ಮಳೆಗಾಲ, ಚಳಿಗಾಲದಲ್ಲಿ ಗಂಟಲಲ್ಲಿ ಇಳಿದರೆ ಅಮೃತದ ಸಮಾನವೇ ಸರಿ!

# ಜನನಿಯೇ ಮಗುವಿಗೆ ಮಾರ್ಗದರ್ಶಿ



ಗಿರಿಜಾ.ಎಸ್. ದೇಶಪಾಂಡೆ.
ಬೆಂಗಳೂರು.

"ಮನೆಯೇ ಮೊದಲ ಪಾಠಶಾಲೆ ,ಜನನಿ ತಾನೆ ಮೊದಲ ಗುರುವು". ಮಗುವೊಂದು ಪ್ರಪಂಚಕ್ಕೆ ಆಗಮಿಸಿದಾಗ ಅದರ ಲಾಲನೆ ಪಾಲನೆಯ ಜವಾಬ್ದಾರಿ ಪ್ರಕೃತಿದತ್ತವಾಗಿ ತಾಯಿಗೇ ಸೇರುತ್ತದೆ.ಮಗುವಿನ ಶಾರೀರಿಕ ಬೆಳವಣಿಗೆ ತುತ್ತು ಮಾಡಿ ಊಟಮಾಡಿಸುವ ತಾಯಿ ,ಮಗುವಿನ ಮಾನಸಿಕ ಬೆಳವಣಿಗೆಗೆ ತನ್ನ ಮಾತು ಮತ್ತು ಹಾವಭಾವಗಳ ಮುಖಾಂತರ ಜಗದ ಅರಿವು ಮೂಡಿಸಲು ಪ್ರಕೃತಿಯ ಸೊಬಗು ಹಾಗೂ ಋುಉತುಮಾನಗಳ ಪರಿಚಯ ಮಾಡಿಸುತ್ತ ಸಾಗುತ್ತಾಳೆ.ಜೀವಜಗತ್ತಿನಲ್ಲಿ ಅತ್ಯಂತ ಪ್ರೀತ್ಯಾದರಗಳ ಅಗ್ರಸ್ಥಾನದಲ್ಲಿರುವ ತಾಯಿ ಮಗುವಿಗೆ ನೀಡುವ ತರಬೇತಿ ಅತ್ಯಮೂಲ್ಯವಾದುದು.ನವರಸಗಳಲ್ಲಿ ವಿಶೇಷ ಸ್ಥಾನ ಪಡೆದಿರುವ ವಾತ್ಸಲ್ಯ ರಸ ಕೇವಲ ತಾಯಿ ಹಾಗೂ ಮಗುವಿಗೆ ಸೀಮಿತ.ಈ ರಸದೌತಣ ಮುಖೇನ ಅಸಾಧ್ಯವಾದುದನ್ನು ಸಾಧ್ಯಮಾಡುವ ಅತ್ಯದ್ಭುತ ಶಕ್ತಿ ಮಾತ್ರ ವಾತ್ಸಲ್ಯಕ್ಕಿದೆ.ಭಾವೀ ಭವಿಷ್ಯತ್ತಿನ ನಾಗರಿಕನಾಗಿ ರೂಪುಗೊಳ್ಳುವ ಮಗುವು ತಾಯಿಯ ಮಡಿಲಿನಿಂದ ತನ್ನ ತಾಲೀಮು ಆರಂಭಿಸುತ್ತದೆ.ಕಟ್ಟಡಕ್ಕೆ ಅಡಿಪಾಯ ಹೇಗೆ ಪ್ರಮುಖವೋ ಹಾಗೆಯೇ ಪ್ರತಿಯೊಬ್ಬ ಮನುಷ್ಯನಿಗೆ ಬಾಲ್ಯವು ಅಷ್ಟೇ ಪ್ರಮುಖವಾದುದು.ಈ ಅಡಿಪಾಯವೇ ಸಂಸ್ಕಾರ ಎಂದು ಕರೆಸಿಕೊಳ್ಳುತ್ತದೆ.ಹುಟ್ಟಿನಿಂದ ಏನನ್ನು ಬರೆಯದ ಕರಿಹಲಗೆಯಂತಹ ಮನಃಪಟಲದಲ್ಲಿ ತಾಯಿಯ ಮುಖಾಂತರ ಸೂಕ್ಷ್ಮವಾದ ಬರಹ ಬರೆಯುತ್ತ ಸಾಗುತ್ತದೆ.ಪ್ರಥಮ ಶಿಕ್ಷಕಿಯ ಸ್ಥಾನದಲ್ಲಿರುವ ತಾಯಿ ಸತ್ಯ,ಧರ್ಮ,ಪರೋಪಕಾರ ,ಸಹಿಷ್ಣುತೆ,ಶಿಸ್ತು,ಹಾಗೂ ಸಂಯಮಗಳ ಬೀಜಗಳನ್ನು ಬಿತ್ತುತ್ತ ಸಾಗುವ ಕೃಷಿಕಳು.ಸಕಾರಾತ್ಮಕ ಭಾವನೆಯನ್ನು ಬೆಳೆಸುತ್ತ ನಕಾರಾತ್ಮಕ ಕಳೆಗಳನ್ನು ಕಿತ್ತೊಗೆಯುವ ಸಾಹಸ ಕಾರ್ಯ ತಾಯಿಯಿಂದ ಆಗಬೇಕು.

ಜಗತ್ತಿಗೆ ಆಗಮಿಸಿದ ಹೊಸ ಅತಿಥಿ ವೈವಿಧ್ಯಮಯ ಸೌಂದರ್ಯಹೊಂದಿದ ಪ್ರಕೃತಿಯನ್ನು ನೋಡಿ ಕುತೂಹಲದಿಂದ ನೋಡುತ್ತ ಸಾಗುವ ಮಗುವಿಗೆ ತಾಯಿ ಮಾರ್ಗದರ್ಶಿ,ನೋಡುತ್ತ ಆಡುತ್ತ ತಾಯಿಯ ಬೆರಳ ತುದಿ ಹಿಡಿದು ಹೆಜ್ಜೆಯಿಡುತ್ತ ಸಾಗುವ ಮಗುವಿಗೆ ಎಲ್ಲದೂ ಹೊಸತು ,ಎಲ್ಲರೂ ಹೊಸಬರು,ಪ್ರಪಂಚದ ಚರಾಚರಗಳನ್ನು ನೋಡಿ ವಿಸ್ಮಯ ಹಾಗೂ ಕುತೂಹಲದಿಂದ ಬರಗುಕಣ್ಣಿನಿಂದ





ನೋಡುತ್ತದೆ.ಬೆಳವಣಿಗೆಯ ಹಂತದಲ್ಲಿ ಮಗುವಿನ ಸಹಾಯಕ್ಕೆ ಬರುವ ತೊದಲ್ನುಡಿಯು ತಾಯಿ ಹಾಗೂ ಮಗುವಿನ ಬಗ್ಗೆ ಸಂಪರ್ಕದ ಕೊಂಡಿಯಾಗಿ ಕೆಲಸಮಾಡುತ್ತದೆ.ಮೊದಲ ಪಾಠಶಾಲೆಯಾದ ಮನೆಯಲ್ಲಿ ಮೊದಲ ಗುರುವಾದ ತಾಯಿ ಮಗುವಿಗೆ ಆದರ್ಶ ಗುರುವಾಗಬೇಕು.ಸತ್ಯ ಪಥದಲ್ಲಿ ಸಾಗುವದಕ್ಕೆ ಪ್ರೇರಣೆ ನೀಡುವ ,ಸ್ನೇಹಜೀವಿ,ವೈಜ್ಞಾನಿಕ ಚಿಂತನೆಯ ಹರಿಕಾರ ,ಸಕಾರಾತ್ಮಕ ಭಾವನೆಗಳಿಗೆ ಒತ್ತುಕೊಡುವ ,ಕಂದಾಚಾರ ಹಾಗೂ ಮೂಢನಂಬಿಕೆಗಳಿಂದ ದೂರವಿರುವದರ ಜೊತೆಗೆ ಮುಂದೊಮ್ಮೆ ನಾಡಿನ ನಾಗರಿಕನಾಗಲು ರೂಪುಗೊಳ್ಳುತ್ತಿರುವ ಹಸುಳೆಗೆ ದೇಶಪ್ರೇಮದ ಭಾವನೆ ಮೂಡಲು ಪರೋಕ್ಷವಾಗಿ ಚೇತನದ ಚಿಲುಮೆಯಾಗಿರಬೇಕು.ಶಾಂತತೆ ,ಸಹಿಷ್ಣುತೆ ,ಸಹಕಾರ ಹಾಗೂ ಪರೋಪಕಾರಿ ಸದ್ಗುಣಗಳಿಂದ ಕೂಡಿದ ಜನಪ್ರೀಯ ವ್ಯಕ್ತಿಯಾಗಿ ಮಗುವು ರೂಪುಗೊಳ್ಳಬೇಕು ತನ್ನ ಮಗುವು ಎನ್ನುವದಾದರೆ ತಾಯಿಯು ತಪ್ಪಿಯೂ ಅನಾಗರಿಕಳಾಗಿ ವರ್ತಿಸಬಾರದು .ಮಗುವಿನ ಬೇಡಿಕೆಗೆ ಅನುಗುಣವಾಗಿ ಮೃದು ಧೋರಣೆಯಿಂದ ನಗುಮೊಗದಿಂದಲೇ ಪರಿಹಾರ ಕಂಡುಕೊಳ್ಳಬೇಕು.ಮಗುವಿನ ಬೇಡಿಕೆ ಅದರ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಮಾರಕವಾಗಿದ್ದರೆ ,ಅದರಿಂದಾಗುವ ದುಷ್ಪರಿಣಾಮದ ಕುರಿತು ತಿಳಿ ಹೇಳಿದಾಗ ಮಗುವು ತನ್ನ ತಪ್ಪಿನ ಅರಿವಾಗಿ ಬೇಡಿಕೆಯನ್ನು ಕೈಬಿಡುತ್ತದೆ.ಸತ್ಯ,ಧರ್ಮ,ನೀತಿ,ನ್ಯಾಯ,ತ್ಯಾಗ,ಬಲಿದಾನ,ಪರೋಪಕಾರ ಸಹಾಯ,ಸಹಕಾರ ಹಾಗೂ ಸಹಿಷ್ಣುತೆಗಳಂತಹ ಅನುಪಮ ಸದ್ಗುಣಗಳನ್ನು ಎತ್ತಿ ಸಾರುವ ಕತೆಗಳ ಮುಖಾಂತರ ಮಗುವನ್ನು ಬೆಳೆಸುವ ಕೆಲಸ ತಾಯಿಯದು.ಮಗು ದೊಡ್ಡದಾಗಿ ಪ್ರೌಢಾವಸ್ಥೆಗೆ ಕಾಲಿರಿಸಿದ ನಂತರ ಉನ್ನತ ಶಿಕ್ಷಣ,ವ್ಯಾಪಾರ,ಉದ್ಯೋಗಗಳನ್ನರಸಿ ಪಾಲಕರಿಂದ ದೂರಹೋಗುವದಕ್ಕೆ ತಾಲೀಮು ಪ್ರೌಢಾವಸ್ಥೆಯಲ್ಲಿ ಸಿಗುತ್ತದೆ.ಮಗುವು ಮುಂದೊಮ್ಮೆ ಆದರ್ಶ ನಾಗರಿಕನಾಗಿ ಹೊರಹೊಮ್ಮಲು ತಾಯಿ ನೀಡುವ ಸಂಸ್ಕಾರ ಅಮೂಲ್ಯವಾದುದು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,